

ಜನಪರ ಕಾಳಜಿಯ
ಗುರಮ್ಮ ಸಿದ್ದಾರೆಡ್ಡಿ





ಲೇಖಕರು :
ಸುನೀತಾ ದಾಡಗೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in





ಸರಳತೆ, ಸೌಜನ್ಯದ ಪ್ರತಿರೂಪದಂತಿರುವ **ಶ್ರೀಮತಿ ಸುನೀತಾ ದಾಡಗೆ** ನಮ್ಮ ಮಧ್ಯದ ಅಪರೂಪದ ಸಾಹಿತಿ. ಉದಯೋನ್ಮುಖ ಬರಹಗಾರರಾದ ಇವರು ಹೆತ್ತ ದಾಡಗೆ ಮನೆತನಕ್ಕೂ, ಕೊಟ್ಟ ಗೌಡರ ಪರಿವಾರಕ್ಕೂ ಹೂ, ಕೀರ್ತಿಕಳಶ ಹೊತ್ತುತರುತ್ತಿರುವವರು. ಇವರು ಮೂಲತಃ ಭಾತಂಬ್ರಾದ ಪ್ರತಿಷ್ಠಿತ ದಾಡಗೆ ಪರಿವಾರದ ಶ್ರೀಮತಿ ಮಲ್ಲಮ್ಮ ಶ್ರೀ ಶಂಕರರಾವ ದಾಡಗೆ ಅವರ ಮಗಳಾಗಿ 01.06.1975ರಂದು ಜನಿಸಿದ್ದಾರೆ. ಮುಂದೆ ಬಾಗಲಕೋಟ ಜಿಲ್ಲೆಯ ಧನ್ನೂರ ಗ್ರಾಮದ ಸುಸಂಸ್ಕೃತ ಗೌಡರ ಪರಿವಾರದ ಡಾ. ಶ್ರೀಧರ ಅವರ ಕೈ ಹಿಡಿದು ತುಂಬು ಸಂಸಾರ ನಡೆಸುತ್ತಿದ್ದಾರೆ. ಅವಿಭಕ್ತ ಕುಟುಂಬದ ಪ್ರೀತಿ ವಾತ್ಸಲ್ಯಗಳ ಆಸರೆಯಲ್ಲಿ ಬೆಳೆದಿರುವ ಇವರು ಬಾಲ್ಯದಿಂದಲೆ ಪ್ರತಿಭಾ ಸಂಪನ್ನರು. ಸೂಕ್ಷ್ಮಗ್ರಾಹಿಗಳು ಎಲ್ಲವನ್ನು ಪ್ರೀತಿ, ವಿಶ್ವಾಸ ಮತ್ತು ಶ್ರದ್ಧೆಯಿಂದ ಅವಲೋಕಿಸುತ್ತ ಬೆಳೆದವರು. ಆಡಾಡ್ತಾ ಬೆಳೆದು, ಓದಿನಲ್ಲಿ ಸೈ ಎನಿಸಿಕೊಂಡು. ಕನ್ನಡ ಮತ್ತು ಶಿಕ್ಷಣಶಾಸ್ತ್ರದಲ್ಲಿ ಎಂ.ಎ. ಪದವಿಪಡೆದವರು. ಸದ್ಯ ಸರ್ಕಾರಿ ಪ್ರೌಢ ಶಾಲೆ, ಕೋನ ಮೇಳಕುಂದಾದಲ್ಲಿ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಾಡಿನ ಉತ್ತಮ ಸಂಪನ್ಮೂಲ ವ್ಯಕ್ತಿಗಳಲ್ಲೊಬ್ಬರಾದ ಇವರ ಕಾಯಕ ನಿಷ್ಠೆಯ ಕಾರಣಕ್ಕಾಗಿ ಜಿಲ್ಲಾ ಮತ್ತು ರಾಜ್ಯ ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾದವರು.

ವೃತ್ತಿಯಿಂದ ಶಿಕ್ಷರಾದರೂ ಪ್ರವೃತ್ತಿಯಿಂದ ಸಾಹಿತಿಗಳಾದ ಇವರು "ಕನ್ನಡ ವ್ಯಾಕರಣ ಪ್ರವೇಶಿಕೆ" ಹಾಗೂ "ಈ ದಿನ ಸುದಿನ" ಕೃತಿಗಳನ್ನು ಪ್ರಕಟಿಸಿ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದವರು. ಇದುವರೆಗೂ ಇವರು ನೂರಾರು, ಕವನ, ಕಥೆ, ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಪ್ರಕಟವಾಗಿವೆ. ಇನ್ನೂ ಗ್ರಂಥ ರೂಪದಲ್ಲಿ ಬರಬೇಕಾದ ವಿಷಯ ಹೆಚ್ಚಾಗಿದೆ. ಬೀದರ ಜಿಲ್ಲೆಯ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಕವನ, ಕಥೆ, ಪ್ರಬಂಧಗಳನ್ನು ಪ್ರಕಟಿಸುವದರ ಮೂಲಕ ಸಾಹಿತ್ಯ ಲೋಕ ಪ್ರವೇಶಿಸಿದವರೇ ಹೆಚ್ಚಾಗಿದ್ದಾರೆ. ಆದರೆ ಸುನೀತಾ 'ಕನ್ನಡ ವ್ಯಾಕರಣ ಪ್ರವೇಶಿಕೆ'ಯ ಮೂಲಕ ತಮಗಿರುವ ಶಾಸ್ತ್ರ ಪರಿಣಿತಿಯನ್ನು ಹೊರಹಾಕಿದ್ದಾರೆ. ಇದೀಗ ಗುರಮ್ಮ ಸಿದ್ದಾರೆಡ್ಡಿಯವ ಜೀವನ ಸಾಧನೆ ಕೇಂದ್ರಿತ ಜನಪರ ಕಾಳಜಿಯ ಗುರಮ್ಮ ಸಿದ್ದಾರೆಡ್ಡಿ ಜೀವನ ಚರಿತ್ರೆಯನ್ನು ಓದುಗ ಸಹೃದಯರ ಕೈಗಿಡುತ್ತಿದ್ದಾರೆ. ಇದು ಮಹತ್ವಕಾಂಕ್ಷೆಯ ಕೃತಿಯಾಗಿದ್ದು ಒಬ್ಬ ಮಹಿಳೆ ಏನೆಲ್ಲ ಸಾಧಿಸ ಬಹುದು ಎನ್ನುವುದಕ್ಕೆ ಮಾದರಿ ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ.

ತಾಲ್ಲೂಕು "ಬೆಸ್ಟ್ ಕ್ಯಾಪ್ಟನ್", ಚಿತ್ರದುರ್ಗ ಮುರುಘ ಮಠದ "ಶಿಕ್ಷಕ ರತ್ನ ಪ್ರಶಸ್ತಿ", ಸಿರಿಗನ್ನಡ ಪ್ರತಿಷ್ಠಾನದ "ಕನ್ನಡ ರತ್ನ ಪ್ರಶಸ್ತಿ", ಶರಣ ಸಂಸ್ಕೃತಿ ಉತ್ಸವದ "ಆದರ್ಶ ದಂಪತಿಗಳು ಪ್ರಶಸ್ತಿ", ಬಸವ ಮುಕ್ತಿ ಮಂದಿರದ "ಸೃಜನಶೀಲ ಬರಹಗಾರ್ತಿ ಪ್ರಶಸ್ತಿ", ಎಂ.ಜಿ. ದೇಶಪಾಂಡೆ ಪ್ರತಿಷ್ಠಾನದ "ಸೃಜನಶೀಲ ರತ್ನ ಪ್ರಶಸ್ತಿ" "ಮಕ್ಕಳ ಶಿಲ್ಪಿ" ಸೇರಿದಂತೆ ಅನೇಕ ಗೌರವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಇವರಿಂದ ಇನ್ನಷ್ಟು ಕೃತಿಗಳು ಹೊರಬರಲೆಂದು ಶುಭ ಹಾರೈಸುವೆ.

– ವಿದ್ಯಾವತಿ ಬಲ್ಲೂರ
ಪ್ರಾಚಾರ್ಯರು
ಎಮ್.ಎಸ್. ಮುದ್ದಣ್ಣ ಡಿ.ಇಡಿ.ಕಾಲೇಜು, ಬೀದರ.

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಜನಪರ ಕಾಳಜಿಯ

ಗುರಮ್ಮ ಸಿದ್ದಾರೆಡ್ಡಿ


ಲೇಖಕರು
ಸುನೀತಾ ದಾಡಗೆ (ಗೌಡರ್)

ಪ್ರಕಾಶಕರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೦

ಜನಪರ ಕಾಳಜಿಯ ಗುರಮ್ಮ ಸಿದ್ಧಾರಡ್ಡಿ
ಲೇಖಕರು: **ಸುನೀತಾ ದಾಡಗೆ (ಗೌಡರ್)**, "ಗೌಡರ್ ನಿಲಯ" ಪ್ಲಾಟ್ ನಂ.
೬೭ # ೧೮-೫-೨೪೪/೩ ಡಿಸಿಸಿ ಬ್ಯಾಂಕ್
ಎಂಪ್ಲಾಯಿಸ್ ಲೇಔಟ್, ಮಾಧವನಗರ, ಬೀದರ-೫೮೫೪೦೧
ಸಂಚಾರಿ : ೯೪೪೮೭೪೬೭೮೦; ೮೦೭೩೧೫೩೦೨೩
ಪ್ರಕಾಶಕರು : **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ:
೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ : ೨೦೨೦
ಹಕ್ಕುಗಳು : ಪ್ರಕಾಶಕರು
ಪುಟಗಳು : ೧೦೨+xvi=೧೧೮
ಬೆಲೆ : ೧೦೦/-
ಅಕ್ಷರ ಜೋಡಣೆ : ವಚನಚೇತನ ಕಂಪ್ಯೂಟರ್ಸ್, ಬೀದರ.
ಮುಖಪುಟ ವಿನ್ಯಾಸ : ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರು : ವಿಶ್ವಾಸ ಪ್ರೆಸ್ ಬೆಂಗಳೂರು
ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. –ಪ್ರಕಾಶಕರು

ಪುಸ್ತಕ ಪ್ರಕಟಣೆ ಸಲಹಾ ಸಮಿತಿ

ಅರ್ಪಣೆ



ಕನ್ನಡ ನಾಡು ನುಡಿಗೆ ಜೀವನವನ್ನರ್ಪಿಸಿದ
ನಡೆದಾಡುವ ದೇವರಾದ
ಪೂಜ್ಯ ಡಾ. ಮ.ಘ.ಚ. ಚನ್ನಬಸವ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ

ಸುನೀತಾ ದಾಡಗೆ (ಗೌಡರ್)

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು

ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು

ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ

ಡಾ.ಬಸವರಾಜ ಬಲ್ಲೂರ

ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು

ಟಿ.ಎಂ.ಮಚ್ಚೆ

ಉಪಾಧ್ಯಕ್ಷರು

ಜಯದೇವಿ ಯದಲಾಪೂರೆ

ವಿಜಯಕುಮಾರ ಗೌರೆ,

ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ

ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ

ಮೇನಕಾ ಪಾಟೀಲ

ಪರಿಶಿಷ್ಟ ಜಾತಿ ಪ್ರತಿನಿಧಿ

ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ

ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ

ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ

ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು

ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು

ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ

ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ

ಪ್ರೊ. ಶಿವಕುಮಾರ ಕಟ್ಟೆ

ವಸಂತ ಹುನಸನಾಳೆ,

ಅಧ್ಯಕ್ಷರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು

ಎಂ. ಎಸ್. ಮನೋಹರ, ಬೀದರ

ಜಗನ್ನಾಥ ಮೂಲಗೆ, ಔರಾದ

ಸಚ್ಚಿದಾನಂದ ಮಠಪತಿ, ಹುಮನಾಬಾದ

ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ

ಶಶಿಧರ ಕೊಸಂಬೆ ಭಾಲ್ಕಿ

ಪ್ರಶಾಂತ ಮಠಪತಿ ಕಮಲನಗರ

ಡಾ. ಶಿವಲೀಲಾ ಮಠಪತಿ, ಹುಲಸೂರ

ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಸಂಚಾಲಕರು
ಶಿವಶಂಕರ ಟೋಕರೆ

ಗೌರವ ಸಲಹೆಗಾರರು
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಝೂಕೀರ ಹುಸೇನ್
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ಎಸ್.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಪ್ರೊ.ರಾಜಕುಮಾರ ಅಲ್ಲೂರೆ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಕನ್ನಡ ಸಾಹಿತ್ಯ ಪರಿಷತ್ತಿನ ಬೀದರ್ ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ "ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ "ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಅಪರೂಪದ ಸಾಹಿತಿಗಳಾದ **ಶ್ರೀಮತಿ ಸುನಿತ ದಾಡಗೆ (ಗೌಡರ್)** ಅವರು ಬರೆದ **ಕನಪರ ಕಾಳಜಿಯ ಗುರಮ್ಮ ಸಿದ್ದರೆಡ್ಡಿ ಜೀವನ ಸಾಧನೆ** ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. **ಶ್ರೀಮತಿ ಗುರಮ್ಮ ಸಿದ್ದರೆಡ್ಡಿ ಯವರು ಬೀದರನಲ್ಲಿ ಬಹುದೊಡ್ಡ ಸಾಮಾಜೋರಾಜಕೀಯ ಕ್ರಾಂತಿಗೈದವರು. ಸಮಸಮಾಜ ರೂಪಿಸಬೇಕೆಂಬ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ. ಸಿದ್ಧಾರೆಡ್ಡಿ ಫೌಂಡೇಷನ್ ಮೂಲಕ** ಅನೇಕರ ಬದುಕಿಗೆ ಬೆಳಕಾಗಿದ್ದಾರೆ. ಜೊತೆಗೆ ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಶ್ರೀಮತಿ ಗುರಮ್ಮ ಸಿದ್ದರೆಡ್ಡಿ** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತಲ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತಿಳಿ ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೇನ ಸಾಂಸ್ಕೃತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ. ಬಸವರಾಜ ಬಲ್ಲೂರ

ಮನದ ಮಾತು

ಮಹಿಳೆ ಮನಸು ಮಾಡಿದರೆ ಏನೆಲ್ಲಾ ಸಾಧಿಸಬಹುದು. ಇನ್ನೊಬ್ಬರಿಗೆ ಆದರ್ಶಳಾಗಿಯೂ ಇರಬಹುದು. ಅದಕ್ಕೆ ಹಣದ ಕೊರತೆಯಾಗಲಿ, ವಯಸ್ಸಿನ ನಿರ್ಬಂಧವಾಗಲಿ, ಮದುವೆ, ಮಕ್ಕಳು ಸಂಸಾರದ ಜಂಜಾಟಗಳು ಅಡ್ಡ ಬರುವುದಿಲ್ಲ. ಮನಸ್ಸಿದ್ದರೆ ಮಾರ್ಗ ತಾನಾಗಿಯೇ ದೊರೆಯುತ್ತದೆ.

ಮಹಿಳೆ ಸಮಾಜದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಬೇಕಾದರೆ ಮೊದಲು ಸಾಕ್ಷರಳಾಗಬೇಕು. ಶಿಕ್ಷಣ ನಮ್ಮನ್ನು ಉನ್ನತ ಸ್ಥಾನಕ್ಕೆ ಕರೆದುಕೊಂಡು ಹೋಗುತ್ತದೆ. ಅದರಲ್ಲಿ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಮಗುವಿಗೆ ಮನೆಯೆಂಬ ಮೊದಲ ಪಾಠಶಾಲೆಯಲ್ಲಿ ತಾಯಿಯೇ ಮೊದಲ ಗುರುವಾಗುತ್ತಾಳೆ. ಹೀಗಾಗಿ ಆಕೆಗೆ ಶಿಕ್ಷಣ ಮುಖ್ಯ. ಶಿಕ್ಷಿತ ಸಮಾಜ ಅಭಿವೃದ್ಧಿಯ ಸಂಕೇತ, ಸಾಮಾಜಿಕ ಪರಿವರ್ತನೆ ದೇಶದ ಅಭಿವೃದ್ಧಿಗೆ ಶಿಕ್ಷಣ ಮಹತ್ವದ್ದಾಗಿದೆ.

ಮಹಿಳೆ ಸಶಕ್ತಳಾಗಬೇಕಾದರೆ ಆರ್ಥಿಕ ಸ್ವಾವಲಂಬಿಯಾಗಬೇಕು. ಈ ನಿಟ್ಟಿನಲ್ಲಿ ಆಕೆಗೆ ತರಬೇತಿಗಳಾಗಬೇಕು. ದುಡಿದು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಬೇಕು. "ಬಡತನದಲ್ಲಿ ಹುಟ್ಟುವುದು ತಪ್ಪಿಲ್ಲ, ಬಡವರಾಗಿಯೇ ಸಾಯುವುದು ತಪ್ಪು" ಬಡತನದ ಬವಣೆಯಿಂದ ಮುಕ್ತವಾಗಿ ಸುಖಿ ಜೀವನ ನಡೆಯುವಂತಾಗಲು ದುಡಿಮೆ ಮಾಡಬೇಕು. ಆಕೆಯ ಶ್ರಮಕ್ಕೆ ತಕ್ಕ ಕೂಲಿ ಸಿಗಬೇಕು. ಎಲ್ಲಿ ಶೋಷಿಸಿಕೊಳ್ಳುವವರು ಇರುತ್ತಾರೋ, ಅಲ್ಲಿ ಶೋಷಣೆ ಮಾಡುವವರು ಇರುತ್ತಾರೆ.

ಮಹಿಳೆ ತನ್ನ ಆರೋಗ್ಯ ಮತ್ತು ವೈಯಕ್ತಿಕ ಸ್ವಚ್ಛತೆಯ ಕಡೆಗೆ ಗಮನ ಕೊಡಬೇಕು. ಆರೋಗ್ಯವೇ ಭಾಗ್ಯ. ಆರೋಗ್ಯವೆಂದರೆ ಕೇವಲ ದೈಹಿಕ ಆರೋಗ್ಯವಷ್ಟೇ ಅಲ್ಲ. ಮಾನಸಿಕವಾಗಿಯೂ ಆರೋಗ್ಯವಂತಳಾಗಿರಬೇಕು. ಅಂತಹ ಕುಟುಂಬ ಆರೋಗ್ಯದಿಂದಿರುತ್ತದೆ. ಇನ್ನೂ ಮಹಿಳೆ ರಾಜಕೀಯವಾಗಿ ಮುಂದೆ ಬರಬೇಕು. ಬಹುಮುಖ ಪ್ರತಿಭೆಯುಳ್ಳ ಮಹಿಳೆಗೆ ಅವಕಾಶ ಸಿಗಬೇಕು. ಮಹಿಳಾ ಮೀಸಲಾತಿಯ ಹೆಸರಿನಲ್ಲಿ ಗಂಡಸರೇ ಅಧಿಕಾರ ಮಾಡುವುದು ತಪ್ಪಬೇಕು. ಸಮಾಜದ ಅಭಿವೃದ್ಧಿಗೆ ಒಳ್ಳೆಯ ರಾಜಕೀಯ ನಾಯಕತ್ವ ಅಗತ್ಯ. ಆ ಶಕ್ತಿ ಸಾಮರ್ಥ್ಯ ಆಕೆಯಲ್ಲಿದೆ. ತೊಟ್ಟಿಲು ತೂಗುವ ಕೈ ದೇಶವನ್ನೇ ತೂಗುತ್ತಿದೆ" ಎಂಬುದು ಸತ್ಯ.

ಸಮಾಜದಲ್ಲಿ ಮಹಿಳೆ ಶೋಷಣೆ, ಅನ್ಯಾಯ, ದೌರ್ಜನ್ಯಕ್ಕೆ ಒಳಗಾಗಿರುವ ಅಬಲೆಯರಿಗೆ ರಕ್ಷಣೆಗಾಗಿ ಅನೇಕ ಸಂಘ ಸಂಸ್ಥೆಗಳು ಹುಟ್ಟುಕೊಂಡು ಶ್ಲಾಘನೀಯ ಕಾರ್ಯ ಮಾಡುತ್ತಿವೆ. ಅಂತಹವುಗಳಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳವು ಒಂದು. ಅದರ ಅಧ್ಯಕ್ಷರಾದ ಗುರಮ್ಮಾ ಸಿದ್ದಾರೆಡ್ಡಿ ಒಬ್ಬ ಯಶಸ್ವಿ ಮಹಿಳೆ.

ಅವರೊಬ್ಬ ಬಹುಮುಖ ಪ್ರತಿಭೆಯುಳ್ಳವರು. ಮಹಿಳಾ ಕುಲಕ್ಕೆ ಮಾದರಿಯಾಗಿದ್ದಾರೆ. ಅವರ ಸ್ವಭಾವ ನಡೆ–ನುಡಿ ಅವರು ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆ, ಮಹಿಳಾಪರ ಕಾಳಜಿಗಳು ನನ್ನ ಮೇಲೆ ಪ್ರಭಾವ ಬೀರಿವೆ. ಅವರೊಬ್ಬ ಆದರ್ಶರು ಅನುಸರಣೀಯರು ಆಗಿ ಕಾಣಿಸಿಕೊಳ್ಳುತ್ತಾರೆ. ಇವರ ಸಹಾಯವನ್ನು ಪಡೆದ ಅನೇಕರ ಜೀವನ ಬಂಗಾರವಾಗಿದೆ. ಹೀಗೆ ಮಹಿಳಾ ಚಿಂತಕಿಯರಿಗೆ ಈ ಚರಿತ್ರೆಯೊಂದು ದಾರಿದೀಪವಾಗಲೆಂದು ಅವರ ಬಗ್ಗೆ ಇದ್ದ ನನ್ನ ಭಾವನೆಗಳನ್ನು, ಅವರ ಕಾರ್ಯ ವೈಖರಿಯನ್ನು ಅಕ್ಷರೂಪಕ್ಕಿಳಿಸಲು ಮುಂದಾಗಿದ್ದೇನೆ. ಎಲ್ಲರಿಗೂ ಸದುಪಯೋಗವಾಗಲೆಂದು ಬಯಸುತ್ತೇನೆ.

ಶತಮಾನಗಳು ಕಳೆದರೂ ಹೆಣ್ಣಿನ ಶೋಷಣೆ ಕಡಿಮೆಯಾಗಿಲ್ಲ. ಇನ್ನೂ ಹೆಚ್ಚಾಗುತ್ತಿದೆ. ಹೊರತು ಅದು ಕ್ಷೀಣಿಸುವ ಲಕ್ಷಣಗಳು ಕಾಣಸಿಗುತ್ತಿಲ್ಲ. ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗುತ್ತಿರುವದು ಇದಕ್ಕೆ ನಿದರ್ಶನ. ಕೆಲವು ಘೋರ ಘಟನೆಗಳನ್ನು ಕಂಡು ನೊಂದ ಕ್ಷಣಗಳು, ಒಂದು ರೀತಿ ಮಾನಸಿಕ ತುಮುಲವನ್ನೇ ಹೆಚ್ಚಿಸಿವೆ. ಇಂಥ ನೊಂದ ಮನಸ್ಸಿಗೆ ಸಾಂತ್ವನ ನೀಡುತ್ತಿದ್ದದು, ಗುರಮ್ಮನವರು ಅತ್ಯಾಚಾರಕ್ಕೊಳಗಾದ ಬಾಲಕಿಯರನ್ನು ಸಂರಕ್ಷಿಸುತ್ತಿರುವದು, ಅವರಿಗೆ ದಾರಿ ತೋರುತ್ತಿರುವದು, ಅವರ ವಿಚಾರ ಧಾರೆಗಳು, ನನ್ನ ಈ ಕೃತಿಯ ರಚನೆಗೆ ಸ್ಫೂರ್ತಿ ನೀಡಿ ವಿಷಯ ಸಂಗ್ರಹಣೆಗೆ ಸಹಕಾರವಾಯಿತು.

ಕಷ್ಟ ಸುಖಗಳೆರಡು ಸಮಾನವಾಗಿ ಸ್ವೀಕರಿಸುವ ಮನೋಭಾವವುಳ್ಳ ಶ್ರೀಮತಿ ಗುರಮ್ಮನವರು ಪರಸ್ಪರ ನಂಬಿಕೆ, ಸಾಮೂಹಿಕ ನಿರ್ಧಾರದಿಂದಾಗಿ ನಾವು ಭಾವನಾತ್ಮಕವಾಗಿ ಗಟ್ಟಿಯಾಗುವುದಲ್ಲದೆ ಇಡೀ ಕುಟುಂಬವನ್ನು ಸಮರ್ಥವಾಗಿ ಮುನ್ನಡೆಸಬಹುದೆಂಬ ಗಟ್ಟಿ ನಿಲುವಿನ ಇವರು ರಾಜಕೀಯ ಹಾಗೂ ಸಾಮಾಜಿಕ ಸೇವೆಗಳೆರಡೂ ರಂಗದಲ್ಲೂ ಸೈ ಎನಿಸಿಕೊಂಡವರು. ಸಂಘಟನಾ ಚತುರತೆ, ಇವರ ಬೆಳವಣಿಗೆಯ ಬಂಡವಾಳವಾದವು. ಮಹಿಳಾ ಸ್ವಸಹಾಯ ಸಂಘಗಳ ಬೆಳವಣಿಗೆಯಲ್ಲಿ ಹಲವು ಸಂಸ್ಥೆಗಳನ್ನು ಸ್ಥಾಪಿಸಿ ಮುನ್ನಡೆಸಿದ್ದಾರೆ. ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟದ ವರೆಗೆ ಮಹಿಳಾ ಕಾಂಗ್ರೆಸ್‌ನ ವಿವಿಧ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದು ಅವರ ಚತುರತೆಗೆ ಹಿಡಿದ ಕನ್ನಡಿಯಾಗಿದೆ.

'ಮನೆಗೆದ್ದು ಮಾರುಗೆಲ್ಲು' ಎನ್ನುವಂತೆ ಯಾವುದೇ ವಿಷಯದ ನಿರ್ಧಾರ ತೆಗೆದುಕೊಳ್ಳುವುದಿದ್ದರೆ ಪತಿಯೊಂದಿಗೆ ಸೇರಿ ಚರ್ಚಿಸಿ ಅದರ ಪೂರ್ವಾಪರದ ಬಗ್ಗೆ ಯೋಚಿಸುತ್ತಿದ್ದರು. ಹಾಗಾಗಿ ಜೀವನದಲ್ಲಿ ಬಂದಿರುವ ಒತ್ತಡಗಳನ್ನು ಮೀರಿ ನಿಂತಿದ್ದಾರೆ. ಪರಸ್ಪರರ ನಡುವೆ ಅಪನಂಬಿಕೆ ಕಾಣಿಸಿಕೊಂಡಾಗ ಅದನ್ನು ಸಮಾಧಾನದಿಂದ ಪರಿಹರಿಸಲು ಪ್ರಯತ್ನಿಸಿದ್ದಾರೆಯೇ ಹೊರತು ಅದನ್ನು

ಸಮಸ್ಯೆಯಾಗಲು ಬಿಟ್ಟಿಲ್ಲ. ಹೀಗಾಗಿ ನಮ್ಮ ದಾಂಪತ್ಯ ಜೀವನದಲ್ಲಿ ಅಪನಂಬಿಕೆಗೆ ಅವಕಾಶವೇ ಸಿಕ್ಕಿಲ್ಲ ಎನ್ನುತ್ತಾರೆ. ಇಂಥವರ ಜೀವನದ ಬಗ್ಗೆ ಬರೆಯುವ ಸದಾವಕಾಶ ಸಿಕ್ಕಿದ್ದಕ್ಕೆ ಹರ್ಷವೆನಿಸುತ್ತದೆ. ಬೀದರಿನ ಗಣ್ಯವ್ಯಕ್ತಿಗಳ ಬಗ್ಗೆ ಪುಸ್ತಕಗಳನ್ನು ಹೊರತರುವ ಸಂದರ್ಭದಲ್ಲಿ ನನಗೆ ಇಂತಹ ಅವಕಾಶ ಮಾಡಿಕೊಟ್ಟಿರುವ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನ್ನಶೆಟ್ಟಿ ಮತ್ತು ಅವರ ಬಳಗಕ್ಕೆಲ್ಲ ಆಭಾರಿಯಾಗಿದ್ದೇನೆ.

ಶ್ರೀಮತಿ ಗುರಮ್ಮನವರ ಜೀವನ ಚರಿತ್ರೆಯನ್ನು ವಿಭಿನ್ನವಾಗಿ ನೈಜ ಸ್ವರೂಪದಲ್ಲಿ ನೀಡಬೇಕೆಂಬ ಹಂಬಲ ನನ್ನೊಳಗೆ ಜನ್ಮ ತಾಳಿದ್ದು ಹತ್ತು ವರ್ಷಗಳ ಹಿಂದೆ. ಅವರ ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಸಂಗ್ರಹಿಸಲು ಪ್ರಾರಂಭಿಸಿ ಅಂತಿಮ ರೂಪಕ್ಕೆ ತಂದು ನಿಲ್ಲಿಸಿದ್ದೇನೆ. ಅವರ ಬಗೆಗಿನ ನನ್ನ ಅಭಿಮಾನದ ಜೊತೆ ಅನೇಕರ ಪ್ರೋತ್ಸಾಹ ಅಮೂಲ್ಯವಾದ ಸಲಹೆಗಳು ಅಡಗಿವೆ.

ವಿಷಯ ಸಂಗ್ರಹಣೆ, ಅದರ ಕೃತಿ ತಯಾರಿಕೆಯಲ್ಲಿ ಸಹಾಯ ಮಾಡಿದ ಆತ್ಮೀಯ ಸಹೋದರಿಯಾದ ಶ್ರೀಮತಿ ಪುಣ್ಯವತಿ ವಿಸಾಜಿಯವರಿಗೆ ವಿಶೇಷವಾದ ಅಭಿನಂದನೆಗಳು. ನನಗೆ ಗುರಮ್ಮನವರಿಗಿಂತ ಅವರ ಪತಿ ಶ್ರೀ ಡಾ. ಎಸ್.ಎಸ್. ಸಿದ್ದಾರೆಡ್ಡಿಯವರು ಆತ್ಮೀಯರಾಗಿದ್ದರು. ಈ ಕಾರ್ಯಕ್ಕೆ ನನಗೆ ಸಹಾಯ ಮಾಡಿದ ನನ್ನ ಪತಿ ಡಾ. ಶ್ರೀಧರ ಗೌಡರಿಗೂ ಹಾಗೂ ಮಕ್ಕಳಾದ ಸತ್ಯಂ ಮತ್ತು ಶ್ರೇಯಾ ಇವರಿಗೆ ಮುದ್ದುಗಳು.

ಕೃತಿಯ ಕೇಂದ್ರ ಬಿಂದುವಾಗಿರುವ ಮಾತೃಸ್ವರೂಪಿ ಗುರಮ್ಮ ಸಿದ್ದಾರೆಡ್ಡಿಯವರು ಸಂದರ್ಶನಕ್ಕೆ ಸ್ಪಂದಿಸಿ, ಸಹಕರಿಸಿದಕ್ಕೆ ನನ್ನ ಕೃತಜ್ಞತೆಗಳು. ಈ ಕೃತಿ ಹೊರತರಲು ಮುಂದೆ ಬಂದ ಪ್ರಕಾಶಕರಿಗೂ ನಾನು ಚಿರಋಣಿ. ಅಂದವಾಗಿ ಹಾಗೂ ಅಚ್ಚುಕಟ್ಟಾಗಿ ಅಕ್ಷರ ಜೋಡಣೆಯನ್ನು ಮಾಡಿಕೊಟ್ಟ ಸಹೋದರಿ ಶ್ರೀಮತಿ ಸಂಗೀತಾ ಅವರಿಗೂ ಹಾಗೂ ಇತರರಿಗೂ ವಂದನೆಗಳು.

– ಶ್ರೀಮತಿ ಸುನೀತಾ ದಾಡಗೆ

ಪರಿವಿಡಿ

ಹೆಣ್ಣು

ಅವಳ ಹೆಸರು ಹೇಳಬೇಡ
ಊರನರಸಿ ದಣಿಯಬೇಡ
ಹೆಣ್ಣೇ ಅವಳ ಹೊತ್ತ ಹೆಸರು
ಹೆಣ್ಣೇ ಅವಳು ಹೆತ್ತ ಹೆಸರು
– ಕಡೆಂಗೋಡ್ಲು ಶಂಕರಭಟ್ಟ

ಸ್ತ್ರೀ

ಆಕಾಶದ ನೀಲಿನಲ್ಲಿ
ಚಂದ್ರ ತಾರೆ ತೊಟ್ಟಿಲಲ್ಲಿ
ಬೆಳಕನಿಟ್ಟು ತೂಗಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೇ ಸಾಕೆ

ಹಸಿರ ಉಟ್ಟ ಬೆಟ್ಟಗಳಲಿ
ಮೊಲೆ ಹಾಲಿನ ಹೊಳೆಯ ಇಳಿಸಿ
ಬಯಲು ಹಸಿರ ನಗಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೆ ಸಾಕೆ

ಮರಗಿಡ ಹೂ ಮುಂಗುರುಳನು
ತಂಗಾಳಿಯ ಬೆರಳೂ ಸವರಿ
ಹಕ್ಕಿ ಗಿಲಕಿ ಹಿಡಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೆ ಸಾಕೆ

ಮನೆಮನೆಯಲಿ ದೀಪ ಮಂಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ
ಸ್ತ್ರೀ ಅಂದರೆ ಅಷ್ಟೆ ಸಾಕೆ

– ಡಾ. ಜಿ.ಎಸ್.ಎಸ್.

ಹಿನ್ನೆಲೆ:

ಸ್ತ್ರೀ ಅಥವಾ ಮಹಿಳೆ ಪದವು ಸಂಸ್ಕೃತ ಪದವಾಗಿದ್ದು ಇದಕ್ಕೆ. ಕನ್ನಡದಲ್ಲಿ 'ಹೆಣ್ಣು' ಎಂಬ ಅರ್ಥವಿದೆ. ವಯಸ್ಕ ಹೆಣ್ಣನ್ನು ಸೂಚಿಸುವ, ಪುರುಷ ಪದಕ್ಕೆ ಸಮಾನ ಪದವಾಗಿದೆ.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀಗೆ ಅವಳದೇ ಆದ ಗೌರವ, ಸ್ಥಾನಮಾನಗಳಿವೆ. ಸ್ತ್ರೀ ಅವಿನಾಶಿ, ಸಂಜೀವಿನಿ, ಹೆಣ್ಣು ವಿಶಿಷ್ಟ ಶಕ್ತಿಗಳ ಸಂಗಮ. ಮಮತೆ, ಕರುಣೆ, ವಾತ್ಸಲ್ಯ, ಅಕ್ಕರೆ ಮತ್ತು ಭೂಮಿ ತೂಕದ ತಾಳ್ಮೆಯುಳ್ಳ ಸ್ತ್ರೀ ಒಂದು ಪ್ರಬಲ ಶಕ್ತಿ. ಆದರೆ, ಸ್ತ್ರೀಯರಲ್ಲಿರುವ ಈ ಅದಮ್ಯ ಶಕ್ತಿಯನ್ನು ಅರಿಯದ ಪುರುಷ ಪ್ರಧಾನ ಸಮಾಜವು ಆಕೆಗೆ ನಾಲ್ಕು ಗೋಡೆಯ ಮಧ್ಯದಲ್ಲಿರಿಸಿ,

ಕಾಲ ಕಳೆಯುವ ದಿನಗಳಿಂದ ಮುಕ್ತಗೊಳಿಸಿದ ೧೨ನೇ ಶತಮಾನವು ಜಾಗತಿಕ ಇತಿಹಾಸದಲ್ಲಿ ಮರೆಯುವಂತಿಲ್ಲ.

ಪ್ರತಿಯೊಬ್ಬ ಹೆಣ್ಣುಮಗಳು ಪ್ರಕೃತಿ ಸಹಜವಾಗಿ ರಜೋಕ್ರಿಯೆಗೆ ಒಳಗಾಗುತ್ತಾಳೆ. ಇದನ್ನು ಕೆಲವರು ಮೈಲಿಗೆ ಎಂದು ಹೆಣ್ಣನ್ನು ತಮ್ಮ ಕೆಲಸ ಕಾರ್ಯಗಳಿಗೆ ತೊಡುಕು ಎಂದು ಭಾವಿಸುತ್ತಿದ್ದರು. ಆಕೆಗೆ ದೇವಾಲಯ ಪ್ರವೇಶ ನಿಷೇಧ, ಸಾಮಾಜಿಕ ಶುಭ ಕಾರ್ಯಗಳಿದ್ದಾಗ ಅವಳ ಪ್ರವೇಶವನ್ನು ನಿರ್ಬಂಧಿಸುತ್ತಿದ್ದರು. ಇಂತಹ ಹತ್ತಾರು ಬಂಧನಗಳಿಂದ ಮುಕ್ತಗೊಳಿಸಿ ಹೆಣ್ಣನ್ನು ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ದೈವೀಕರಿಸಿದರು. ಆ ಮೂಲಕ ಹೆಣ್ಣಿನ ಬಾಹ್ಯ, ಶಾರೀರಿಕ ರಚನೆಯಿಂದ ಭೇದ ಮಾಡದೇ ಸ್ತ್ರೀ ಮತ್ತು ಪುರುಷರ ಒಳಗಿರುವ ಆತ್ಮ ಒಂದೇ ಎಂದು ಹೇಳುವ ಮೂಲಕ ಸ್ತ್ರೀಯರಿಗೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿ ಸ್ವಶಕ್ತಿಯಿಂದ ಬೆಳೆಯಲು ಅವಕಾಶ ಮಾಡಿಕೊಟ್ಟಿದ್ದರ ಪರಿಣಾಮ ೩೩ ಜನ ಶಿವಶರಣೆಯರು ವಚನಗಳನ್ನು (ಸಾಹಿತ್ಯವನ್ನು) ರಚನೆ ಮಾಡಿದರು. ಪುರುಷನ ಎತ್ತರಕ್ಕೇರಿದ್ದರು. ಕುಟುಂಬದಲ್ಲಿ ಸರಿ–ತಪ್ಪುಗಳನ್ನು ನಿರ್ಣಯಿಸುವಷ್ಟು, ಎಚ್ಚರಿಸುವಷ್ಟು ಮುಂದುವರೆದದ್ದು ಕಾಣುತ್ತೇವೆ. "ಕಾಯಕನಿಂದಿತ್ತು ಹೋಗು ಎನ್ನಾಳ್ದನೇ" ಎನ್ನುವುದಾಗಲಿ, "ಈಸಕ್ಕಿಯಾಸೆ ನಿನಗೇಕೆ ಈಶ್ವರನೊಪ್ಪ" ಎಂದು ಎಚ್ಚರಿಸುವದಾಗಲಿ, ತನ್ನದಲ್ಲದ ವಸ್ತು ಕಸದ ಸಮಾನವೆನ್ನುವಷ್ಟರ ಮಟ್ಟಿಗೆ ಆಧ್ಯಾತ್ಮದ ಎತ್ತರಕ್ಕೇರಿದರು.

ಮಹಿಳೆ ಕೃಷಿ ವ್ಯವಸ್ಥೆಯ ಆದ್ಯಪ್ರವರ್ತಕಳು, ಸಾಮಾಜಿಕ ಬದಲಾವಣೆಯ ಹರಿಕಾರಳು ಎನ್ನುವ ಮಾತು ಸತ್ಯವಾದುದು. ಆದರೆ ಪುರುಷಪ್ರಧಾನ ವ್ಯವಸ್ಥೆಯ ಪರಿಪಾಲಕರು ಆಕೆಯನ್ನು ಬಹುತೇಕ ಅವಕಾಶಗಳಿಂದ ವಂಚಿತಳನ್ನಾಗಿ ಮಾಡಿದರು. ಇದರಿಂದ ಆಕೆಗಾಗುವ ವೈಯಕ್ತಿಕ ನಷ್ಟಕ್ಕಿಂತ ಸಮಾಜಕ್ಕೆ, ಧಾರ್ಮಿಕತೆಗೆ, ಆರ್ಥಿಕತೆಗೆ, ರಾಜಕಾರಣಕ್ಕೆ ಅತಿ ಹೆಚ್ಚು ನಷ್ಟವಾಯಿತು. ಇದನ್ನು ಅರ್ಥ

ಮಾಡಿಕೊಂಡಿರುವ ಕೆಲವು ಸಮಾಜ ಚಿಂತಕರು ಮಹಿಳೆಯನ್ನು ಅಪಾರವಾಗಿ ಗೌರವಿಸಿದರು. ಸಾಮಾಜಿಕ ಮಾನ ಸನ್ಮಾನಗಳಿಗೆ ಬಾಧ್ಯಸ್ಥಳೆಂದು ಪ್ರತಿಪಾದಿಸಿದರು.

ಪ್ರತಿಯೊಬ್ಬರಲ್ಲಿಯೂ ಒಂದು ಅದಮ್ಯ ಚೇತನವಿರುತ್ತದೆ. ಅದು ಸೂಕ್ತ ಕಾಲಾವಕಾಶಕ್ಕಾಗಿ ಕಾಯುತ್ತಿರುತ್ತದೆ. ಅಂತಹ ಸಮಯ ಸಂದರ್ಭ ಸಿಕ್ಕಾಗ ಸಮಾಜದಲ್ಲಿ ಎತ್ತರಕ್ಕೇರಿ ಸಾಧನೆ ಮಾಡಿ ಗುರುತಿಸಿಕೊಂಡ ಅನೇಕ ಮಹಿಳೆಯರು ನಮ್ಮಲ್ಲಿದ್ದಾರೆ.

ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಾ ಜಗತ್ತಿನ ದೃಷ್ಟಿಯನ್ನು ತನ್ನತ್ತ ಸೆಳೆದಿದ್ದಾರೆ. ಕಲೆ, ಸಾಹಿತ್ಯ, ರಾಜಕೀಯ, ಸಾಹಸ ಪ್ರವೃತ್ತಿಯಂತಹ ಸಾಧನೆಯಲ್ಲಿ ತೊಡಗಿಸಿಕೊಂಡು ವಿಶ್ವದ ಗೌರವಕ್ಕೆ ಪಾತ್ರರಾಗಿದ್ದಾರೆ. ತನ್ನ ಹಲವಾರು ಉತ್ತಮ ಗುಣ, ನಡತೆಗಳಿಂದ ಸರ್ವಗುಣ ಸಂಪನ್ನರಾಗಿ ಪೂಜ್ಯನೀಯರೂ ಆಗಿದ್ದಾರೆ.

ಪ್ರಾಚೀನ ಭಾರತದ ರಾಜಕಾರಣದಲ್ಲಿ ಆಪತ್ಕಾಲ ಮತ್ತು ಅಧಿಕಾರ ಯುತವಾಗಿ ಮಹಿಳೆ ರಾಜ್ಯದ ಅಧಿಕಾರವನ್ನು ಹಿಡಿದು ರಾಜಸೂತ್ರವನ್ನು ನಡೆಸಿದವರೆಂಬುವದು ಮರೆಯುವಂತಿಲ್ಲ. ರಜಿಯಾ ಸುಲ್ತಾನಾ, ಕಿತ್ತೂರ ರಾಣಿ ಚೆನ್ನಮ್ಮ, ಕೆಳದಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮುಂತಾದವರನ್ನು ಉದಾಹರಿಸಬಹುದು. ಅವರೆಲ್ಲ ಸ್ವತಃ ಜನೋಪಯೋಗಿ ಕೆಲಸಗಳಲ್ಲಿ ತೊಡಗಿ ಮುಂದಿನ ಪೀಳಿಗೆಗೆ ಮಾದರಿಯಾಗಿದ್ದಾರೆ.

ಆಧುನಿಕ ಭಾರತದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಸುನೀತಾ ವಿಲಿಯಂ, ಬಾಹ್ಯಾಕಾಶ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಯಾರೂ ಮಾಡದ ಸಾಹಸದಿಂದ ಅಂತರಿಕ್ಷದಲ್ಲೇ ಜೀವತೆತ್ತ ತರುಣಿ ಕಲ್ಪನಾ ಚಾವ್ಲಾ. ಇವರು ಶ್ರೀಮಂತ ಕುಟುಂಬದಿಂದ ಬಂದವರಲ್ಲ. ಚಿಕ್ಕ ಬಾಲಕಿಯಾಗಿದ್ದಾಗ ಅವರು ಕಂಡ ಕನಸು ಅವರೊಳಗಿನ ಮಹತ್ವಾಕಾಂಕ್ಷೆಯ

ತುಡಿತ, ಗುರಿ ಸಾಧನೆಯ ಹಠ ಮತ್ತು ಅದಕ್ಕೆ ನೀರೆರೆದ ಅವರ ಸುತ್ತ-ಮುತ್ತಲ ಮಂದಿ ಅವರ ಕನಸು ಸಾಕಾರವಾಗಲು ಕಾರಣವಾಯಿತು.

ಆರೋಗ್ಯ ಸೇವಾ ವಲಯದಲ್ಲಿ ಮದರ ಥೇರಸಾರವರು ಬಡವರ, ನಿರ್ಗತಿಕರ, ರೋಗಿಗಳ, ಅನಾಥರ, ವೃದ್ಧರ ಸೇವೆಗೈದು ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಸಾಮಾಜಿಕ ಸುವ್ಯವಸ್ಥೆ ಕಾಪಾಡಿ ಹೆಸರಾಗಿರುವ ಕಿರಣ ಬೇಡಿಯವರು ಭಾರತದ ಪೊಲೀಸ್ ಸೇವೆಗೆ ಸೇರಿದ ಮೊದಲ ಭಾರತೀಯ ಮಹಿಳೆ. ರಾಜಕೀಯದಲ್ಲಿ ಧೈರ್ಯ ಸಾಹಸಕ್ಕಾಗಿ ಇಂದಿರಾ ಗಾಂಧಿ ಹೆಸರಾಗಿದ್ದರೆ. ಭಾರತೀಯ ರಾಜಕಾರಣದಲ್ಲಿ ದೊಡ್ಡ ಹೆಸರು ಮಾಡಿರುವ ಮಹಿಳೆ ಇಂದಿರಾ ಗಾಂಧಿ ಇವರು. ಇವರೊಬ್ಬ ಯಶಸ್ವಿ ರಾಜಕಾರಣಿಯಾಗಿದ್ದರು. ಇವರು ಹದಿನೈದು ವರ್ಷಗಳ ಸುದೀರ್ಘ ಕಾಲ ರಾಷ್ಟ್ರವನ್ನು ಆಳಿದ ಮೊದಲ ಮಹಿಳಾ ಪ್ರಧಾನಿಗಳು. "ಸಂಸತ್ತಿನಲ್ಲಿರುವ ಏಕೈಕ ಗಂಡಸು ಇಂದಿರಾ ಗಾಂಧಿ" ಎಂದು ಕರೆಸಿಕೊಂಡಿದ್ದರೆ ಅದಕ್ಕೆ ಮೀಸಲಾತಿ ಕಾರಣವಲ್ಲ. ಅವರು ಪಡೆದಿದ್ದ ಶಿಕ್ಷಣ ಮತ್ತು ರಾಜಕೀಯ ಕುಟುಂಬದಲ್ಲಿ ಹುಟ್ಟಿ ಬೆಳೆದು ಅವರು ನಿಕಟವಾಗಿ ರಾಜಕೀಯದ ಒಳಹೊರಗುಗಳನ್ನು ಬಲ್ಲವರಾಗಿದ್ದು ಇದಕ್ಕೆ ಕಾರಣ. ಅದೇ ರೀತಿ ಭಾರತದ ಪ್ರಥಮ ಮಹಿಳಾ ರಾಷ್ಟ್ರಪತಿ ಪ್ರತಿಭಾ ಪಾಟೀಲರನ್ನು ನೆನೆಯಬಹುದು. ಇವರು

ಹೀಗೆ ಹಲವಾರು ಮಹಿಳೆಯರು ರಾಜಕೀಯ ಮತ್ತು ಇತರೆ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ರಾಜಕೀಯ ಕ್ಷೇತ್ರ ಮಹಿಳೆಯರಿಗೆ ಇನ್ನುಳಿದ ಕ್ಷೇತ್ರಗಳಷ್ಟು ಸುರಕ್ಷಿತವಲ್ಲವೆಂಬ ಮಾತುಗಳು ಅಲ್ಲಲ್ಲಿ ಕೇಳಬರುತ್ತವೆ. ಆದರೆ ಅವೆಲ್ಲವನ್ನು ಮೀರಿ ಬೆಳೆದವರಲ್ಲಿ ಮತ್ತು ತಮ್ಮ ಜೀವಿತಾವಧಿಯ ಬಹುಭಾಗವನ್ನು ಸಮಾಜ ಸೇವೆಗಾಗಿ ಮೀಸಲಿಟ್ಟು ಹಲವಾರು ಕ್ಷೇತ್ರಗಳಲ್ಲಿ ತಮ್ಮ ಗುರುತರವಾದ ಹೆಜ್ಜೆಗುರುತುಗಳನ್ನು ಮೂಡಿಸುತ್ತಿರುವ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಒಬ್ಬರು.

ಬಾಲ್ಯ ಜೀವನ-ಶಿಕ್ಷಣ:

ಬಿಜಾಪುರ, ವಿಜಯಪುರ, ಬಿಜ್ಜನಹಳ್ಳಿ ಎಂದು ಕರೆಯಿಸಿಕೊಳ್ಳುವ ವಿಜಯಪುರವು ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿತು. ೧೦-೧೧ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರಿಂದ ೧೩ನೆಯ ಶತಮಾನದಲ್ಲಿ ದೆಹಲಿಯ ಖಿಲ್ಜಿ ಸುಲ್ತಾನರ ಪ್ರಭಾವಕ್ಕೆ ಒಳಗಾಗಿದ್ದು, ಕ್ರಿ.ಶ. ೧೩೪೭ರಲ್ಲಿ ಬೀದರಿನ ಬಹಮನಿ ಸುಲ್ತಾನರ ಆಳ್ವಿಕೆಗೆ ಒಳಗಾಗಿತ್ತು. ಹೀಗೆ ಕ್ರಿ.ಶ. ೧೫೧೮ರಲ್ಲಿ ಬಹಮನಿ ಸುಲ್ತಾನರ ಸಾಮ್ರಾಜ್ಯ ಒಡೆದು ೫ ರಾಜ್ಯಗಳಾಗಿ ಹಂಚಿಹೋಯಿತು. ಆಗ ರೂಪಗೊಂಡ ರಾಜ್ಯಗಳಲ್ಲಿ ವಿಜಯಪುರವೂ ಒಂದು.

ಈ ವಿಜಯಪುರಕ್ಕೂ ಬೀದರಿಗೂ ಎಲ್ಲಿಲ್ಲದ ನಂಟಿದೆ.

> **"ಎತ್ತಣ ಮಾಮರ ಎತ್ತಣ ಕೋಗಿಲೆ**
> **ಎತ್ತಣಿಂದೆತ್ತ ಸಂಬಂಧವಯ್ಯ**
> **ಬೆಟ್ಟದ ಮೇಲಣ ನೆಲ್ಲಿಯಕಾಯಿ**
> **ಸಮುದ್ರದೊಳಗಣ ಉಪ್ಪು**
> **ಎತ್ತಣಿಂದೆತ್ತ ಸಂಬಂಧವಯ್ಯ**
> **ಗುಹೇಶ್ವರ ಲಿಂಗಕ್ಕೆಯೂ ನಮಗೆಯೂ**
> **ಎತ್ತಣಿಂದೆತ್ತ ಸಂಬಂಧವಯ್ಯ....**

ಎನ್ನುವಂತೆ ಬೀದರಿಗೂ ವಿಜಯಪುರಕ್ಕೆ ಹೊಂದಿರುವ ಸಂಬಂಧವೆಂದರೆ ಬಹಮನಿ ಸುಲ್ತಾನರ ಆಳ್ವಿಕೆಯಿಂದ, ಹಿಡಿದು ೧೨ನೇ ಶತಮಾನದ ಬಸವಣ್ಣನವರ ಜನ್ಮಭೂಮಿ ವಿಜಯಪುರ ಆದರೂ ಕರ್ಮಭೂಮಿ ಬೀದರಿನ ಬಸವ ಕಲ್ಯಾಣ ಹಿಂದುಳಿದ ಜಿಲ್ಲೆಯೆಂದು ಹೆಸರಾಗಿತ್ತು ಬೀದರ. ಅದನ್ನು ಅಳಿಸಲು ವಿಜಯಪುರದ ಅನೇಕ ಪ್ರಾಧ್ಯಾಪಕರುಗಳ ಕೊಡುಗೆ ಅಮೂಲ್ಯವಾದುದು. ಎನ್.ಎನ್. ಗೌಡರ್, ಬಿ.ಟಿ. ಸಾಸನೂರ, ಡೊಮನಾಳ, ಆಲೂಗೂರ

ಮುಂತಾದವರು ಇದಕ್ಕೆ ಉದಾಹರಣೆ. ಅದರಂತೆ–

ಡಾ॥ ಸಿದ್ದಾರಡ್ಡಿಯವರು ಕ್ರಿ.ಶ. ೧೯೬೭ರಲ್ಲಿ ಬೀದರಿಗೆ ಬಂದು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದರು. ಅನೇಕ ರೋಗಿಗಳ ಪಾಲಿನ ದೇವರಾಗಿ ಉತ್ತಮ ಚಿಕಿತ್ಸೆಯನ್ನು ನೀಡಿ, ಸಾರ್ಥಕ ಜೀವನ ನಡೆಸಿದ್ದಾರೆ. ಡಾ. ಅವರ ಪತ್ನಿ ಗುರಮ್ಮನವರು ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಪ್ರಭಾವ ಬೀರಿ, ಮಹಿಳಾಪರ ಕಾಳಜಿವುಳ್ಳ ಮಾದರಿ ಮಹಿಳೆಯಾಗಿದ್ದಾರೆ.

ಮೂಲತಃ ವಿಜಯಪೂರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ವಡವಡಗಿ ಎಂಬ ಗ್ರಾಮದಲ್ಲಿ ಶ್ರೀಮತಿ ಸಿದ್ಧಮ್ಮ ಗೌಡತಿ ಹಾಗೂ ಶ್ರೀ ಬಸವಂತರಾಯಗೌಡ ಅಮರಖೇಡ ಇವರ ಪುಣ್ಯಗರ್ಭದಲ್ಲಿ ಗುರಮ್ಮನವರು ಜನಿಸಿದರು. ೧೦ ಜನ ಮಕ್ಕಳಲ್ಲಿ ಇವರು ಕೊನೆಯ ಮಗಳು ಮತ್ತು ಹೆಣ್ಣು ಮಕ್ಕಳಲ್ಲಿ ನಾಲ್ಕನೆಯ ಹೆಣ್ಣುಮಗಳು. ದಿನಾಂಕ: ೦೪–೦೨–೧೯೪೬ ರಲ್ಲಿ ಜನಿಸಿದರು.

ಇವರಿಗೆ ಮೂವರು ಅಣ್ಣಂದಿರು ಒಬ್ಬ ಅಕ್ಕ. ಮೊದಲನೆಯ ಅಣ್ಣ ಡಾ. ಸಂಗನಗೌಡ ಅಮರಖೇಡ ಎಮ್‌ಎಸ್ ಎಫ್‌ಸಿಪಿಎಸ್. ಎರಡನೆಯವ ಮಾಂತಗೌಡ ಅಮರಖೇಡ ಕೇವಲ ೭ನೇ ತರಗತಿವರೆಗೆ ಓದಿದ್ದರು. ಇವರೊಬ್ಬ ತ್ಯಾಗಮಯಿ ಅಣ್ಣ ಹಾಗೂ ತಮ್ಮನ ಓದಿನ ಸಲುವಾಗಿ ತಾನು ಹೊಲಮನಿ ನೋಡುತ್ತಿದ್ದರು. ಇವರಿಗೆ ೧೨೦ ಎಕರೆ ಹೊಲವಿತ್ತು. ಮೂರನೆಯವರು ಡಾ. ಶಂಕರಗೌಡ ಅಮರಖೇಡ ಎಮ್.ಡಿ (ಬೊಂಬಾಯಿ) ಆಗಿದ್ದರು.

ಬಿಜಾಪುರ ಜಿಲ್ಲೆ ಮೇಲಿಂದ ಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವ ಜಿಲ್ಲೆ. ಒಂದು ವರ್ಷ ಮಳೆ ಬಂದರೆ ಮತ್ತೆ ಮೂರು ವರ್ಷ ಮಳೆ ಬರುತ್ತಿರಲಿಲ್ಲ. ಕಷ್ಟ ಸುಖವನ್ನು ಸಮಾನವಾಗಿ ಪರಿಗಣಿಸುತ್ತ ಅವರು ಜೀವಿಸುತ್ತಿದ್ದರು. ಇಂತಹ ಸಾವಿರಾರು ಕುಟುಂಬಗಳು ಬಿಜಾಪುರದಲ್ಲಿದ್ದವು. ಅವರಲ್ಲಿ ಇವರ ಕುಟುಂಬವು

ಒಂದಾಗಿತ್ತು. ಇವರ ಮನೆತನದವರು ಜಾತಿಯತೆ, ಮಡಿವಂತಿಕೆಯಿಂದ ದೂರ ಉಳಿದವರು.

ಇವರ ತಂದೆ ಬಸವಂತರಾಯಗೌಡ ಅಮರಖೇಡ ಐಷರಾಮಿ ಜೀವನ ನಡೆಸುತ್ತಿದ್ದರು. ತಾಯಿ ಸಿದ್ಧಮ್ಮ ಗೌಡತಿಯವರು ಮಾತ್ರ ಮನೆಯಲ್ಲಿದ್ದು ಹೈನುಗಾರಿಕೆಯಿಂದ ವರ್ಷಕ್ಕೆ ಆರು ಡಬ್ಬಿ ತುಪ್ಪ ತಯಾರಿಸುತ್ತಿದ್ದರು. ಹಾಲು ತುಪ್ಪ ಮಾರುವುದೆಂದರೆ ಜನರು ಕೀಳೆಂದು ತಿಳಿಯುತ್ತಿದ್ದರು. ಆಗ ಹಣದ ಕೊರತೆಯಿತ್ತು. ಹೈನುಗಾರಿಕೆಯಿಂದ ಬಂದ ಹಣದಿಂದಲೇ ಮಕ್ಕಳಿಗೆ ಓದಿಸುತ್ತಿದ್ದರು. ಅಜ್ಜಿ ಚೆಂದಮ್ಮ ಅಮರಖೇಡ ಅವರು ಹೊಲದ ಕಡೆ ಗಮನ ಕೊಡುತ್ತಿದ್ದರು. ಸರ್ವಜ್ಞ ಹೇಳುವಂತೆ-

ಮಜ್ಜಿಗೆ ಊಟಕ ಲೇಸು। ಮಜ್ಜನಕೆ ಮಡಿ ಲೇಸು।
ಕಜ್ಜಾಯ ತುಪ್ಪ ಉಣಲೇಸು
ಮನೆಗೊಬ್ಬ ಅಜ್ಜಿ ಲೇಸೆಂದ ಸರ್ವಜ್ಞ

ಎನ್ನುವಂತೆ ಗುರಮ್ಮನವರ ತಾಯಿ ಮನೆಯ ಜವಾಬ್ದಾರಿ ನಿಭಾಯಿಸಿದ್ದರೆ, ಅವರ ತಂದೆ ಮಾತ್ರ ತಾನೊಬ್ಬ ಜಮಿನ್ದಾರನೆಂದು, ಮನೆಯ ಕೆಲಸಗಳಾವವು ಸಂಬಂಧವಿಲ್ಲವೆಂಬಂತೆ ವರ್ತಿಸುತ್ತಿದ್ದರು. ಅವರ ಅಜ್ಜ ಅಂದರೆ ತಂದೆಯ ಅಪ್ಪ ಶ್ರೀ ಸಂಗನಗೌಡ. ಇವರ ತಂದೆ ೯ ತಿಂಗಳ ಮಗುವಿದ್ದಾಗ ತಂದೆಯನ್ನು ಕಳೆದುಕೊಂಡಿದ್ದರು. ಅಂದಿನ ಕಾಲದಲ್ಲಿ ಇವರ ತಂದೆಗೆ ಸರಕಾರಿ ಮಾಸ್ತರ ನೌಕರಿ ಬಂದರೆ ಅವರಜ್ಜಿ ಕಳುಹಿಸಲಿಲ್ಲ. ಅದು ಇನ್ನೊಬ್ಬರ ಕೈ ಕೆಳಗೆ ದುಡಿಯುವುದು ಅಂತ ಭಾವಿಸುತ್ತಿದ್ದರು.

ಗುರಮ್ಮನವರ ತಾಯಿ ಸಿದ್ದಮ್ಮಾ ಗೌಡತಿಗೆ ಹತ್ತು ಜನ ಮಕ್ಕಳು ಇನ್ನೈದು ಜನ ಚಿಕ್ಕಂದಿನಲ್ಲಿಯೇ ತೀರಿಹೋದರು. ಆದರೆ ಸಿದ್ದಮ್ಮನವರು ಮಕ್ಕಳಿಗೆ ತುಂಬಾ ಒಳ್ಳೆಯ ಸಂಸ್ಕಾರ ನೀಡಿದರು. ಗುರುಗಳಿಗೆ ಗೌರವ ಕೊಡಬೇಕೆಂದು

ಹೇಳುತ್ತಿದ್ದರು. ಮಕ್ಕಳು ಕೂಡಾ ಗುರುವನ್ನು ಬ್ರಹ್ಮ-ವಿಷ್ಣು-ಮಹದೇವನ ಸ್ಥಾನದಲ್ಲಿಟ್ಟು ನೋಡುತ್ತಿದ್ದರು. ಗುರುದೇವೋ ಭವ ಎಂಬುದು ಮಕ್ಕಳ ಮನದಲ್ಲಿ ಅಚ್ಚಳಿಯದಂತೆ ಮೂಡಿಸಿದರು. ಪಾಠ ಹೇಳಿಕೊಡುವ ಗುರುಗಳಿಗೂ ಹಾಲು ತುಪ್ಪ ಕಳುಹಿಸುತ್ತಿದ್ದರು. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ತಾಯಿ ಕಾರಣೀಭೂತರಾಗಿದ್ದರು. ತಾಯಿಯ ಆಸೆಯಂತೆ ಮಕ್ಕಳು ಶಿಕ್ಷಣದಲ್ಲಿ ಮುಂದುವರೆದರು. ಕುಟುಂಬ ನಿರ್ವಹಣೆಯ ನೊಗ ಹೊತ್ತರು. ಗುರಮ್ಮರವರ ಅಕ್ಕ ದೇವಮ್ಮ ಸಿದ್ಧಾರೆಡ್ಡಿಯವರಿಗೆ ಅವರ ಅಣ್ಣನ ಗೆಳೆಯನಾದ ಡಾ. ಸಿ.ಪಿ. ಸಿದ್ದಾರಡ್ಡಿಯವರಿಗೆ ಕೊಟ್ಟು ಮದುವೆ ಮಾಡಿದರು. ಗುರಮ್ಮನವರಿಗೂ ವೈದ್ಯರೊಂದಿಗೆ ಮದುವೆ ಮಾಡುವ ಕನಸು ನನಸಾಗಿಸಿಕೊಂಡರು. ತಮ್ಮ ಡಾ. ಶಂಕರಗೌಡನಿಗೆ ಡಾ. ವಿಜಯಾಳೊಂದಿಗೆ ವಿವಾಹವಾಯಿತು. ಎರಡನೆಯ ಮಗನಾದ ಮಾಂತಗೌಡನಿಗೆ ೫ ಜನ ಮಕ್ಕಳಿದ್ದರು. ಗುರಮ್ಮರವರ ತಾಯಿ ಅವರಣ್ಣನ ತ್ಯಾಗವನ್ನು ಯಾವಾಗಲೂ ನೆನಪಿಸುತ್ತಿದ್ದರು. ಏಕೆಂದರೆ ಮಹಾಂತಗೌಡ ಹೆಚ್ಚು ಓದಿರಲಿಲ್ಲ. ಹೊಲ ಮನೆಕೆಲಸ ನೋಡುತ್ತಿದ್ದರು. ಅಲ್ಲದೆ ಮಾಂತಗೌಡನೆಂದರೆ ಎಲ್ಲರಿಗೂ ಪ್ರೀತಿಯೇ ಇವರು ಗುರಮ್ಮರನ್ನು ತಮ್ಮ ಮಕ್ಕಳಿಗಿಂತ ಹೆಚ್ಚು ಕಾಳಜಿವಹಿಸುತ್ತಿದ್ದರು. ಇವರ ಯಾವ ಬೇಕು ಬೇಡಿಕೆಗಳಿಗೂ ತಡೆಯೊಡ್ಡುತ್ತಿರಲಿಲ್ಲ. ಉಳಿದವರು ಅಣ್ಣನ ಮಕ್ಕಳಿಗೆ ಇಂದಿಗೂ ಕೂಡಾ ಅಷ್ಟೇ ಪ್ರೀತಿ ಕಾಳಜಿಯಿಂದ ನೋಡುತ್ತಾರೆ. ಇವರದು ಕೂಡು ಕುಟುಂಬವಿರುವುದರಿಂದ ಯಾರು ಕೂಡಾ ಭೇದಭಾವದ ಮನಸ್ಸು ಹೊಂದಿರಲಿಲ್ಲ. ಒಂದು ಕುಟುಂಬದ ಶ್ರೇಯೋಭಿವೃದ್ಧಿಗೆ ತಾಯಿಯ ಪಾತ್ರ ತುಂಬಾ ಮುಖ್ಯವಾದದ್ದು. ಈ ವೇಳೆಯಲ್ಲಿ ಸಿದ್ದಮ್ಮ ಗೌಡತಿ ನಮಗೆ ಆದರ್ಶಳಾಗಿ ಕಾಣಿಸಿಕೊಳ್ಳುತ್ತಾರೆ.

ಬಾಲ್ಯದಿಂದಲೂ ಬಹಳ ಚೂಟಿಯಾಗಿರುವ ಗುರಮ್ಮನವರು ಹೊರಾಂಗಣ ಆಟಗಳಿಗಿಂತ, ಒಳಾಂಗಣ ಆಟಗಳು ಹೆಚ್ಚಾಗಿ ಆಡುತ್ತಿದ್ದರು.

ಆಗಾಗ ಬುಗರಿ ಅಟ, ಆಣೆಕಲ್ಲು, ಚಕಾರ ಹಗ್ಗದಾಟ ಮುಂತಾದ ಹೊರಾಂಗಣ ಆಟಗಳನ್ನು ಆಡುತ್ತಿದ್ದರು. ತರಗತಿಯಲ್ಲಿ ಒಬ್ಬಳೇ ಹುಡುಗಿ ಇದ್ದುದ್ದರಿಂದ ಬೇರೆ ಆಟಗಳಲ್ಲಿ ಅಸಕ್ತಿ ಇದ್ದರೂ ಸಾಹಸ ಹಾಗೂ ಗುಂಪು ಆಟಗಳಾದ ಕಬ್ಬಡಿ, ಖೋ ಖೋ ಆಟಗಳನ್ನು ಆಡಲು ಇವರಿಗೆ ಅವಕಾಶ ಸಿಗಲಿಲ್ಲ ಎನ್ನುತ್ತಾರೆ. ಇವರ ಜನ್ಮಸ್ಥಳ ಚಿಕ್ಕ ಹಳ್ಳಿಯಾಗಿರುವುದರಿಂದ ಕ್ರೀಡೆಗಳಿಗೆ ಹೆಚ್ಚು ಅವಕಾಶಗಳು ಇರಲಿಲ್ಲ. ಅವರ ತಾಯಿಗೆ ಮಗಳು ಈಜು ಕಲಿಸಬೇಕೆಂಬ ಇಷ್ಟವಿತ್ತು. ಆಗಿನ ಕಾಲದಲ್ಲಿ ಬಾವಿಗಳಲ್ಲಿ ಈಜಾಡುತ್ತಿದ್ದರು. ಗುರಮ್ಮನವರು ಒಂದು ದಿನ ಈಜಲು ಹೋದಾಗ ಬಾವಿಯ ದಡದ ಹತ್ತಿರ ನಿಂತಿದ್ದರು. ಹಿಂದಿನಿಂದ ಎಮ್ಮೆಯೊಂದು ಬಂದು ತನ್ನ ಕೊಂಬಿನಿಂದ ಎತ್ತಿ ಒಗೆಯಿತು. ಅವರು ಬಾವಿಯಲ್ಲಿ ಬಿದ್ದರು. ಆಗ ತಾನೇ ಅಲ್ಪಸ್ವಲ್ಪ ಈಜು ಕಲಿಯುತ್ತಿದ್ದ ಅವರು ಅಂದು ತಾವೇ ಧೈರ್ಯದಿಂದ ಈಜಾಡಿ ದಡ ಸೇರಿ ಪ್ರಾಣ ಉಳಿಸಿ ಕೊಂಡರಂತೆ.

ಇವರ ಪ್ರಾಥಮಿಕ ಶಿಕ್ಷಣ ಹುಟ್ಟೂರು ವಡವಡಗಿಯಲ್ಲಿಯೇ ಆಯಿತು. ಮುಂದೆ ೧೯೫೫ರಲ್ಲಿ ಅಕ್ಕನ ಮನೆಯಲ್ಲಿದ್ದುಕೊಂಡು ಬೆಳಗಾವಿಯ ಜಿ.ಎ. ಹೈಸ್ಕೂಲ್‌ಗೆ ಸೇರಿಕೊಂಡರು. ಹಳ್ಳಿಯ ಉಡುಪು ಧರಿಸಿ ಶಾಲೆಗೆ ಹೋಗುತ್ತಿದ್ದ ಇವರ ಉಡುಪು ನೋಡಿ ಎಲ್ಲರೂ ನಗುವುದಕ್ಕೆ ಆರಂಭಿಸಿದರು. ನಂತರ ಶಾಲಾ ಸಮವಸ್ತ್ರ ಹೊಲಿಸಿಕೊಂಡರು. ಕೆಲವು ದಿವಸ ಕಳೆದಂತೆ ಗಣಿತದ ತರಗತಿಯಲ್ಲಿ ಅವರು ಮಾಡುವ ಲೆಕ್ಕಗಳನ್ನು ನೋಡಿ, ಅನೇಕ ಶ್ರೀಮಂತ ಹುಡುಗಿಯರು ಇವರ ಸ್ನೇಹ ಬಯಸಿ ಬಂದರು. ಒಂದು ವರ್ಷದ ಶಿಕ್ಷಣ ಮುಗಿಸುವುದರೊಳಗೆ, ಇವರ ಅಕ್ಕನ ಗಂಡ ಡಾ. ಸಿ.ಪಿ. ಸಿದ್ದಾರಡ್ಡಿ ಯವರಿಗೆ ಬೆಳಗಾವಿಯಿಂದ ಸಿಂಧನೂರಿಗೆ ವರ್ಗವಾಗುತ್ತದೆ. ಹೀಗಾಗಿ ಇವರ ಪ್ರೌಢ ಶಿಕ್ಷಣ ಅಲ್ಲಿಯೇ ಕುಂಠಿತವಾಯಿತು.

ಅವರ ಅಣ್ಣನವರು ೧೯೬೨ರಲ್ಲಿ ಬಾಂಬೆಯಲ್ಲಿ ಎಮ.ಎಸ್. ಅಭ್ಯಾಸ ಮಾಡುತ್ತಿದ್ದರು. ಅವರ ಗೆಳೆಯರಾದ ಎಸ್.ಬಿ. ಪಾಟೀಲರು ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರದ್ದು ತುಂಬಾ ದೊಡ್ಡಮನೆ. ಅವರ ಅಣ್ಣನವರಿಗೆ ಉಳಿದುಕೊಳ್ಳಲು ೩ ಕೋಣೆಗಳನ್ನು ಕೊಟ್ಟಿದ್ದರು. ಅವರ ಅತ್ತಿಗೆ ಗೌರಮ್ಮನವರೊಡನೆ ಗುರಮ್ಮನವರು ಸಂಗನಗೌಡ ಅಣ್ಣ ಡಾ. ಅಮರಖೇಡರೊಂದಿಗೆ ಅಲ್ಲಿಯೇ ಒಂದು ವರ್ಷ ಉಳಿದುಕೊಂಡರು. ಅಣ್ಣನಾದರೂ ಇಡೀ ದಿನ ಮೆಡಿಕಲ್ ಕಾಲೇಜಿಗೆ ಹೋಗಿ ಸಾಯಂಕಾಲವೇ ಮನೆಗೆ ಬರುತ್ತಿದ್ದರು. ಅವರು ಎಷ್ಟೇ ಆಯಾಸಗೊಂಡಿದ್ದರೂ ಗುರಮ್ಮನವರಿಗೆ ಇಂಗ್ಲಿಷ ಕಲಿಸುತ್ತಿದ್ದರು. ಅವರು ಹೇಳಿ ಕೊಟ್ಟ ಪಾಠ. ಮನೆಗೆಲಸ ತಪ್ಪದೇ ಮಾಡಿತೋರಿಸುತ್ತಿದ್ದರು. ಅತ್ತಿಗೆ ಗೌರಮ್ಮ ದೊಡ್ಡ ಕುಟುಂಬದ ಮಗಳಾಗಿದ್ದರು. ಧಾರವಾಡದ ರಾವಬಹಾದ್ದೂರ ಇನಾಮತಿಯವರೆಂದರೆ ಬಹಳ ಪ್ರಸಿದ್ಧ ಮನೆತನ. ಅವರಿಗೆ ರೊಟ್ಟಿ, ಚಪಾತಿಗಳನ್ನು ಮಾಡಲು ಬರುತ್ತಿರಲಿಲ್ಲ. ಅಂತಹ ವೇಳೆಯಲ್ಲಿ ಗುರಮ್ಮನವರು ಅತ್ತಿಗೆಗೆ ಸಹಾಯ ಮಾಡುತ್ತಿದ್ದರು. ಹೀಗಾಗಿ ಅತ್ತಿಗೆ–ನಾದಿನಿಯರ ಮಧ್ಯೆ ತುಂಬಾ ಅತ್ಮೀಯತೆ ಬೆಳೆದಿತ್ತು. ಗುರಮ್ಮನವರ ಓದುವ ಅಸಕ್ತಿ ಬಲವಾಗಿ ಇದ್ದುದ್ದರಿಂದ ಅಣ್ಣ ಕಾಲೇಜಿನಿಂದ ಬರುವುದರೊಳಗೆ ಎಲ್ಲ ಕೆಲಸ ಮುಗಿಸಿಕೊಂಡು ಬಿಡುವು ಮಾಡಿಕೊಂಡು ಬಿಡುತ್ತಿದ್ದರು. ಅದೇ ಮುಂದೆ ಅವರಿಗೆ ೧೯೬೩ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಲು ಸಹಾಯ ಮಾಡಿತು.

ವೈವಾಹಿಕ ಜೀವನ:

ಗುರಮ್ಮನವರದು ಪೂರ್ವನಿಯೋಜಿತ ಮದುವೆ. ಇವರಿಗೆ ಈ ನಡುವೆ ಕನ್ಯಾ ನೋಡಲು ಯಾರು ಬಂದಿರಲ್ಲಿಲ್ಲ. ಏಕೆಂದರೆ ಮದುವೆ ವಿಚಾರ ಬಂದಾಗಲೆಲ್ಲ ಅವರ ತಾಯಿ ಮಗನಾದ ಡಾ. ಸಂಗನಗೌಡನಿಗೆ ಗೊತ್ತೆಂದು ಹೇಳುತ್ತಿದ್ದರು. ಏಕೆಂದರೆ ಅಣ್ಣನ ಜೊತೆ ಬಾಂಬೆಯಲ್ಲಿದ್ದಾಗ ಡಾ. ಎಸ್ ಎಸ್

ಸಿದ್ಧಾರಡ್ಡಿಯವರಿಗೆ ಗುರಮ್ಮನವರನ್ನು ತೋರಿಸಿದ್ದ ವಿಷಯ ತಾಯಿಯ ಮನಸ್ಸಿನಲ್ಲಿತ್ತು. ಆದರೆ ಗುರಮ್ಮನವರು ಸಿದ್ಧಾರಡ್ಡಿಯವರನ್ನು ನೋಡಿದ್ದು ಮದುವೆಯಲ್ಲಿಯೇ. ೧೯೬೫ ಡಿಸೆಂಬರ್ ೧೬ರಂದು ಅವರೊಡನೆ ಮದುವೆಯಾಯಿತು. ಗಂಡನ ಮನೆಗೆ ಹೋಗುವಾಗ ಗುರಮ್ಮರವರಿಗೆ ಅತೀವ ದುಃಖವಾಯಿತು. ಗಂಡನೂರು ಹುಟ್ಟೂರಿನಿಂದ ೧೨ ಕಿ.ಮೀ. ದೂರದ ಅಡ್ಡಡ್ಡ ರಸ್ತೆಯ ಊರು. ಕ್ರಮಿಸುವ ದಾರಿಯೆಲ್ಲ ಕಲ್ಲುಗುಂಡುಗಳ ರಸ್ತೆ, ವಾಹನ ಸಂಚಾರದ ದಾರಿಯಲ್ಲ. ಎತ್ತಿನ ಬಂಡಿಯಲ್ಲಿ ಇವರ ಸವಾರಿ ಇಟ್ಟು ಗಾಡಿಗೆ ಪರದೆ ಹಾಕಿ ಕಳುಹಿಸಿದರು. ಜೊತೆಗೆ ಅತ್ತಿಗೆ ಬೋರಮ್ಮ ಬಂದಿದ್ದರು. ಊರಿಗೆ ಹೋಗಿ ನಾಲ್ಕು ದಿವಸಗಳಾದ ಮೇಲೆ ಅತ್ತಿಗೆ ವಾಪಸಾಗಿ ವಡವಡಗಿಗೆ ಹೋದರು. ಡಾ. ಸಿದ್ಧಾರಡ್ಡಿಯವರು ಬಿಜಾಪುರಕ್ಕೆ ಹೋಗಿ ಬರುತ್ತೇನೆಂದು ಹೇಳಿದರು. ಆದರೆ ದಾರಿಯಲ್ಲಿ ಸಿಕ್ಕ ಹದ್ನೂರು ಗೌಡರ ರೋಗಿಯ ಜತೆಯಲ್ಲಿ ಬಾಂಬೆಗೆ ಹೋಗಿದ್ದರು. ಮುಂದೆ ಬಾಂಬೆಯಿಂದ ೫ ದಿವಸಗಳಾದ ಮೇಲೆ ಒಂದು ಅಂತರ್‌ದೇಶಿ ಪತ್ರ ಬಂದು ನಾನು ರೋಗಿಯನ್ನು ಕರೆದುಕೊಂಡು ತುರ್ತಾಗಿ ಬಾಂಬೆಗೆ ಹೋಗಿದ್ದೇನೆಂಬ ವಿಷಯ ಗೊತ್ತಾಯಿತು. ನನ್ನ ದಾರಿ ಕಾಯಬೇಡಿ ನನಗೆ ಬರಲು ತಡವಾಗುತ್ತದೆಂದು ಬರೆದಿದ್ದರು. ಆದರೆ ಈ ಮುಂಚೆ ದಿನಾಲು ಗುರಮ್ಮನವರು ಮಾಳಿಗೆ ಮೇಲೆ ನಿಂತು ಬಸ್ಸು ಬರುವ ಸಮಯಕ್ಕೆ ಜಾತಕಪಕ್ಷಿಯಂತೆ ಕಾಯುತ್ತಿದ್ದರು. ಏಕೆಂದರೆ ಆವಾಗ ಕೋರವಾರದಿಂದ ಬಿಜಾಪುರಕ್ಕೆ ಒಂದೆ ಒಂದು ಬಸ್ಸು. ಅದು ಸಾಯಂಕಾಲ ಏಳುಗಂಟೆಗೇ ಬರುತ್ತಿತ್ತು. ದಾರಿ ಕಾದು ಸಾಕಾಗಿ ಹೋಗುತ್ತಿತ್ತು. ಹೊಸದರಲ್ಲಿ ಮನೆಯವರೊಂದಿಗೆ ಹೊಂದಿಕೊಂಡಿರುವುದು ಕಷ್ಟವೆನಿಸಿದ್ದರು ಅನಿವಾರ್ಯವಾಗಿತ್ತು. ಏಕೆಂದರೆ ಗುರಮ್ಮನವರು ಅತ್ತೆಯ ಮಾತಿನಂತೆ ನಡೆಯುವ ಸೊಸೆಯಾಗಿದ್ದರು. ಡಾಕ್ಟರ್‌ರವರ ನೆಚ್ಚಿನ ಮಡದಿಯಾಗಿದ್ದರು. ಆದರೆ ಜೀವನದ ದೂರದೃಷ್ಟಿ ಹೊಂದಿದ ಗುರಮ್ಮನವರು ಅತ್ತೆ ಮಾವರ ಸೇವೆಯನ್ನು ಬಹಳ

ಶ್ರದ್ಧೆ ಭಕ್ತಿಯಿಂದ ಮಾಡಿ ಸೈ ಎನಿಸಿಕೊಂಡರು. ಕುಟುಂಬ ನಿರ್ವಹಿಸಿಕೊಂಡು ಹೋಗುವಲ್ಲಿ ಪ್ರತಿಕ್ಷಣವು ಎಚ್ಚರಿಕೆ ವಹಿಸುತ್ತಿದ್ದರು. ಜೀವನವೆಂದರೆ ಬರೀ ಹೂವಿನ ಹಾಸಿಗೆಯಲ್ಲ, ಹೂವಿನ ಗಿಡಕ್ಕೆ ಮುಳ್ಳುಗಳು ಇರುತ್ತವೆಂಬುದು ಮರೆಯಬಾರೆಂಬ ಅರಿವಿನಿಂದ ಬದುಕಿದರು. ಈ ಇವರ ಗುಣಗಳೇ ಮುಂದೆ ಒಬ್ಬ ಒಳ್ಳೆಯ ವ್ಯಕ್ತಿಯಾಗಲು ಸಾಧ್ಯವಾಯಿತು. ಜೀವನದಲ್ಲಿ ಎರಡು ರೀತಿಯ ನೋವುಗಳಿರುತ್ತವೆ. ಒಂದು ನಮ್ಮನ್ನು ನೋಯಿಸಿದರೆ ಇನ್ನೊಂದು ನಮ್ಮನ್ನು ಬದಲಾಯಿಸುತ್ತದೆಂಬ ಮಾತಿನಂತೆ ಬದುಕಿದರು.

ಮದುವೆಯಾಗಿ ಗಂಡನ ಮನೆ ಕೋರವಾರದಲ್ಲಿ ಕೆಲವು ದಿವಸಗಳು ಮಾತ್ರ ಉಳಿದರು. ಡಾ. ಸಿದ್ಧಾರಡ್ಡಿಯವರು ಗುರಮ್ಮನವರಿಗೆ ಮನೆಯಲ್ಲಿಯೇ ಬಿಟ್ಟು ಬಾಂಬೈಗೆ ಎಮ್.ಎಸ್. ಮಾಡಲು ಹೋದರು. ಎಮ್.ಎಸ್. ಮುಗಿಸಿ ಹುಬ್ಬಳ್ಳಿಯ ಕೋ-ಅಪರೇಟಿವ್ ಹಾಸ್ಪಿಟಲ್‌ಗೆ ಡಾ. ಆರ್.ಬಿ. ಪಾಟೀಲರ ನೇತೃತ್ವದಲ್ಲಿ ನಡೆಯುತ್ತಿರುವ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಕೆಲಸದ ಒತ್ತಡದಿಂದ ಗುರಮ್ಮನವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿರಲಿಲ್ಲ.

ಪತಿಯ ಭೇಟಿ ಮಾಡಲು ಗುರಮ್ಮನವರು ತನ್ನ ಗೆಳತಿ ಪದ್ಮಾವತಿ ಹುಣಸ್ಯಾಳ ವಡವಡಗಿಯಲ್ಲಿ ಶಿಕ್ಷಕಿಯಾಗಿದ್ದವರನ್ನು ಜೊತೆಯಲ್ಲಿ ಕರೆದುಕೊಂಡು ಹುಬ್ಬಳಿಗೆ ಹೋದರು. ಇಷ್ಟು ದಿವಸಗಳಾದರೂ ಕರೆಯಲು ಬಂದಿಲ್ಲವೆಂಬ ಕೋಪ ಅವರ ಮನದಲ್ಲಿತ್ತು. ಇವರು ಹುಬ್ಬಳ್ಳಿ ಹೋಗುವದರೊಳಗೆ ಸಿದ್ಧಾರಡ್ಡಿಯವರು ಅಲ್ಲಿರಲಿಲ್ಲ. ವಿಚಾರಿಸಿ ಕೇಳಿದಾಗ, ಅವರು ಇಂದೇ ಅವರ ಹೆಂಡತಿಯನ್ನು ಕರೆದುಕೊಂಡು ಬರಲು ಹೋಗಿದ್ದಾರೆಂಬ ವಿಷಯ ತಿಳಿಯಿತು. ಅವರ ಮಾತಿಗೆ ಒಂದಿಷ್ಟು ಉತ್ತರಿಸದೆ ತಬ್ಬಿಬ್ಬಾದರು. ಸ್ವಲ್ಪವೂ ನಿಧಾನಿಸದೇ ಧಾವಿಸುತ್ತ ಬಸ್ ನಿಲ್ದಾಣಕ್ಕೆ ಬಂದರು. ಇವರ ಪುಣ್ಯಕ್ಕೆ ಡಾಕ್ಟರ್‌ರು ಇನ್ನು ಬಸ್ ಹತ್ತಿರಲಿಲ್ಲ. ಅವರ ಗೆಳತಿ ಪದ್ಮಾರವರು ಸಿದ್ದಾರಡ್ಡಿಯವರಿಗೆ ಸಿಟ್ಟು

ಮಾಡಿದರು. ಆದರೂ ರೆಡ್ಡಿಯವರು ಒಂದಿಷ್ಟು ಬೇಸರಪಟ್ಟುಕೊಳ್ಳದೇ ಸುಮ್ಮನೆ ಹೆಂಡತಿಯ ಮುಖ ನೋಡುತ್ತ ಸಮಾಧಾನಪಟ್ಟು ಎಲ್ಲರೂ ಮನೆಗೆ ಹೋದರು.

ಹುಬ್ಬಳ್ಳಿಯಲ್ಲಿ ಕೆಲವು ವರ್ಷ ವೈದ್ಯಕೀಯ ವೃತ್ತಿ ಮಾಡಿದ ಮೇಲೆ ಸರಕಾರಿ ನೌಕರಿಗೆ ಸೇರಿಕೊಂಡರು. ಬೀದರ ತಮ್ಮ ಕಾರ್ಯಕ್ಷೇತ್ರವಾಗಿ ಆಯ್ಕೆ ಮಾಡಿಕೊಂಡರು. ಅವರು ಪತ್ನಿ ಸಮೇತವಾಗಿ ೧೯೬೭ ಅಕ್ಟೋಬರ್ ೩೦ರಂದು ಬೀದರಿಗೆ ಬಂದರು.

ಒಂದು ದಿವಸ ಮಾತನಾಡುತ್ತ- "ನಾನು ಓದಿದ ಹೆಂಡತಿಯನ್ನು ಮದುವೆಯಾಗಬೇಕಿತ್ತು" ಎಂದರು, ಅವರಾಡಿದ ಆ ಮಾತಿನಲ್ಲಿ ಅವರಿಗೆ ಬೇಸರವಿತ್ತು. ಈ ವಿಷಯ ಗುರಮ್ಮನವರು ರತ್ನಾ ಕುಸನೂರವರಿಗೆ ಹೇಳಿದರು. ಅವರು ಓದಿಗೆ ಮದುವೆ ಅಡ್ಡಿಯಾಗುವುದಿಲ್ಲ. ಮನಸ್ಸೊಂದಿದ್ದರೆ ಸಾಕೆಂದು ಹೇಳಿದರು. ತಾನು ಕೂಡಾ ಮದುವೆ ಆದ ಮೇಲೆಯೇ ಓದಿರುವೆನೆಂದು ಹೇಳಿದರಂತೆ. ಅದೇನು ದೊಡ್ಡ ವಿಷಯ! ನೀನು ಓದು ಮುಂದುವರೆಸೆಂದು ಅವರಿಗೆ ಪ್ರೋತ್ಸಾಹಿಸಿದರು. ಅಲ್ಲದೆ ನಿಮ್ಮ ತಾಯಿಯನ್ನು ಕರೆದುಕೊಂಡು ಬಾ, ನಾನು ಓದಬೇಕು ನನಗೆ ನೀವು ಚಿಕ್ಕವಳಿರುವಾಗ ಓದಿಸಿಲ್ಲವೆಂದು ಹೇಳೆಂದು ಉಪದೇಶಿಸಿದರು. ಹೇಳಿದಂತೆ ಮಾಡಿದ ಗುರಮ್ಮನವರು ೧೯೭೧ ಜೂನನಲ್ಲಿ ಅಕ್ಕಮಹಾದೇವಿ ಕಾಲೇಜಿಗೆ ಸೇರಿಕೊಂಡರು. ಪ್ರೊ. ಆಲ್ಲೂರು ಅವರು ಬಹಳ ಸಹಾಯ ಮಾಡುತ್ತಾರೆ. ಅವರು ಗುರಮ್ಮನವರ ಹತ್ತನೆಯ ವರ್ಗಾವಣೆ ಪ್ರಮಾಣಪತ್ರ ತರಿಸಿಕೊಂಡು ಪಿ.ಯು.ಸಿ.ಗೆ ದಾಖಲೆ ಮಾಡಿ ಗುರಮ್ಮನವರಿಗೆ ವಿಷಯ ತಿಳಿಸುತ್ತಾರೆ. ಅಂದೇ ಗುರಮ್ಮನವರು ಗಟ್ಟಿ ನಿರ್ಧಾರ ಮಾಡಿ ಎಷ್ಟೇ ತೊಂದರೆಯಾದರೂ ಇಟ್ಟ ಹೆಜ್ಜೆ ಹಿಂದೆ ಇಡಬಾರದು ಎಂದು ಪಣತೊಟ್ಟು ಮುನ್ನುಗ್ಗಿದರು. ಕಾಲೇಜಿನಲ್ಲಿ ಅವರ ನೆಚ್ಚಿನ ಗುರುಗಳಾದ ಪ್ರೊ. ಸಿದ್ರಾಮಪ್ಪರವರು ಸಮಾಜಶಾಸ್ತ್ರದ ಪಾಠವನ್ನು ತುಂಬಾ ಚೆನ್ನಾಗಿ ಮಾಡುತ್ತಿದ್ದರು. ಎಲ್ಲರೂ

ಅವರು ಪಾಠ ಮಾಡುವಾಗ ಬರೆದುಕೊಂಡು ನೋಟ್ಸ್ ಓದಿದರೆ ಸಾಕಾಗುತ್ತಿತ್ತು. ಅವರು ಪಾಠ ಮಾಡುವ ರೀತಿಯನ್ನು ಗುರಮ್ಮನವರು ಬಹಳ ಮೆಚ್ಚಿಕೊಂಡಿದ್ದರು. ಅವರು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳನ್ನು ಮಾಡಿಸುತ್ತಿದ್ದರು. ಒಂದು ದಿವಸ ಕಾಲೇಜಿನಲ್ಲಿ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಅದರಲ್ಲಿ ಭಾಷಣ ಮಾಡಲು ನಿಂತು ಭಯದಿಂದ ನಡುಗಿ ಅರ್ಧಕ್ಕೆ ಭಾಷಣ ಬಿಟ್ಟು ಕುಳಿತು ಕೊಂಡರಂತೆ, ಅವರಿಗೆ ತುಂಬಾ ನಾಚಿಕೆಯಾಯಿತು. ಆ ಕ್ಷಣಕ್ಕೆ ನಿರ್ಧಾರ ಮಾಡಿದೆ failure is stepping stone of success. ಮರಳಿ ಪ್ರಯತ್ನ ಮಾಡಿದಕ್ಕೆ ಪ್ರತಿಫಲವಾಗಿ ಶಿಕ್ಷಣದಲ್ಲಿ ಯಶಸ್ಸು ಕಂಡೆನೆಂದು ಹೆಮ್ಮೆಯಿಂದ ಹೇಳುತ್ತಾರೆ. ೧೯೭೬ರಲ್ಲಿ ಬಿ.ಎ. ಅಕ್ಕಮಹಾದೇವಿ ಕಾಲೇಜಿನಲ್ಲಿ ಮುಗಿಸಿದರು. ಮುಂದೆ ೧೯೮೦ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರ್ಗಿಯಲ್ಲಿ ಎಂ.ಎ. ಇಂಗ್ಲಿಷ ಪ್ರವೇಶ ಪಡೆದು ಎರಡು ವರ್ಷಗಳ ಕಾಲ ಶ್ರೀಮತಿ ಲೀಲಾ ನಿಂಬೂರೆಯೊಂದಿಗೆ ಹಾಸ್ಟಲ್‌ನಲ್ಲಿದ್ದು ಅಭ್ಯಾಸ ಮಾಡಿದರು. ಇಷ್ಟೊತ್ತಿಗೆ ಇವರಿಗೆ ಬಸವರಾಜ ರಾಜಶ್ರೀ ಮತ್ತು ವಿಕ್ರಮ ಎಂಬ ಮೂವರು ಮಕ್ಕಳಾಗಿದ್ದರು.

ಛಲಬೇಕು ಶರಣಂಗೆ ಪರಧನವನ್ನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನ್ನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮನೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ

ಎನ್ನುವಂತೆ ಛಲವನ್ನು ಮೈಗೂಡಿಸಿಕೊಂಡು ಹಿಡಿದ ಕಾರ್ಯವನ್ನು ಬಿಡದೆ ಮುನ್ನಡೆದರು. ಒಂದು ರೀತಿಯಲ್ಲಿ ಹೇಳಬೇಕೆಂದರೆ ಹುಟ್ಟು ಛಲಗಾರ್ತಿ. ಆಲಸಿತನವನ್ನು ಮೆಟ್ಟಿನಿಂತವರು. "ನಮ್ಮ ಹುಟ್ಟು ಹೇಗೆ ಇರಲಿ ಸಾವು ಮಾತ್ರ

ಚರಿತ್ರೆಯಾಗಲಿ" ಎಂಬ ಅಂಬೇಡ್ಕರ ಅವರ ಮಾತಿನಂತೆ ಅನೇಕ ಕಾರ್ಯಗಳಲ್ಲಿ ಯಶಸ್ಸು ಕಂಡಿದ್ದರ ಫಲವಾಗಿ ರಾಷ್ಟ್ರೀಯ ವಾಹಿನಿಯಾದ ಚಂದನ ದೂರದರ್ಶನದ ಶುಭೋದಯ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಿತು ಎನ್ನುತ್ತಾರೆ. ಈ ಸಂದರ್ಶನದಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ರೀತಿ ಉತ್ತರ ಕೊಟ್ಟ ಶೈಲಿ ಕಂಡು ಅನೇಕರು ಅಭಿನಂದಿಸಿರುತ್ತಾರೆ.

***

ಸಾಹಿತ್ಯಿಕ ಕೊಡುಗೆ

ಜೀವನದಲ್ಲಿ ನಡೆದ ಪ್ರತಿಯೊಂದು ಘಟನೆಗಳು ಒಂದು ಉತ್ತಮ ಅನುಭವ ನೀಡುತ್ತವೆ. ಆ ಅನುಭವದಿಂದ ಎಚ್ಚೆತ್ತು ಬದುಕಿದರೆ ಆತ ಅನುಭಾವಿಯಾಗುತ್ತಾನೆ. ಶರಣನಾಗುತ್ತಾನೆ. ಪ್ರತಿನಡೆ ನುಡಿಗಳು ಒಂದಾಗಿ ಅರಿತವನಾಗುತ್ತಾನೆ. ಅರಿವೇ ಎಲ್ಲಕ್ಕಿಂತ ಮುಖ್ಯವಾದದು. ಅರಿವೇ ಗುರುವಾಗಬೇಕು. ನುಡಿಯೇ ಜ್ಯೋತಿರ್ಲಿಂಗವಾಗಬೇಕು. ಆವಾಗ ಬದುಕು ಹಸನಾಗುತ್ತದೆ. ಈ ನಿಟ್ಟಿನಲ್ಲಿ ಗುರಮ್ಮ ಸಿದ್ದಾರಡ್ಡಿಯವರು ಬದುಕುತ್ತಿದ್ದಾರೆ. ೭೫ರ ವಯಸ್ಸಿನಲ್ಲಿಯೂ ೨೫ರ ಹುಮ್ಮಸ್ಸು ತುಂಬಿಕೊಂಡಿರುವ ಉತ್ಸಾಹ ಮೂರ್ತಿಯವರು.

ಯಾರು ನಿರ್ಲಿಪ್ತವಾಗಿ ತಮ್ಮ ಬದುಕನ್ನು ಸವೆಯಿಸುತ್ತಾರೆಯೋ ಅವರ ಬದುಕನ್ನು ಸ್ಮರಿಸಿಕೊಳ್ಳಲು ಜೀವನ ಚರಿತ್ರೆಗಳನ್ನು ಬರೆಯಲ್ಪಡುತ್ತವೆ. ಅಂಥವರ ಸಾಲಿನಲ್ಲಿ ನಿಲ್ಲಬೇಕೆಂಬ ಇಚ್ಛೆಯಿಂದ ಗುರಮ್ಮ ಸಿದ್ಧಾರಡ್ಡಿಯವರು ಸಾಹಿತಿಯಾಗಬೇಕು. ಸಾಧಕಿಯಾಗಬೇಕು, ಕರ್ನಾಟಕದ ಇತಿಹಾಸದಲ್ಲಿ ಹೆಜ್ಜೆ ಗುರುತು ಮೂಡಿಸಬೇಕೆಂಬ ಗುರಿ ಹೊಂದಿದ್ದರು. ಶಿಕ್ಷಣ ರಂಗಕ್ಕೆ ತನ್ನದೇ ಆದ ಕೊಡುಗೆ ನೀಡಿ ಜನರ ಗೌರವಕ್ಕೆ ಪಾತ್ರಳಾಗಬೇಕೆಂಬ ಹಂಬಲವಿತ್ತು. ಸಾಹಿತಿಯಾಗುವ ಅವರ ಕನಸು ಒಬ್ಬ ಸಹೃದಯಿಯಾಗುವಂತೆ ಮಾಡಿದೆ ಎನ್ನುತ್ತಾರೆ.

ಇಂಗ್ಲಿಷ ಎಂ.ಎ.ವರೆಗೆ ಓದಿದ ಇವರು ಆಗಾಗ ಬರೆಯುವ ಹವ್ಯಾಸ ಇಟ್ಟುಕೊಂಡಿದ್ದಾರೆ. ಸಾಹಿತ್ಯ ರಚನೆಯಲ್ಲಿ ಆಸಕ್ತರು. ಪದವಿಧರೆಯಾದ ಗುರಮ್ಮನವರು "ಸಹಕಾರಿ ಕ್ಷೇತ್ರದಲ್ಲಿ ಮಹಿಳೆ" ಮತ್ತು "ಉಳಿತಾಯದಲ್ಲಿ ಮಹಿಳೆ" ಎಂಬ ಲೇಖನಗಳನ್ನು ಬರೆದಿದ್ದಾರೆ. ಹಾಗೂ Inner wheel ಸೋವಿನಿಯರ್‌ಗೆ "Power of Prayer" ಎಂಬ ಲೇಖನ ಬರೆದಿದ್ದಾರೆ. ಅಲ್ಲದೇ ಅನೇಕ ರೇಡಿಯೋ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆಂಗ್ಲ ಎಂ.ಎ. ವರೆಗೆ ಓದಿದ್ದರೂ ಇವರೊಬ್ಬ ಕನ್ನಡ ಪ್ರೇಮಿಗಳು ಎನ್ನುವುದರಲ್ಲಿ ಎರಡು ಮಾತಿಲ್ಲ!

ಕನ್ನಡವನ್ನುಳಿದೆನಗೆ ಅನ್ಯ ಜೀವನವಿಲ್ಲ
ಕನ್ನಡವೇ ಎನ್ನುಸಿರು । ಪೆತ್ತೆನ್ನ ತಾಯಿ
ಕನ್ನಡವೇ ಧನಧಾನ್ಯ । ಕನ್ನಡವೇ ಮನೆಮಾನ್ಯ
ಕನ್ನಡವೇ ಎನಗಾಯ್ತು, ಕಣ್ಣು ಬಾಯಿ

ಎಂಬ ಬೆನಗಲ್ ರಾಮರಾಯರ ಮಾತಿನಂತೆ ಗುರಮ್ಮನವರು ಅಪ್ಪಟ ಕನ್ನಡಾಭಿಮಾನಿಗಳು.ಕರ್ನಾಟಕದಲ್ಲಿ ಮಾತೃ ಭಾಷೆ ಕನ್ನಡವಿದ್ದರೂ ಮನೆಯಲ್ಲಿ ಅನ್ಯಭಾಷೆ ಮಾತನಾಡುತ್ತಾರೆ. ಆದರೆ ಇವರು ಕನ್ನಡವನ್ನೇ ಮಾತನಾಡಬೇಕೆನ್ನುತ್ತಾರೆ. ಬೇರೆ ಭಾಷೆಗಳನ್ನು ಕಲಿಯಬೇಕು. ಮಾತೃಭಾಷೆ ಬಗ್ಗೆ ಅಭಿಮಾನ ಹೊಂದಿರಬೇಕು ಎನ್ನುತ್ತಾರೆ. ಸಾಹಿತ್ಯಾಭಿಮಾನಿಗಳಾದ ಇವರು ಹಲವಾರು ಲೇಖಕರ ಕನ್ನಡ ಪುಸ್ತಕಗಳನ್ನು ಪ್ರಕಟಿಸಲು ಧನ ಸಹಾಯ ಮಾಡಿದ್ದಾರೆ. ಮಕ್ಕಳಿಗೆ, ಗೃಹಣಿಯರಿಗೆ ಅತಿ ಉಪಯುಕ್ತವಾಗಬಲ್ಲ ಸುಮಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ–

೧. ಶೂನ್ಯ ಸಂಪಾದನೆಯ ರಹಸ್ಯ (೨೦೦೬)
– ಶ್ರೀ ಸಿದ್ರಾಮ ಶರಣರು, ಬೆಲ್ದಾಳ

೨. ನಿಮ್ಮ ಮಕ್ಕಳು ನಿಮ್ಮ ಪ್ರಶ್ನೆಗಳು (೨೦೧೫, ೨೦೧೬, ೨೦೧೮)

– ಡಾ. ಸಿ.ಆರ್. ಚಂದ್ರಶೇಖರ್

3. Healthy mind your children your questions (2016, 18)

- C.R. Chandrashekhar

೪. ಖಿನ್ನತೆ ಬನ್ನಿ ನಿವಾರಿಸೋಣ (೨೦೦೭)

– ಡಾ. ಸಿ.ಆರ್. ಚಂದ್ರಶೇಖರ್

೫. ಕ್ರೀಡಾ ದಿಕ್ಸೂಚಿ

– ಮಲ್ಲಿಕಾರ್ಜುನ ಎಂ. ಟಂಕಸಾಲಿ

೬. ಸಾವಿನಚೆಗೂ ಸಮಾಜ ಸೇವೆ (೨೦೧೯)

–ಡಾ. ನಾ. ಸೋಮೇಶ್ವರ

೭. ಪರೀಕ್ಷಾ ಭಯಬೇಡ, ಇದೋ ಇಲ್ಲಿದೆ ಯಶಸ್ಸಿನ ಮಾರ್ಗ

– ಡಾ. ನಾ. ಸೋಮೇಶ್ವರ

೮. ಕಲಿಕೆ, ಓದು, ನೆನಪು

– ಡಾ. ನಾ. ಸೋಮೇಶ್ವರ

೯. ಸುಲಿದ ಬಾಳೆಹಣ್ಣು (ಜನಪದ ಹನಿಗವನ ಸಂಕಲನ)

– ಎಸ್.ಬಿ. ಕುಚಬಾಳ

೧೦. ಹುಲಿಯ ಹಾಲಿನ ಗಿಣ್ಣ

– ಎಕೆ ರಾಮೇಶ್ವರ

೧೧. ಹಕ್ಕಿ ಹಾಡುತಿದೆ

– ಎಕೆ ರಾಮೇಶ್ವರ

ಓದಿನ ಗೀಳು ಹೊಂದಿರುವ ಇವರು ಪ್ರತಿದಿನ ಓದುವ ಹವ್ಯಾಸ ಹಾಕಿಕೊಂಡಿದ್ದಾರೆ. ಅವರೇ ಹೇಳುವಂತೆ ಒಮ್ಮೊಮ್ಮೆ ಮಧ್ಯರಾತ್ರಿ ಎಚ್ಚರವಾಗಿ ನಿದ್ರೆ ಬರದಿದ್ದಾಗ ಒಂದು ಪುಸ್ತಕ ತೆಗೆದುಕೊಂಡು ಓದುತ್ತಿದ್ದರೆ ಬೆಳಗಾಗಿರುವದೇ

ಗೊತ್ತಾಗುವುದಿಲ್ಲವೆನ್ನುತ್ತಾರೆ. ಓದು ನನ್ನ ಹವ್ಯಾಸಗಳಲ್ಲಿ ಮೊದಲನೆಯದು ಎನ್ನುವರು.

ಪುಸ್ತಕ ನನ್ನ ಗೆಳತಿ, ಮಾರ್ಗದರ್ಶಿ, ಜ್ಞಾನಜ್ಯೋತಿ. ಒಳ್ಳೆಯ ಪುಸ್ತಕಗಳನ್ನು ಓದುವುದರಿಂದ ನಮ್ಮ ಶಬ್ದಸಂಗ್ರಹ ಬೆಳೆಯುತ್ತದೆ. ಭಾಷೆಯ ಜ್ಞಾನ ಆಗುತ್ತದೆ. ವ್ಯವಹಾರ ವೃದ್ಧಿಸುತ್ತದೆ ಎನ್ನುತ್ತಾರೆ.

ಧಾರ್ಮಿಕ ಸೇವೆ

ಮಾನವ ಯಾವುದನ್ನು ಪವಿತ್ರ ಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂದು ಹೇಳುತ್ತಾರೆ. ಯಾವುದನ್ನು ಪೂಜ್ಯಭಾವನೆಯಿಂದ ನೋಡುತ್ತೇವೆಯೋ ಭಯಭಕ್ತಿಯಿಂದ ಕಾಣುತ್ತೇವೆಯೋ, ಯಾವುದರೊಂದಿಗೆ ಗೌರವಾದರದ ಸಂಬಂಧ ಹೊಂದಿರುತ್ತೇವೆಯೋ ಅದೆಲ್ಲವು ಧರ್ಮದಡಿಯಲ್ಲಿಯೇ ಬರುತ್ತವೆ. ಒಳ್ಳೆಯದು, ಲೇಸೆಂದು ತಿಳಿಯುವ ಪ್ರತಿಯೊಂದು ವಿಷಯ ಧರ್ಮದ ಪರಿಸರವೇ ಆಗಿರುತ್ತದೆ. ಅದಕ್ಕೆ ಶರಣರು "ಸಕಲ ಜೀವಾತ್ಮರಿಗೆ ಲೇಸನ್ನೆ ಬಯಸುವುದೇ" ಧರ್ಮವೆಂದರು. ಅದನ್ನು ದಯೆಯಿಂದ ಗುರುತಿಸಿದರು.

"ದಯವಿಲ್ಲದ ಧರ್ಮಯಾವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲ ಸಂಗಯ್ಯನಂತಲ್ಲದೊಲ್ಲಯ್ಯ."

ಜಗತ್ತಿನ ಎಲ್ಲಾ ಪ್ರಮುಖ ಧರ್ಮಗಳು ಸಕಲ ಜೀವಿಗಳಲ್ಲಿ ದಯೆಯ ಭಾವವನ್ನು ಹೊಂದಿರಬೇಕೆಂಬುದನ್ನೆ ಹೇಳುತ್ತವೆ. ಯಾರು ಯಾರೊಡನೆಯೂ ದ್ವೇಷಭಾವ ಉಳ್ಳವರಾಗಿರಬಾರದು. ಪರಸ್ಪರ ಪ್ರೀತಿಯಿಂದಿರುವುದೇ ಧರ್ಮ. ಅಂತೆಯೇ ಗುರಮ್ಮ ಸಿದ್ದಾರಡ್ಡಿಯವರು ಇತರರ ದುಃಖವನ್ನು ಕಂಡು ಮನ

ಕರಗುವ, ಮರುಗುವ ಸ್ವಭಾವದವರು, ಮಾನಸಿಕ ನೆಮ್ಮದಿಗೆ ದಯೆ ಕರುಣೆ ಅಗತ್ಯವೆಂದರಿತವರು ಇನ್ನೊಬ್ಬರ ದುಃಖದಲ್ಲಿ ಭಾಗಿಯಾಗಬೇಕು. ಮತ್ತು ಸುಖದಲ್ಲಿ ಮನಸ್ಸು ಪ್ರಸನ್ನಗೊಳಿಸಿಕೊಳ್ಳಬೇಕೆನ್ನುವರು. ಜಾತಿ ಮತಭೇದ ಮಾಡದೆ "ಮಾನವ ಜಾತಿ ತಾನೊಂದೆ ವಲಂ" ಎಂಬ ಪಂಪನ ನುಡಿಯಂತೆ ನಡೆಯುತ್ತಿರುವವರು. ಇವರೊಬ್ಬ ಅಪ್ಪಟ ಶರಣ ತತ್ತ್ವಾನುಯಾಯಿಯಾಗಿದ್ದಾರೆ. ತಮ್ಮ ಮಾತು ಕೆಲಸಗಳಿಂದ ಯಾವ ಜೀವಿಗೂ ನೋವಾಗದಂತೆ ನಡೆದು ಕೊಳ್ಳುತ್ತಾರೆ.

ಇವರು ಬೀದರಿಗೆ ಬಂದಾಗ ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಚೆನ್ನಬಸವ ಪಟ್ಟದೇವರ ಶಿಷ್ಯರಾಗಿ, ಬೆಲ್ದಾಳ ಶರಣರ ನೇತೃತ್ವದಲ್ಲಿ ಮಹಾಮನೆಯನ್ನು ಹುಟ್ಟು ಹಾಕುವಲ್ಲಿ ಕಾರಣೀಕರ್ತರಾಗಿದ್ದಾರೆ. "ಶರಣರ ಬರವೆಮಗೆ ಪ್ರಾಣ ಜೀವಾಳವಯ್ಯ" ಎನ್ನುವಂತೆ ಶರಣರನ್ನು ಕಂಡರೆ ಬಹಳ ಗೌರವ ಇವರಿಗೆ ಈ ಭಾವನೆಯೇ ಇವರ ಬೀದರ ಕರ್ಮಭೂಮಿಯಾಗಿ ನೆಲೆಯೂರಲು ಕಾರಣವಾಯಿತು.

ಡಾಕ್ಟರ್ ಎಸ್. ಎಸ್. ಸಿದ್ದಾರಡ್ಡಿಯವರು ತಮ್ಮ ವೃತ್ತಿಯಲ್ಲಿ ಬಿಡುವಿಲ್ಲದ ಕೆಲಸದಲ್ಲಿ ಇರುತ್ತಿದ್ದರು. ಆವಾಗಿನ್ನೂ ಗುರಮ್ಮನವರಿಗೆ ಮಕ್ಕಳಾಗಿರಲ್ಲಿಲ್ಲ. ಹೊಸದಾಗಿ ಮದುವೆಯಾಗಿ ಕೌಟುಂಬಿಕ ಜೀವನ ನಡೆಸಬೇಕಾದವರು. ಆದರೆ ಸಿನಿಮಾ ಔಟಿಂಗ ಅಂತ ಆನಂದದಿಂದ ವಿಹರಿಸಬೇಕೆಂಬ ಆಸೆಯುಳ್ಳ ಇವರಿಗೆ ಮನೆ ಜೈಲುವಾಸವೆನಿಸಿತು. ಆದರೆ ಚಿಕ್ಕಂದಿನಿಂದ ಮಠಗಳ ಮೇಲೆ ಪ್ರೀತಿ ಜಾಸ್ತಿಯಿತ್ತು. ಶತಾಯುಷಿ ಭಾಲ್ಕಿ ಹಿರೇಮಠ ಚೆನ್ನಬಸವ ಪಟ್ಟದ್ದೇವರು ಅವರ ಆರಾಧ್ಯ ದೇವರಾದರು. ಅವರ ಉತ್ತೇಜನದಿಂದ ಅವರಿಗೆ ಹೊಸ ಜೀವನ ಬಂತು ಎನ್ನುತ್ತಾರೆ. ಅವರ ಮೃದು ಮಾತು ಮಾರ್ಗದರ್ಶನ, ತಾಯಿ ನೀನು ಬಹಳ ದೊಡ್ಡ ವ್ಯಕ್ತಿಯಾಗಬೇಕು. ನಿನ್ನಿಂದ ಸಾಮಾಜಿಕ ಕಾರ್ಯಗಳಾಗಬೇಕೆಂದು

ಮಾಡಿದ ಆಶೀರ್ವಾದವೇ ಅವರಿಗೆ ಜೀವಕಳೆ ತುಂಬಿತು. ಅವರ ಮಾತು ಮನದಾಳದಲ್ಲಿ ಅಚ್ಚಳಿಯದೇ ಉಳಿಯಿತು.

ಭೀಮಣ್ಣ ಮಜಗೆಯವರು ಅವರ ಈ ಸಸಿಗೆ ನೀರೆರೆದರು. ದಿನೇ ದಿನೇ ಜನ ಸಂಪರ್ಕ ಹೆಚ್ಚಾಯಿತು. ಗುರಮ್ಮನವರೇ ಹೇಳುವಂತೆ ಬೀದರ ನನ್ನದಾಯಿತ್ತು. ನಾನು ಬೀದರಿನವಳಾದೆ. ಬೀದರಿನ ಜನತೆಯಲ್ಲಿ ಒಬ್ಬಳಾದೆ. ಈ ಮಟ್ಟಕ್ಕೆ ಬರಲು ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದ ಡಾ. ಚೆನ್ನಬಸವ ಪಟ್ಟದ್ದೇವರ ಆಶೀರ್ವಾದವೇ ಕಾರಣ ಎನ್ನುತ್ತಾರೆ.

ಅಲ್ಲದೆ ಬೆಳ್ದಾಳ ಶರಣರು ನನಗೆ ಕೈ ಹಿಡಿದು ಸನ್ಮಾರ್ಗದತ್ತ ನಡೆಸಿದರು. ಭಾಷಣ ಕಲಿಸಿದರು. ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸಲು ಕಲಿಸಿದರು ಎಂದು ಹೇಳುತ್ತಾರೆ. ಹೀಗೆ ಧಾರ್ಮಿಕ ವ್ಯಕ್ತಿಗಳ ಪ್ರಭಾವ ಇವರಿಗೆ ಮೊದಲಿಂದಲೇ ಇರುವುದು ಕಾಣುತ್ತೇವೆ.

ಕೊಡುಗೈ ದಾನಿಗಳಾದ ಗುರಮ್ಮನವರು ಪ್ರತಿವರ್ಷ ಅನೇಕ ಮಠ ಮಾನ್ಯಗಳಿಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಇನ್ನಿಲ್ಲದಂತೆ ಸಹಾಯ ಮಾಡುತ್ತಾರೆ. ಇವರು ಗಣೇಶ ಉತ್ಸವ, ಶ್ರಾವಣ ಮಾಸದ ಸಮಾಪ್ತಿ ಖಾಂಡಗಳಿಗೆ, ಪ್ರವಚನಗಳಿದ್ದಾಗ ಅನ್ನ ದಾಸೋಹ ಗೈಯುತ್ತಾರೆ. ಜನೋಪಯೋಗಿಯಾಗುವ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ದಾನ ಕೊಡುತ್ತಾರೆ. ಆದರೆ ಕೊಟ್ಟದ್ದು ಎಲ್ಲಿಯೂ ಹೇಳಿಕೊಳ್ಳದ ದೊಡ್ಡಗುಣ ಅವರದು. ದಾನ-ಧರ್ಮ ದಾಸೋಹಗಳು ಮೈಗೂಡಿಸಿಕೊಂಡವರು.

"ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡೊಂಗೂರ!
ಮಾಡಿದೆನೆನ್ನದಿರಾ ಲಿಂಗಕ್ಕೆ ! ಮಾಡಿದೆನೆನ್ನದಿರಾ ಜಂಗಮಕ್ಕೆ

ಮಾಡಿದೆನೆಂಬುದು ಮನದಲ್ಲಿಲ್ಲದ್ದಿರೆ
ಬೇಡಿದನೀವ ನಮ್ಮ ಕೂಡಲಸಂಗಮದೇವ

ಎಂಬಂತೆ ಮಾಡಿದ್ದು ಎಂದೂ ಸ್ಮರಿಸಿಕೊಳ್ಳದ ಶರಣಜೀವಿ. ಶರಣರ ನಡೆ–ನುಡಿಗೆ ಮಾರುಹೋದ ಇವರು ಯಾವಾಗಲೂ ಸತ್ಸಂಗ, ಪೂಜೆ, ಧ್ಯಾನಾದಿಗಳಲ್ಲಿ ತಮ್ಮ ಬಿಡುವಿನ ಸಮಯ ಕಳೆಯುತ್ತಾರೆ. ಪ್ರತಿದಿನ ಯೋಗಭ್ಯಾಸದ ಮೂಲಕ ಚಿತ್ತದ ಏಕಾಗ್ರತೆಯನ್ನು, ದೇಹದ ಆರೋಗ್ಯವನ್ನು ಕಾಪಾಡಿಕೊಂಡು ಬರುತ್ತಾರೆ. ಅನುಭಾವಿಗಳ ಮಾತುಗಳು ಮತ್ತು ಅವರ ಸಂಗ ಇವರಿಗೆ ಬಲು ಮೆಚ್ಚಿಗೆ ದೇವರ ದಾಸಿಮಯ್ಯನಂತೆ.

ಕರಿಯಿನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯೊಂದರಳಿಗೆ ಇತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥ.

ಎನ್ನುವಂತೆ ಮಹಾತ್ಮರ ಸಂಪರ್ಕದಿಂದ ದಿವ್ಯಜ್ಞಾನ ಅರಿಯಲು ಸಾಧ್ಯವಾಗುತ್ತದೆಂಬ ನಿಟ್ಟಿನಲ್ಲಿ ಅನುಭಾವಕ್ಕೆ ಮಹತ್ವ ಕೊಡುತ್ತಾರೆ.

ಮೂಢನಂಬಿಕೆಯಿಂದ ದೂರವಿದ್ದ ಇವರು ನಿರ್ಮಲ ಮನದ ಭಾವನೆಗಳಿಗೆ ಬೆಲೆ ಕೊಡುತ್ತಾರೆ. ಯಾರ ಅಂತರಂಗ ಶುದ್ಧವಾಗಿರುತ್ತದೆಯೋ ಅವರ ಬಹಿರಂಗವೂ ಶುದ್ಧವಾಗಿರುತ್ತದೆಂಬ ಬಸವಣ್ಣನವರ ವಚನ ಒಪ್ಪಿಕೊಳ್ಳುತ್ತಾರೆ. ಸತ್ಯ, ಶಾಂತಿ, ಪ್ರೀತಿ, ಸಹೋದರತೆಯಂತಹ ಮೌಲ್ಯಗಳಿಗೆ ಬೆಲೆಕೊಡುತ್ತಾರೆ. ಮತ್ತು ತಮ್ಮ ಜೀವನದಲ್ಲಿ ಅನುಪಾಲಿಸಿಕೊಂಡು ಬಂದಿದ್ದಾರೆ.

ಎಲ್ಲರಿಗೂ ತನ್ನವರೆಂಬ ಭಾವ ಇವರ ರಕ್ತದಲ್ಲಿಯೇ ಬೆರೆತುಹೋಗಿದೆ.

"ಇವನಾರವ ಇವನಾರವ ಇರನಾರವನೆಂದಿಸದಿರಯ್ಯ
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ
ಇವ ನಮ್ಮ ಮನೆಯ ಮಗನೆಂದೆನಿಸಯ್ಯ
ಕೂಡಲಸಂಗಮದೇವನ

ಎನ್ನುವಂತೆ, ಇವರ ಸುತ್ತಲಿನ ಜನ ಜಾತಿ ಭೇದವೆನ್ನದೆ ಮಾತೃಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿರುವುದು ಇವರ ಈ ಸ್ವಭಾವದಿಂದಲೇ.

ಸರ್ವರ ಅಭ್ಯುದಯ ಬಯಸುವ ಇವರು ಸರ್ವರಿಗೂ ಎಲ್ಲಾ ಅವಶ್ಯಕ ವಸ್ತುಗಳು ದೊರೆಯುವಂತಾಗಬೇಕು. ಪ್ರಾಮಾಣಿಕ ದುಡಿಮೆ ತಮ್ಮದಾಗಿಸಿ ಕೊಳ್ಳಬೇಕೆಂಬ ಮನೋಭಾವದವರು. ಬಿದ್ದವರನ್ನು ಮೇಲೆಬ್ಬಿಸುವ ಮಾನವೀಯ ಗುಣವುಳ್ಳವರು. ಅನೇಕ ಧಾರ್ಮಿಕ ಸಂಸ್ಥೆಗಳ ಸದಸ್ಯತ್ವ ಹೊಂದಿದ್ದಾರೆ.

ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷರಾಗಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದತ್ತಿ ದಾನಿಗಳಾಗಿ, ಎಲ್ಲ ಧಾರ್ಮಿಕ ಮಾಸ ಪತ್ರಿಕೆಗಳ ಚಂದಾದಾರರಾಗಿ, ಕೆಲವೊಂದು ಸ್ಥಳೀಯ ಪತ್ರಿಕೆಗಳಿಗೂ ಜಾಹೀರಾತು ನೀಡಿ ಪತ್ರಿಕೆಗಳಿಗೆ ಪ್ರೋತ್ಸಾಹಿಸುತ್ತಿದ್ದಾರೆ. "ಷಟ್‌ಸ್ಥಲ ದರ್ಶನ" ಎಂಬ ಗ್ರಂಥಕ್ಕೆ ದಾನಿಗಳಾಗಿದ್ದಾರೆ.

ಸಮಾಜ ಅಭಿವೃದ್ಧಿಯ ಚಿಂತಕಿ

ಧೀಮಂತ ನಾಯಕಿ ಉತ್ತಮ ಆಡಳಿತಗಾರಿಕೆಗೆ ಹೆಸರಾದ ಆದರ್ಶ ಮಹಿಳೆಯಾಗಿರುವ ಗುರಮ್ಮ ಸಿದ್ದಾರೆಡ್ಡಿಯವರು ಮಹಿಳಾ ಕುಲಕ್ಕೆ ಮಾದರಿಯಾಗಿದ್ದಾರೆ. ಅವರು ಮಾಡಿರುವ ಸಮಾಜ ಸೇವೆ ಅಭಿನಂದನೀಯ. "ಪರಹಿತಾರ್ಥಂ ಇದಂ ಶರೀರಂ" ಎನ್ನುವಂತೆ ಈ ಶರೀರದ ಸಾರ್ಥಕತೆ ಹೊಂದುವುದು ಪರರ ಹಿತದಲ್ಲಿಯೇ ತನ್ನ ಅಮೂಲ್ಯ ವೇಳೆಯನ್ನು ವ್ಯಯಮಾಡುತ್ತಾ ಬಂದಿರುವ ಇವರು ಸಮಾಜ ಸೇವೆಯಲ್ಲಿಯೇ ಸಂತೋಷ ಕಂಡವರು. ಅವರು ಮಾಡಿರುವ ಕಾರ್ಯಗಳು ನಮ್ಮ ಕಣ್ಣ ಮುಂದಿವೆ.

* ತವರು ಜಿಲ್ಲೆ ವಿಜಯಪುರಕ್ಕೆ ಹಾಗೂ ಕಾರ್ಯಕ್ಷೇತ್ರ ಬೀದರ ಜಿಲ್ಲೆಗೆ ಗುರುತರವಾದ ಕೊಡುಗೆ ನೀಡಬೇಕೆಂಬ ಹಂಬಲ ಬಹುದಿನಗಳಿಂದ ಇರಿಸಿಕೊಂಡ ಇವರು ಮಹಿಳಾ ಟಾಸ್ಕ ಫೋರ್ಸ್ ಸಮಿತಿಯ ಅಧ್ಯಕ್ಷೆಯಾದ ಬಳಿಕ ಮಾಡಿದ ಮಹತ್ತರ ಕೆಲಸ ಅವಿಸ್ಮರಣೀಯವಾಗಿದೆ. ಮೊದಲು ಅವರ ಜನ್ಮಭೂಮಿಯಾದ ವಿಜಯಪುರದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಗೆ ರೂವಾರಿಯಾಗಿದ್ದಾರೆ. ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನೆ ಮಧ್ಯಂತರ ವರದಿಯನ್ನು ೨೦೦೧ರ ಮಾರ್ಚ್ ೮ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವರದಿಯ ಪುಟಸಂಖ್ಯೆ ೧೨ರಲ್ಲಿ ೧೩ನೆಯ ಅಂಶವನ್ನಾಗಿ ಶಿಫಾರಸ್ಸು ಮಾಡಲಾಗಿದೆ.

ಲಕ್ಷಗಟ್ಟಲೆ ವಿದ್ಯಾರ್ಥಿನಿಯರ ಶೈಕ್ಷಣಿಕ ಜೀವನಕ್ಕೆ ಹೊಸ ರೂಪ ತಂದುಕೊಟ್ಟರು. ಹಾಗೆಯೇ ತನ್ನ ಕಾರ್ಯಕ್ಷೇತ್ರ ಬೀದರನಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ಸ್ಥಾಪನೆ ಮಾಡಿ ಸಾವಿರಾರು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನಾಂದಿ ಹಾಡಿದ ಧೀಮಂತ ಮಹಿಳೆಯೆನಿಸಿದ್ದಾರೆ. ಬೀದರಿನ ಡಿ.ಸಿ.ಸಿ. ಬ್ಯಾಂಕ್ ಸ್ವ-ಸಹಾಯ ಸಂಘದ ತರಬೇತಿ ಈಗ ವಿಶ್ವಮಾನ್ಯತೆ ಪಡೆದಿದೆ. ಹೊರ ದೇಶದಿಂದ ಈ ಸಂಸ್ಥೆಗೆ ತರಬೇತಿ ಪಡೆಯಲು ಬರುತ್ತಿರುವುದು ಹೆಮ್ಮೆಯ ವಿಷಯ.

* ೧೯೮೨ ರಲ್ಲಿ ಇನ್ನರ್ ವೀಲ್ ಕ್ಲಬ್‌ಗೆ ಸಂಸ್ಥಾಪಕ ಅಧ್ಯಕ್ಷೆಯಾಗಿ ಮುಂದೆ ಬಂದರು. ೧೯೮೯ ರಲ್ಲಿ ಜಿಲ್ಲಾ ೩೧೬ ಇನ್ನರ್ ವೀಲ್‌ಗೆ ಅಧ್ಯಕ್ಷೆಯಾಗಿ ಆಯ್ಕೆಯಾದ ಬೀದರಿನ ಮೊದಲನೆಯ ಮಹಿಳೆಯಾಗಿದ್ದಾರೆ.

೧. ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳ ಸ್ಥಾಪನೆ:

೧೯೭೬ರಿಂದ ೧೯೭೯ರ ವರೆಗೆ ಬೀದರ ಮಹಿಳಾ ಮಂಡಳದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ನಂತರ ೧೯೮೫ರ ಡಿಸೆಂಬರ್ ೧೮ ರಂದು ಸಮಾನ ಮನಸ್ಕರಾದ ಶಾಂತಾ ಕೃಷ್ಣಮೂರ್ತಿ, ಶಕುಂತಲಾ ಬೆಲ್ದಾಳೆ, ಶಕುಂತಲಾ ಡೋಣಗಾಪುರೆ, ಶಕುಂತಲಾ ಚಂದಾ, ಪುಣ್ಯವತಿ ವಿಸಾಜಿ, ವಿದ್ಯಾವತಿ ಸಾನೆ, ಯಶೋದಾ ದಾಸಪ್ಪನವರ ಹಾಗೂ ಇತರರು ಸೇರಿಕೊಂಡು ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳ ಹುಟ್ಟು ಹಾಕಿದರು. ಪ್ರಾರಂಭದಲ್ಲಿ ಬೀದರಿನ ನೆಹರು ಯುವ ಕೇಂದ್ರ ಹಾಗೂ ಭಾರತೀಯ ಕುಟುಂಬ ಯೋಜನೆ ಸಂಸ್ಥೆ, ಜಿಲ್ಲಾ ಕೈಗಾರಿಕಾ ತರಬೇತಿ ಕೇಂದ್ರ, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆದು ವೃತ್ತಿ ತರಬೇತಿಗಳನ್ನು ನಡೆಸುತ್ತಾ ಬಂದಿದ್ದಾರೆ.

ಒಟ್ಟಾರೆಯಾಗಿ ಈ ಮಹಿಳಾ ಮಂಡಳದ ಮೂಲಕ ಮಹಿಳೆಯರಿಗೆ ಉತ್ತೇಜನ ಕೊಟ್ಟು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಅವರ

ಅಭಿವೃದ್ಧಿ ಮಾಡುವದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಅಲ್ಲದೆ ಗ್ರಾಮೀಣ ಭಾಗದ ಮಹಿಳೆಯರಿಗೆ, ವಿಕಲಚೇತನರಿಗೆ, ವಿಧವೆಯರಿಗೆ, ವಿವಾಹ ವಿಚ್ಛೇದಿತರಿಗೆ, ನೊಂದ ಮಹಿಳೆಯರಿಗೆ ಮಾನಸಿಕವಾಗಿ ಆತ್ಮಸ್ಥೈರ್ಯ ತುಂಬುವುದು. ಅವರಿಗೆ ವ್ಯಕ್ತಿ ವಿಕಸನ ತರಬೇತಿ ನೀಡುವದು, ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಮಹಿಳಾ ಜಾಗೃತಿ ಶಿಬಿರಗಳನ್ನು ಏರ್ಪಡಿಸುವುದು ಮಹಿಳಾ ಕಾನೂನು ಅರಿವು ಮೂಡಿಸುವುದು ಮುಖ್ಯ ಗುರಿಯಾಗಿದೆ.

ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳವು ರಾಜ್ಯ ಮಟ್ಟದ ಸಂಸ್ಥೆಯಾಗಿದೆ. ಕರ್ನಾಟಕ ಸರಕಾರದ ಕಾರ್ಯಕ್ರಮಗಳಾದ ಯುವತಿಯರಿಗಾಗಿ ರಜಾದಿನಗಳ ಶಿಬಿರವನ್ನು ೧೯೯೦ರಲ್ಲಿ ಮಾಡಿರುತ್ತಾರೆ. ೧೯೯೨ ರಲ್ಲಿ ವಿಧವೆಯರಿಗಾಗಿ ಸ್ವಶಕ್ತಿ ಕಾರ್ಯಕ್ರಮ ಮಾಡುವ ಮೂಲಕ ವಿಕಲಚೇತನರಿಗಾಗಿ ಸಂಸ್ಥೆ ಹೊಸ ಹೆಜ್ಜೆ ಕಾರ್ಯಕ್ರಮ ಹಾಕಿತು. ವಿಕಲಚೇತನರಿಗೆ ೨೦ ಹೊಲಿಗೆ ಯಂತ್ರಗಳನ್ನು ಕೊಡಿಸಲಾಗಿತ್ತು.

ಈ ಸಂಸ್ಥೆಯ ಅಡಿಯಲ್ಲಿ ೧೯೯೨ರಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯಿಂದ ಮಂಜೂರಾತಿ ಪಡೆದರು. ಇಂದಿಗೆ ಈ ಸಂಸ್ಥೆಯ ಅಡಿಯಲ್ಲಿ ಉಡುಪು ತಯಾರಿಕಾ ಘಟಕವನ್ನು ನಡೆಸುತ್ತಿದ್ದಾರೆ.

* ಗ್ರಾಮೀಣ ಭಾಗದಲ್ಲಿ ಅನೇಕ ಮಹಿಳಾ ಜಾಗೃತಿ ಶಿಬಿರಗಳನ್ನು ನಡೆಸಿದ್ದಾರೆ. ಆಯುರ್ವೇದ ಔಷಧಿ ಪದ್ಧತಿ, ಮನೆಮದ್ದುಗಳ ಬಗೆಗೆ ಗ್ರಾಮೀಣ ಮಹಿಳೆಯರಿಗೆ ತಿಳುವಳಿಕೆ ನೀಡಿದ್ದಾರೆ. ಆರೋಗ್ಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ ಮಹಿಳೆಯರಿಗೆ ಅನೇಕ ರೋಗಗಳ ಬಗ್ಗೆ ಮಾಹಿತಿ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ.

* ನಗರದ ಕೊಳಚೆ ಪ್ರದೇಶದಲ್ಲಿ ಶಿಶು ಪಾಲನಾ ಕೇಂದ್ರಗಳನ್ನು ನಡೆಸುತ್ತಾ ಬಂದಿದ್ದಾರೆ. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಸರಕಾರದ ಅನುದಾನ ಪಡೆದು ಹಿರಿಯ ನಾಗರಿಕರಿಗಾಗಿ ಹಗಲು ಸೇವಾ ಕೇಂದ್ರವನ್ನು ಗುಲಬರ್ಗಾ ನಗರದಲ್ಲಿ ನಡೆಸುತ್ತಿದ್ದಾರೆ.

* ೨೦೦೧ರಲ್ಲಿ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆದು ಸಿ.ಬಿ.ಆರ್. (ಸಮುದಾಯ ಅಭಿವೃದ್ಧಿ ಯೋಜನೆ) ನಡೆಸಿದ್ದಾರೆ.

* ಈ ಮಂಡಳಿಯ ಅಡಿಯಲ್ಲಿ ಭಾರತ ಸರಕಾರದ ಅನುದಾನದಿಂದ ೨೦೦೦ನೇ ಸಾಲಿನಿಂದ ಇಲ್ಲಿಯವರೆಗೆ ಮದ್ಯವ್ಯಸನ ಮುಕ್ತಿ ಕೇಂದ್ರವನ್ನು ನಡೆಸುತ್ತಿದ್ದಾರೆ.

* ಕರ್ನಾಟಕ ರಾಜ್ಯ ಸಕಾರದಿಂದ ಅನುದಾನ ಪಡೆದು ೨೦೦೧ ರಿಂದ ಇಲ್ಲಿಯವರೆಗೆ "ಸಾಂತ್ವನ ಸಹಾಯವಾಣಿ"ಯನ್ನು ನಡೆಸುತ್ತಿದ್ದಾರೆ.

* ೨೦೦೦-೨೦೦೧ ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಕರಕೌಶಲ್ಯತೆ ಹೊಂದಿದ ೨೦ ಜನ ವಿಕಲಚೇತನ ಮಹಿಳೆಯರಿಗೆ ವಸತಿ ಕಾರ್ಯಾಗಾರವನ್ನು ಕಟ್ಟಿಸಿಕೊಡಲು ಪ್ರತಿಯೊಂದಕ್ಕೆ ೨೪,೦೦೦=೦೦ ರೂಪಾಯಿಯಂತೆ ಅನುದಾನ ದೊರಕಿತು. ಇವುಗಳನ್ನು ಕಟ್ಟಿಸಲು ಪ್ರತಿಯೊಂದಕ್ಕೆ ೧೮೦೦೦ ರೂಪಾಯಿ. ಈ ಸಂಸ್ಥೆಯಿಂದ ಖರ್ಚು ಮಾಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ೨೦ ಜನ ವಿಕಲಚೇತನ ಮಹಿಳೆಯರಿಗೆ ಈ ಕಟ್ಟಡಗಳನ್ನು ನಿರ್ಮಾಣ ಮಾಡಲು ನಿವೇಶನಗಳನ್ನು ಈ ಸಂಸ್ಥೆಯ ಅಧ್ಯಕ್ಷರಾದ ಗುರಮ್ಮ ಸಿದ್ಧಾರೆಡ್ಡಿಯವರು ತಮ್ಮ ಸ್ವಂತ ನಿವೇಶನಗಳನ್ನು ದೇಣಿಗೆಯಾಗಿ ಕೊಟ್ಟಿದ್ದಾರೆ.

* ೨೦೦೧ ಆಗಷ್ಟ ೨೨ ರಂದು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರು ಈ ಕಟ್ಟಡಗಳ ಉದ್ಘಾಟನೆ ನೆರವೇರಿಸಿದರು.

ಈ ಬಡಾವಣೆಗೆ ಮಾರ್ಗರೆಟ್ ಬಡಾವಣೆ ಎಂದು ಹೆಸರಿಡಲಾಯಿತು. ಇದೊಂದು ಅಪರೂಪದ ಕಾರ್ಯಕ್ರಮವಾಗಿತ್ತು.

* ಶ್ರೀ ಎನ್. ಧರ್ಮಸಿಂಗ ಅವರು ಮುಖ್ಯಮಂತ್ರಿಗಳಾದ ನಂತರ ಬೀದರಿಗೆ ಆಗಮಿಸಿದಾಗ ಅವರ ಅಮೃತ ಹಸ್ತದಿಂದ ಕಾರ್ಗಿಲ್ ಸೈನಿಕನ ಪತ್ನಿ ಸುಜಾತಾ ಅಪ್ಪೆ ಅವರಿಗೆ ೩೦x೪೦ ನಿವೇಶನವನ್ನು ಕೊಟ್ಟಿದ್ದಾರೆ.

* ಬೆಂಗಳೂರಿನಲ್ಲಿ ನಡೆಯುತ್ತಿರುವ ಬೀದರ ಅಸೋಸಿಯೇಶನ್‌ಗೆ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿಯವರು ೩೦x೪೦ ಒಂದು ನಿವೇಶನವನ್ನು ಬೀದರನಲ್ಲಿ ತಮ್ಮ ಸ್ವಂತದ್ದೇ ಕೊಟ್ಟಿದ್ದಾರೆ.

* ಇವರ ಸಮಾಜಮುಖಿ ಕಾರ್ಯ ಕಂಡು ಆಗಿನ ಜಿಲ್ಲಾಧಿಕಾರಿ ಟಿ. ಶ್ಯಾಮ ಭಟ್ ಹಾಗೂ ಡಿ.ಐ.ಸಿ. ಅಧಿಕಾರಿ ಚಂದ್ರಶೇಖರ ಅವರು ಮಹಿಳಾ ಮಂಡಳಿಗೆ ಕೆ.ಐ.ಎ.ಡಿ.ಬಿ. ವತಿಯಿಂದ ೨ ಎಕರೆ ೨೮ ಗುಂಟೆ ಜಮೀನು ಮಂಜೂರಿ ಮಾಡಿದರು. ಅದರಲ್ಲಿ ೮೦ ಜನ ವಿಕಲಚೇತನರು, ವಿಧವೆಯರು, ನಿರ್ಗತಿಕ ಮಹಿಳೆಯರಿಗೆ ಮನೆ ಕಟ್ಟಿ ಕೊಡುತ್ತಿದ್ದಾರೆ. ಇವುಗಳ ಹಕ್ಕುಪತ್ರವನ್ನು ಕರ್ನಾಟಕ ಸರ್ಕಾರದ ಸಚಿವೆ ಉಮಾಶ್ರೀಯವರು ೨೦೧೩ರ ಅಗಸ್ಟ್ ೧೫ರಂದು ವಿತರಿಸಿರುತ್ತಾರೆ.

೨. ವೃತ್ತಿ ತರಬೇತಿ ಕೇಂದ್ರ:

ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳಿ ಪ್ರಾರಂಭವಾದಾಗಿನಿಂದಲೂ ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ವೃತ್ತಿ ತರಬೇತಿ ಕೇಂದ್ರವನ್ನು ನಡೆಸುತ್ತಾರೆ. ಹೊಲಿಗೆ, ಕಸೂತಿ, ಝುರಿ ಕಸೂತಿ, ಹಪ್ಪಳ ಮಾಡುವುದು. ಅಗರಬತ್ತಿ ಮಾಡುವುದು, ಉಡುಪು ತಯಾರಿಕೆ, ಉಲನ್ ಉಡುಪು ತಯಾರಿಕೆ,

ಕಂಪ್ಯೂಟರ್ ಮುಂತಾದವುಗಳಲ್ಲಿ ತರಬೇತಿ ಕೊಡುತ್ತಿದ್ದಾರೆ. ಅನೇಕ ಮಹಿಳೆಯರು ಸ್ವಂತ ಘಟಕ ಸ್ಥಾಪಿಸಿಕೊಂಡು ವೃತ್ತಿನಿರತರಾಗಿ ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ. ಪ್ರಾರಂಭದಿಂದಲೂ ಇಲ್ಲಿಯವರೆಗೆ ಒಟ್ಟು ೨೪೦೦ ಜನ ಮಹಿಳೆಯರು ವಿವಿಧ ಕೋರ್ಸ್‌ಗಳಲ್ಲಿ ವೃತ್ತಿ ತರಬೇತಿ ಪಡೆದಿದ್ದಾರೆ. ಹಾಗೂ ಈ ಸಂಸ್ಥೆಯಿಂದ ೮೧೧ ಹೊಲಿಗೆ ಯಂತ್ರಗಳನ್ನು ಉಚಿತವಾಗಿ ನೀಡಿದ್ದಾರೆ. ಹೊಲಿಗೆ ಯಂತ್ರಗಳನ್ನು ಪಡೆದ ನಂತರ ಅವರು ಕಾರ್ಯ ಮಾಡುತ್ತಿದ್ದಾರೋ ಇಲ್ಲವೋ ಎಂದು ಸಂಸ್ಥೆಯ ಸಿಬ್ಬಂದಿಯವರು ಆಗಾಗ ಮನೆ ಭೇಟಿ ಮಾಡುತ್ತಿರುತ್ತಾರೆ. ಈ ಎಲ್ಲಾ ಕಾರ್ಯಕ್ರಮಗಳಿಂದ ಗುರಮ್ಮ ಸಿದ್ಧಾರೆಡ್ಡಿಯವರು ಸ್ತ್ರೀ ಸಂಕುಲಕ್ಕೆ ಬಾಳದೀಪ್ತಿಯಾಗಿ ಬೆಳಗುತ್ತಿದ್ದಾರೆ.

ಈ ಸಂಸ್ಥೆಯು ರಾಜ್ಯ ಮಟ್ಟದ ಸಂಸ್ಥೆಯಾಗಿರುವದರಿಂದ ಬರೀ ಬೀದರ ಜಿಲ್ಲೆಗೆ ಇವರ ಕಾರ್ಯವ್ಯಾಪ್ತಿ ಇರದೆ ಗುಲಬರ್ಗಾ ಜಿಲ್ಲೆಯವರೆಗೂ ವಿಸ್ತರಿಸಿದೆ. ಕಮಲಾಪೂರದ ವಿಕಲಚೇತನ ಮಹಿಳೆಯರಿಗೆ ಹಾಗೂ ಪುರುಷರಿಗೆ ೨೫ ಹೊಲಿಗೆ ಯಂತ್ರಗಳನ್ನು ಆಗಿನ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶೋಭಾ ಬೆಂಬಳಗಿಯವರಿಂದ ವಿತರಿಸಿದ್ದಾರೆ.

* ಜಿಡಗಾ ಸಂಸ್ಥೆಗೆ ೨೫ ಹೊಲಿಗೆ ಯಂತ್ರಗಳನ್ನು ನೀಡಿದ್ದಾರೆ. ಭಾಲ್ಕಿ ತಾಲೂಕಿನ ವಾಂಜರಖೇಡ ಗ್ರಾಮಕ್ಕೆ ನಾಲ್ಕು ಹೋಲಿಗೆ ಯಂತ್ರಗಳನ್ನು ಹಾಗೂ ಸ್ವಚ್ಛ ಗ್ರಾಮ ಮಾಡಿಸುವ ಸಲುವಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿಯವರು ೫೦,೦೦೦=೦೦ ರೂಪಾಯಿಗಳ ಚೆಕ್ ಅನ್ನು ನೀಡಿರುತ್ತಾರೆ.

* ಯಾದಗಿರಿಗೆ ಹತ್ತು ಹೊಲಿಗೆ ಯಂತ್ರಗಳನ್ನು ವಿತರಣೆ ಮಾಡಿರುತ್ತಾರೆ. ಬೀದರ ಕೈಗಾರಿಕಾ ತರಬೇತಿ ಕೇಂದ್ರದಿಂದ ಕಿತ್ತೂರ ರಾಣಿ ಚೆನ್ನಮ್ಮಾ ಸಂಸ್ಥೆಯ ಮುಖಾಂತರ ತರಬೇತಿ ನೀಡಿದ ಮಹಿಳೆಯರಿಗೆ ೧೯೯೧ ರಿಂದ ೨೦೦೦ರ ಇಸವಿಯವರೆಗೆ ಸ್ಟೈಫಂಡ್ ಹಣದಲ್ಲಿ ಅವರಿಗೆ ಹೋಲಿಗೆ ಯಂತ್ರ ಹಾಗೂ

ಉಲನ್ ಯಂತ್ರಗಳನ್ನು ವರ್ಷಕ್ಕೆ ೨೫ ಮಹಿಳೆಯರಿಗೆ ಒಟ್ಟು ೨೭೫ ಜನ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ನೀಡಿದ್ದಾರೆ. ೧೦ ಜನ ಮಹಿಳೆಯರಿಗೆ ಉಲನ್ ಉಡುಪು ತಯಾರಿಸುವ ಯಂತ್ರಗಳನ್ನು ಕೊಟ್ಟಿದ್ದಾರೆ.

* **ಇತರೆ ಸಂಸ್ಥೆಗಳಿಗೆ ಸಹಕಾರಃ** ಕಿತ್ತೂರ ರಾಣಿ ಚೆನ್ನಮ್ಮ ಮಹಿಳಾ ಮಂಡಳವು ಕೇವಲ ತನ್ಮೂಲಕ ಸಮಾಜ ಸೇವೆ ಮಾಡದೇ ಇತರೆ ಸಂಘ- ಸಂಸ್ಥೆಗಳಿಗೆ ಬೆಳೆಯಲು ಮಾರ್ಗದರ್ಶಕರಾಗಿದ್ದಕ್ಕಾಗಿ ಅನೇಕರು ಈ ಸಂಸ್ಥೆಗೆ ಚಿರಋಣಿಯಾಗಿದ್ದಾರೆ. ೧೯೯೨ ರಲ್ಲಿ ಮಳಚಾಪೂರ ಅಕ್ಕಮಹಾದೇವಿ ಮಹಿಳಾ ಮಂಡಳಿಗೆ ಡೇರಿ ೬೦೦೦೦/- ರೂಪಾಯಿ, ಕಾಡವಾದ ವರಲಕ್ಷ್ಮೀ ಮಹಿಳಾ ಮಂಡಳಿಗೆ ೮,೦೦೦೦/- ರೂಪಾಯಿ, ಮೈಲೂರಿನ ಕಸ್ತೂರಬಾ ಮಹಿಳಾ ಮಂಡಳಿಗೆ ೮,೦೦೦೦/- ರೂಪಾಯಿಗಳನ್ನು ಕೊಡಿಸಲು ಮುಂದಾಗಿದೆ. ಜೊತೆಗೆ ಸಂಸ್ಥೆಯಿಂದ ನಡೆಸಲಾಗುತ್ತಿರುವ ಉಡುಪು ತಯಾರಿಕಾ ಘಟಕಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಸರಕಾರದಿಂದ ಪಡೆಯಲಾಗಿದೆ.

೩. ಶಿಕ್ಷಣ ಕ್ಷೇತ್ರಕ್ಕೆ ಮಹಿಳಾ ಮಂಡಳದ ಕೊಡುಗೆ:

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಅಪಾರ ಕಾಳಜಿ ವಹಿಸಿರುವ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಸಂಸ್ಥೆಯ ಮೂಲಕ ಶೈಕ್ಷಣಿಕವಾಗಿ ಅನೇಕ ಜನರಿಗೆ ಸಹಾಯ ಮಾಡಿದ್ದಾರೆ. ಶ್ರೀಮತಿ ವಿದ್ಯಾವತಿ ಶ್ರೀಪತರಾವ ಇವರ ಮನೆಯಲ್ಲಿ ದೊಡ್ಡ ಮಗಳು ಅವರಿಗೆ ಉದ್ಯೋಗ ನೌಕರಿ ಕೊಡಿಸಿದರೆ ಅವರ ಕುಟುಂಬ ಚೆನ್ನಾಗಿ ಆಗುವದೆಂದು ತಿಳಿದು ಈ ಸಹಾಯ ಮಾಡಲಾಗಿದೆ. ಶಹನಾಜ್, ಸುನೀತಾ, ವಿದ್ಯಾವತಿ, ಶಮೀಮ್, ನಾಲ್ಕು ಜನ ಮಹಿಳೆಯರು ಎಂ.ಎ. ಮಾಡಿದ್ದಾರೆ. ಇನ್ನೂ ಅನೇಕ ಜನರಿಗೆ ಉದ್ಯೋಗ ದೊರಕಿದೆ. ಊಟ, ವಸತಿ, ಮಾತ್ರ ಈ ಮಹಿಳಾ ಮಂಡಳದಲ್ಲಿ ಓದಿಸುವುದು ಬೇರೆ ಕಾಲೇಜುಗಳಲ್ಲಿ. ಉದ್ಯೋಗ ಕೊಡಿಸುವುದು. ಗುರಮ್ಮ ಸಿದ್ಧಾರೆಡ್ಡಿಯವರ ಪ್ರಯತ್ನದಿಂದ ಹೀಗೆ

ಸಾವಿರಾರು ಜನ ಮಹಿಳೆಯರಿಗೆ ಆಶ್ರಯ, ಉದ್ಯೋಗ ನೀಡಿದ್ದಾರೆ. ಕೆಲವರು ನರ್ಸ್ ಕೋರ್ಸ್, ಐ.ಟಿ.ಐ., ಬಿ.ಎ. ಬಿ.ಕಾಮ್. ಮುಂತಾದ ಕೋರ್ಸ್‌ಗಳು ಮಾಡಿದ್ದಾರೆ.

ದಿನಾಂಕ ೧೫-೦೮-೨೦೧೩ರಂದು ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳವು ಬೀದರ ಜಿಲ್ಲಾ ಉಸ್ತುವಾರಿ ಸಚಿವೆ ಶ್ರೀಮತಿ ಉಮಾಶ್ರೀ ಅವರ ಅಮೃತ ಹಸ್ತದಿಂದ ೭೮ ಜನ ವಿಕಲಚೇತನರಿಗೆ, ವಿಧವೆಯರಿಗೆ ಹಾಗೂ ವಿವಾಹ ವಿಚ್ಛೇದಿತರಿಗೆ ನಿವೇಶನದ ಹಕ್ಕು ಪತ್ರಗಳನ್ನು ಕೊಡಿಸಿದ್ದಾರೆ. ಇದೇ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಸಚಿವೆಯಾಗಿದ್ದ ಉಮಾಶ್ರೀಯವರು ಲಿಂಗಭೇದವಿಲ್ಲದೆ, ಜಾತಿ-ಮತ-ಧರ್ಮ ಭೇದವಿಲ್ಲದೆ ಈ ದೇಶವನ್ನು ಬ್ರಿಟಿಷರ ಕಪಿಮುಷ್ಠಿಯಿಂದ ಬಿಡುಗಡೆಗೊಳಿಸಲು, ಮುಗ್ಧಪ್ರಜೆಗಳನ್ನು ಶೋಷಣೆ ಮಾಡುತ್ತಿದ್ದ ವಿದೇಶಿಯರಿಂದ ಮುಕ್ತಗೊಳಿಸಲು, ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿಸಲು ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಸ್ಥಾಪಿಸಿದ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳದ ಅಧ್ಯಕ್ಷರಾದ ಗುರಮ್ಮ ಸಿದ್ಧಾರೆಡ್ಡಿಯವರು ಈ ನಿವೇಶನದ ಹಕ್ಕುಪತ್ರ ಹಂಚುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ತುಂಬಾ ಅಭಿನಂದನೀಯ ಕಾರ್ಯವೆಂದು ಬಾಯಿತುಂಬಾ ಹೊಗಳಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಎನ್. ಧರ್ಮಸಿಂಗ್‌ವರು ಮಾತನಾಡುತ್ತ- ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗೆ ಉತ್ತೇಜಿಸುವ ಇಂತಹ ಜನಪರ ಕೆಲಸಗಳನ್ನು ಮಾಡುವ ಮೂಲಕ ಸಮಾಜಕ್ಕೆ ಗುರಮ್ಮನವರು ಮಾದರಿಯಾಗಿದ್ದಾರೆ. ನಿಮ್ಮ ಜೊತೆ ನಾವಿದ್ದೇವೆ. ಸಮಾಜವೂ ನಿಮ್ಮೊಂದಿಗೆ ಎಂಬ ರೀತಿಯಲ್ಲಿ ಹುಮ್ಮಸ್‌ದಿಂದ ಕಾರ್ಯ ಮಾಡುತ್ತಿರುವ ಈ ಸಂಸ್ಥೆ ಮಾದರಿಯಾಗಿದೆ. ಅದರ ರೂವಾರಿಯಾಗಿರುವ ಗುರಮ್ಮನವರಿಗೆ ಅನಂತ ಧನ್ಯವಾದಗಳು ಎಂದಿರುವರು.

ರಾಜೀವ ಗಾಂಧಿ ಹೌಸಿಂಗ್ ನಿಗಮದಿಂದ ಮಂಜೂರಾತಿ ಪಡೆದು ಈ ನಿರಾಶ್ರಿತ ಮಹಿಳೆಯರಿಗೆ ಮನೆಗಳನ್ನು ಕಟ್ಟಿಸಿಕೊಡಲು ಬದ್ಧರಾಗಿದ್ದಾರೆ. ೨೦೨೦ರ ಮಾರ್ಚ್ ತಿಂಗಳೊಳಗಾಗಿ ಈ ಆಶ್ರಯ ಮನೆಗಳನ್ನು ಪೂರ್ತಿಗೊಳಿಸಲು ಸಜ್ಜಾಗಿದ್ದಾರೆ. ಅದರಲ್ಲಿ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ.

೨೦೨೦ರ ಮಾರ್ಚ್‌ದೊಳಗೆ ಈ ಆಶ್ರಯ ಮನೆಗಳನ್ನು ಪೂರ್ತಿಗೊಳಿಸಿದ ಕೀರ್ತಿ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರಿಗೆ ಸಲ್ಲುತ್ತದೆ ಮತ್ತು ಸಲ್ಲಲೇಬೇಕು. ಅವರು ಈ ಸಂಸ್ಥೆಗಾಗಿ ಹಗಲಿರುಳೆನ್ನದೇ ತನು-ಮನ-ಧನದಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಈ ಸಂಸ್ಥೆಗೆ ರಾಜ್ಯಮಟ್ಟದ ಹೆಸರಾಂತ ರಾಜಕೀಯ ವ್ಯಕ್ತಿಗಳು, ಗಣ್ಯರು, ಅಧಿಕಾರಿಗಳು ಭೇಟಿ ಮಾಡಿ, ಗುರಮ್ಮನವರ ಕಾರ್ಯವೈಖರಿ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

೪. ಸಂಸ್ಥೆಗೆ ಭೇಟಿ ನೀಡಿರುವ ಗಣ್ಯರು:

೧) ಶ್ರೀಮತಿ ಮಾರ್ಗರೇಟ್ ಆಳ್ವ, ಯುವಜನ ಕ್ರೀಡಾ ಸಚಿವರು, ಭಾರತ ಸರಕಾರ ದಿನಾಂಕ: ೦೭-೦೪-೧೯೮೭.

೨) ಶ್ರೀಮತಿ ವಿಮಲಾಬಾಯಿ ದೇಶಮುಖ್, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

೩) ಶ್ರೀಮತಿ ರಾಣಿ ಸತೀಶ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

೪) ಶ್ರೀಮತಿ ಮೋಟಮ್ಮ, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

೫) ಶ್ರೀ ಬಿ.ಎಸ್. ಪಾಟೀಲ ಸಾಸನೂರ, ಆರೋಗ್ಯ ಮತ್ತು ಕಟುಂಬ ಕಲ್ಯಾಣ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

೬) ಶ್ರೀ ಭೀಮಣ್ಣ ಖಂಡ್ರೆ, ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ

೭) ಶ್ರೀ ಎ.ಬಿ. ಮಾಲಕರೆಡ್ಡಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

೮) ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ದಿನಾಂಕ: ೨೨-೦೮-೨೦೦೧.

೯) ಶ್ರೀಮತಿ ಶೌಖತ್ ಖೂರೇಷಿ, ಅಧ್ಯಕ್ಷರು, ಸಮಾಜ ಕಲ್ಯಾಣ ಸಲಹಾ ಮಂಡಳಿ, ಬೆಂಗಳೂರು

೧೦) ಶ್ರೀಮತಿ ಗಿರಿಜಮ್ಮ, ಅಧ್ಯಕ್ಷರು, ಸಮಾಜ ಕಲ್ಯಾಣ ಸಲಹಾ ಮಂಡಳಿ, ಬೆಂಗಳೂರು

೧೧) ಶ್ರೀಮತಿ ವಿನೋದಾ ನಟರಾಜ, ಅಧ್ಯಕ್ಷರು, ಸಮಾಜ ಕಲ್ಯಾಣ ಸಲಹಾ ಮಂಡಳಿ, ಬೆಂಗಳೂರು

ಸಂಸ್ಥೆಗೆ ಭೇಟಿ ನೀಡಿದ ಅಧಿಕಾರಿಗಳು:

೦೧) ಶ್ರೀ ಕೆ. ಶಿವರಾಮ್ ಐ.ಎ.ಎಸ್. ಮಾನ್ಯ ಜಿಲ್ಲಾಧಿಕಾರಿಗಳು ಬೀದರ

೦೨) ಎಸ್.ಡಿ. ಮೀನಾ, ಐ.ಎ.ಎಸ್., ಬೆಂಗಳೂರು

೦೩) ಶ್ರೀ ಸಂಜೀವಕುಮಾರ ಐ.ಎ.ಎಸ್. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೀದರ

೦೪) ಶ್ರೀ ಗೋನಾಳ ಭೀಮಪ್ಪ ಐ.ಎ.ಎಸ್., ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು

೦೫) ಶ್ರೀ ರಾಜು, ವ್ಯವಸ್ಥಾಪಕ ನಿರ್ದೇಶಕರು, ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು

೦೬) ಶ್ರೀ ಮಾಚನೂರ್ ಐ.ಎ.ಎಸ್., ನಿರ್ದೇಶಕರು, ಅಂಗವಿಕಲ ಕಲ್ಯಾಣ ಇಲಾಖೆ, ಬೆಂಗಳೂರು

೦೭) ಶ್ರೀ ಶಾಂತಪ್ಪ ಐ.ಎ.ಎಸ್., ಮಹಿಳಾ ಆಭಿವೃದ್ಧಿ ನಿಗಮ, ಬೆಂಗಳೂರು

೦೮) ಶ್ರೀ ಪಿ. ಗಣೇಶ ಐ.ಎ.ಎಸ್., ಸಿ.ಇ.ಓ. ಜಿಲ್ಲಾ ಪಂಚಾಯತ್, ಬೀದರ

೦೯) ಶ್ರೀ ಕುಲಕರ್ಣಿ ನಿರ್ದೇಶಕರು ಹಾಗೂ ಐ.ಎ.ಎಸ್., ಅಂಗವಿಕಲ ಕಲ್ಯಾಣ ಇಲಾಖೆ, ಬೆಂಗಳೂರು

ಸಂಸ್ಥೆಗೆ ಭೇಟಿ ನೀಡಿದ ಬ್ಯಾಂಕ್ ಮತ್ತು ಇತರೆ ಅಧಿಕಾರಿಗಳು

೦೧) ಶ್ರೀ ಲಿಂಗಪ್ಪ, ಕೆನೆರಾ ಬ್ಯಾಂಕ್, ಗುಲಬರ್ಗಾ

೦೨) ಶ್ರೀ ವಿಷ್ಣುಮೂರ್ತಿ, ಚೇರ್‌ಮೆನ್, ಕೃಷ್ಣಾ ಗ್ರಾಮೀಣ ಬ್ಯಾಂಕ್, ಗುಲಬರ್ಗಾ

೦೩) ಶ್ರೀ ಹಗರಗಿ, ಚೆರ್‌ಮೆನ್, ಕೃಷ್ಣಾ ಗ್ರಾಮೀಣ ಬ್ಯಾಂಕ್, ಗುಲಬರ್ಗಾ

೦೪) ಶ್ರೀ ಭಕ್ತ ವತ್ಸಲ, ಜಿ.ಎಮ್., ಗುಲಬರ್ಗಾ

೦೫) ಶ್ರೀ ಗುರಜರ, ಮುಖ್ಯ ವ್ಯವಸ್ಥಾಪಕರು, ಎಸ್.ಬಿ.ಐ., ಬೀದರ

೦೬) ಶ್ರೀಮತಿ ಪ್ರೇಮಕುಮಾರಿ, ನೋಡಲ್ ಆಫೀಸರ್,

೦೭) ಶ್ರೀ ಮುನಿರೆಡ್ಡಿ, ಜಂಟಿ ನಿರ್ದೇಶಕರು,

೦೮) ಶ್ರೀಮತಿ ಭಾನು ಫಾತಿಮಾ, ಜಂಟಿ ನಿರ್ದೇಶಕರು,

೦೯) ಶ್ರೀಮತಿ ಸುಜಾತಾ ನಟರಾಜನ್, ಅಧ್ಯಕ್ಷರು, ಅಖಿಲ ಭಾರತ ಕುಟುಂಬ ಕಲ್ಯಾಣ ಯೋಜನೆ, ಮುಂಬಯಿ

೧೦) ಶ್ರೀಎಸ್.ಜಿ. ಕೋಳಿವಾಡ, ಕಾರ್ಯದರ್ಶಿಗಳು, ಅಖಿಲ ಭಾರತ ಕುಟುಂಬ ಕಲ್ಯಾಣ ಯೋಜನೆ, ಮುಂಬಯಿ

ಸಂಸ್ಥೆಗೆ ಲಭಿಸಿರುವ ಪ್ರಶಸ್ತಿಗಳು:

ಕಿತ್ತೂರ ರಾಣಿ ಚೆನ್ನಮ್ಮಾ ಮಹಿಳಾ ಮಂಡಳಿಯ ಕಾರ್ಯವೈಖರಿಯನ್ನು ಮೆಚ್ಚಿ ಸರ್ಕಾರ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಸಂದಿವೆ. ಯೋಜನಾಬದ್ಧ ಕಾರ್ಯಕುಶಲತೆ ಕಂಡು ಇದರ ಅಧ್ಯಕ್ಷರಾದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರಿಗೆ ಮತ್ತು ಸಂಸ್ಥೆಗೆ ಅರ್ಜಿ ಸಲ್ಲಿಸದೆಯೇ ಪ್ರಶಸ್ತಿಗಳು ಬಂದಿವೆಯೆಂದು ಬಹಳ ಹೆಮ್ಮೆ ಮತ್ತು ಅಭಿಮಾನದಿಂದ ಹೇಳುತ್ತಾರೆ ಅಮ್ಮನವರು.

* ರಾಜ್ಯ ಸರ್ಕಾರದಿಂದ ಕಿತ್ತೂರ ರಾಣಿ ಚೆನ್ನಮ್ಮಾ ಪ್ರಶಸ್ತಿ.

* ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರಿಂದ, ಸುತ್ತೂರು ಮಠದ ಶ್ರೀಗಳಿಂದ, ಚಿತ್ರದುರ್ಗ ಮಠದ ಮುರುಘರಾಜೇಂದ್ರ ಶರಣರಿಂದ ಮತ್ತು ಮುಗಳಖೋಡ ಮಠದ ಪೂಜ್ಯರಿಂದ ಸನ್ಮಾನಗಳು ಸಂದಿವೆ.

* ರಾಜಕುಮಾರ ಪ್ರಶಸ್ತಿ (NGO Association) Karnataka
* ಯಶೋಧರಾ ದಾಸಪ್ಪಾ ಪ್ರಶಸ್ತಿ.
* ಸುರವೆ ಸಂಸ್ಕೃತಿ ಪ್ರಶಸ್ತಿ
* ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಶಸ್ತಿ.
* ವೀರಶೈವ ಸಂಸ್ಕೃತಿ ಪ್ರತಿಷ್ಠಾನದಿಂದ "ಜಗಜ್ಯೋತಿ ಶ್ರೀ ಬಸವೇಶ್ವರ ಸದ್ಭಾವಾನಾ ಪ್ರಶಸ್ತಿ"
* ಏಷಿಯನ್ ಫೆಸಿಫಿಕ್ ರಿಜನಲ್ ಅವಾರ್ಡ್ – ಹೀಗೆ ಹತ್ತು ಹಲವು ಪ್ರಶಸ್ತಿಗಳಿಗೆ ಸಂಸ್ಥೆ ಭಾಜನವಾಗಿದೆ.

೫. ಮಹಿಳಾ ಅಭಿವೃದ್ದಿ ಕ್ರಿಯಾ ಯೋಜನೆ ಸಮಿತಿ
(TASK FORCE ON WOMEN EMPOWERMENT)

ಗುರಮ್ಮ ಸಿದ್ದಾರೆಡ್ಡಿಯವರು ಕೇವಲ ಒಬ್ಬ ವ್ಯಕ್ತಿಯಾಗಿರದೇ ಈ ಭಾಗದ ಬಹುದೊಡ್ಡ ಶಕ್ತಿಯಾಗಿದ್ದಾರೆ. ಅವರು ಮೌನವಾಗಿ ಎಲೆಯ ಮರೆಯ ಕಾಯಿಯಂತೆ ಸೇವೆ ಮಾಡುತ್ತಿರುವವರು. ಮಾರ್ಚ್ ೮, ೨೦೦೦ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಅಂದಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣಾ ಅವರು ಮಹಿಳಾ ತಜ್ಞರ ತಂಡವೊಂದನ್ನು ರಚಿಸಿ, ಅದಕ್ಕೆ ಗುರಮ್ಮ ಸಿದ್ದಾರೆಡ್ಡಿಯವರಿಗೆ ಅಧ್ಯಕ್ಷರನ್ನಾಗಿ ಮಾಡಿದರು.

ಮಹಿಳಾ ಟಾಸ್ಕಫೋರ್ಸ್ ಸಮಿತಿಯಲ್ಲಿ ಸಾಮಾಜಿಕ ಕಾರ್ಯಕರ್ತೆಯರಾದ ಶೌಕತ್ ಖುರೇಷಿ, ವಾಸಂತಿ, ಶಿವಣ್ಣಾ, ಸಾಹಿತಿ ಶಾಂತಾದೇವಿ ಕಣವಿ ಹಾಗೂ ಸುಮಂಗಲಿ ಸೇವಾಶ್ರಮದ ಸುಶೀಲಮ್ಮಾ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಯಿತು. ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯರೂ ಹಾಗೂ ಯುನಿಸೆಫ್ ಸದಸ್ಯೆ ಪದ್ಮಾ ಸೇಠ ಅವರು ಈ ಸಮಿತಿಗೆ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ.

ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನಾ ಸಮಿತಿಯು ಅನೇಕ ಸಭೆಗಳನ್ನು ನಡೆಸಿ, ಮಹಿಳಾ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಅಭ್ಯಸಿಸಿತು. ಈ ಸಭೆಗಳ ಪೈಕಿ ಐದು ಸಭೆಗಳಲ್ಲಿ ಪ್ರತ್ಯೇಕವಾಗಿ ಹಿರಿಯ ಮಹಿಳಾ ರಾಜಕಾರಣಿಗಳು, ಸಮಾಜ ಸೇವಾ ಕಾರ್ಯಕರ್ತೆಯರು, ಲೇಖಕಿಯರು

ಹಾಗೂ ಮಹಿಳೆಯರ ವಿಷಯಕ್ಕೆ ಸ್ಪಂದಿಸಿ ಬರೆದ ಲೇಖಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣಾ ಸಂಸ್ಥೆಯ ತಜ್ಞರು, ಹಿರಿಯ ಮಹಿಳಾ ಅಧಿಕಾರಿಗಳನ್ನು ಆಹ್ವಾನಿಸಿ, ಅವರ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಯಿತು. ಇದಲ್ಲದೇ ಕಲಬುರಗಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಒಂದೊಂದು ದಿನದ ವಿಭಾಗೀಯ ಮಟ್ಟದ ಕಾರ್ಯಗಾರವನ್ನು ಹಾಗೂ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳ ಒಂದು ವಿಚಾರ ಸಂಕೀರಣ ನಡೆಸಿ, ಮೈಸೂರು, ಬೆಳ್ತಂಗಡಿ ಮತ್ತು ಹುಬ್ಬಳ್ಳಿಯಲ್ಲಿ ಮಹಿಳಾ ಸಮಾವೇಶ ನಡೆಸಿ ವಿವಿಧ ವರ್ಗದ ಮಹಿಳೆಯರ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ಸಂಗ್ರಹಿಸಲಾಯಿತು. ಈ ಎಲ್ಲಾ ಸಭೆ, ಕಾರ್ಯಗಾರ, ವಿವಿಧ ತಜ್ಞರ ಜೊತೆ ನಡೆಸಿದ ಚರ್ಚೆಗಳ ಆಧಾರದ ಮೇಲೆ ಅಂತಿಮ ವರದಿಯೊಂದನ್ನು ಸಿದ್ಧಪಡಿಸಿ, ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ವರದಿ ಸಲ್ಲಿಸಲಾಯಿತು. ಈ ಶಿಫಾರಸ್ಸುಗಳಲ್ಲಿನ ಕೆಲವನ್ನು ತ್ವರಿತವಾಗಿ ಜಾರಿಗೊಳಿಸಲಾಗಿದ್ದು, ಇನ್ನು ಕೆಲವನ್ನು ದೀರ್ಘಾವಧಿ ಯೋಜನೆಗಳನ್ನಾಗಿ ಜಾರಿಗೊಳಿಸಬಹುದಾಗಿದೆ.

ಸಮಿತಿ ಶಿಫಾರಸ್ಸಿನಡಿ ಸ್ತ್ರೀಶಕ್ತಿ ಹಾಗೂ ಸ್ವಸಹಾಯ ಗುಂಪುಗಳ ಕಾರ್ಯ ವಿಶ್ವಕ್ಕೆ ಮಾದರಿಯಾಗಿದೆ. ಈ ಕಾರ್ಯಕ್ರಮ ಕರ್ನಾಟಕ ಮಹಿಳೆಯರಿಗೆ ಆಶಾಕಿರಣವಾಗಿದೆ.

ಶಿಕ್ಷಣ, ಆರ್ಥಿಕ, ರಾಜಕೀಯ ಮತ್ತು ಇನ್ನಿತರ ಯಾವುದೇ ರೀತಿಯ ಚಟುವಟಿಕೆಗಳಲ್ಲಿ ಮಹಿಳೆಯರು ಭಾಗವಹಿಸಬೇಕೆಂದರೆ ಅವಳಿಗೆ ಕೆಲಸದ ಒತ್ತಡ ಕಡಿಮೆಯಾಗಬೇಕು, ಕುಟುಂಬದಲ್ಲಿ ಅವಳ ಮೂಲಭೂತ ಕರ್ತವ್ಯಗಳೆಂದು ಪರಿಗಣಿಸಲ್ಪಟ್ಟಿರುವ ಆಹಾರ ತಯ್ಯಾರಿಕೆ, ಪಶು ಪಾಲನೆ, ಉರುವಲು, ನೀರಿನ ಸಂಗ್ರಹಣೆ, ಮಕ್ಕಳ ಪಾಲನೆ ಪೋಷಣೆ ಮುಂತಾದ ವಿಷಯಗಳಲ್ಲಿ ಸಮಾಜದ ಧೋರಣೆ ಬದಲು ಮಾಡುವ ಮತ್ತು ಈ ಕಾರ್ಯಗಳಲ್ಲಿ ಆಕೆಗೆ ನೆರವಾಗುವ ಸಾಮಾಜಿಕ ಹಾಗೂ ಕೌಟುಂಬಿಕ ಪರಿಸ್ಥಿತಿಗಳು ಗಮನಾರ್ಹವಾಗಿ

ಬದಲಾಗುವಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಾರ್ವತ್ರಿಕವಾಗಿ ಹಮ್ಮಿಕೊಳ್ಳಬೇಕೆಂಬುದು ಈ ವರದಿಯಲ್ಲಿ ಅಡಕವಾಗಿರುವ ಅಂಶವಾಗಿದೆ.

ರಾಜ್ಯದ ಕೆಲವೆಡೆ ವಿಭಿನ್ನ ರೀತಿಯ ವಿಚಾರ ಸಂಕೀರಣಗಳನ್ನು ನಡೆಸಿ, ಜಿಲ್ಲಾ ಪಂಚಾಯತ್ ಮಹಿಳಾ ಸದಸ್ಯರು, ಕೃಷಿ ಮಹಿಳೆಯರು, ಸಾಹಿತಿಗಳು, ಲೇಖಕಿಯರು, ವೈದ್ಯರು, ಸಾಮಾಜಿಕ ಸೇವಾ ಕಾರ್ಯಕರ್ತರು ಮುಂತಾದ ವಿವಿಧ ವರ್ಗದ ಮಹಿಳೆಯರ ಅಭಿಪ್ರಾಯಗಳನ್ನು "ಮಹಿಳಾ ಸಶಕ್ತಿಕರಣದಲ್ಲಿ ಶಿಕ್ಷಣದ ಮಹತ್ವ, ಮಹಿಳಾ ಆರೋಗ್ಯ, ಮಹಿಳೆಯರ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ, ಮಹಿಳೆ ಆರ್ಥಿಕ ಸ್ವಾವಲಂಬನೆ, ರಾಜಕಾರಣದಲ್ಲಿ ಮಹಿಳಾ ಸಶಕ್ತಿಕರಣ ಹಾಗೂ ರೈತ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ" ಈ ವಿಷಯಗಳ ಬಗ್ಗೆ ಪ್ರತ್ಯೇಕವಾಗಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಸಾಮಾಜಿಕ ಅಭಿವೃದ್ಧಿ, ಮಹಿಳಾ ಆರೋಗ್ಯ, ಮಹಿಳಾ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಮಹಿಳೆ, ಉದ್ಯೋಗ ಮತ್ತು ತರಬೇತಿ ಕಾನೂನು ಮತ್ತು ಮಹಿಳೆ ಹಾಗೂ ರಾಜಕೀಯದಲ್ಲಿ ಮಹಿಳೆಯರು ಎಂಬ ವಿಭಾಗ ಗಳನ್ನೊಳಗೊಂಡ ಈ ವರದಿ ತಯಾರಿಸಲಾಗಿದ್ದು, ಈ ವಿಭಾಗದಲ್ಲಿಯ ಪ್ರತ್ಯೇಕ ಶಿಫಾರಸ್ಸುಗಳನ್ನು ಮಾಡಲಾಯಿತು. ಈ ವರದಿಯಲ್ಲಿ ೬೮ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಶಿಫಾರಸ್ಸುಗಳನ್ನು ಮಾಡಲಾಗಿತ್ತು. ಇವುಗಳ ಪೈಕಿ ಹತ್ತು ಶಿಫಾರಸ್ಸುಗಳನ್ನು ಕೆಲವರು ಜೇಮ್ಸ್ (ರತ್ನ)ಗಳೆಂದು ಕರೆದಿದ್ದಾರೆ. ಗುರಮ್ಮನವರು ಮಹಿಳಾ ಹಕ್ಕುಗಳ ಕ್ರೋಢಿಕರಣಕ್ಕೆ ಪಣತೊಟ್ಟರು.

ಈ ಶಿಫಾರಸ್ಸುಗಳಲ್ಲಿ ಕೆಲವು ಪ್ರಮುಖ ಶಿಫಾರಸ್ಸು ಜಾರಿಗೆ ಬಂದಿದ್ದು, ಇನ್ನು ಕೆಲವು ಬರಬೇಕಿದೆ. ಅವುಗಳಲ್ಲಿ ಪ್ರಮುಖವಾಗಿ,

೧. ಮಹಿಳಾ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಶಿಫಾರಸ್ಸು ಮಾಡಲಾಗಿತ್ತು. ಈಗಾಗಲೇ ವಿಜಯಪೂರದಲ್ಲಿ ಗುರಮ್ಮ ಸಿದ್ದಾರೆಡ್ಡಿಯವರ ಕನಸ್ಸಿನಂತೆ ಅದು ಸಾಕಾರಗೊಂಡಿರುತ್ತದೆ.

೨. ಜಿಲ್ಲೆಗೊಂದು ಮಹಿಳಾ ಪೊಲೀಸ್ ಠಾಣೆಗಳು ಹಾಗೂ ಗೃಹ ರಕ್ಷಕದಳಗಳ ಸ್ಥಾಪನೆಯಾಗಿವೆ.

೩. ರಾಜ್ಯದೆಲ್ಲೆಡೆ ಈಗಾಗಲೇ ಸ್ತ್ರೀ ಶಕ್ತಿ ಯೋಜನೆ ವಿಸ್ತಾರಗೊಂಡಿದ್ದು, ಅವರಿಗೆ ಹಣಕಾಸಿನ ಸಹಾಯ, ಸ್ವಂತ ಉದ್ಯೋಗ, ಅವರು ತಯ್ಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆ.

೪. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಮಂಜೂರು ಮಾಡಲಾಗಿದೆ.

೫. ಗ್ರಾಮ ಶಿಕ್ಷಣ ಸಮಿತಿಗಳನ್ನು ಪ್ರಬಲಗೊಳಿಸಲಾಗಿದೆ.

೬. ಹೆಣ್ಣು ಭ್ರೂಣಹತ್ಯೆ ತಡೆಯಲು ಕಠಿಣ ಕ್ರಮಗಳನ್ನು ಜಾರಿಗೆ ತರಲಾಗಿದೆ.

೭. ಮಹಿಳಾ ದೂರುಗಳ ವಿಚಾರಣೆ ಸಮಿತಿಗಳನ್ನು ಸ್ಥಾಪಿಸಲಾಗಿದೆ.

೮. ಸರಕಾರ ರಚಿಸಿರುವ ಆಯೋಗ ಹಾಗೂ ಮಂಡಳಿಗಳಲ್ಲಿ ಮಹಿಳೆಯರಿಗೆ ಈಗಾಗಲೇ ಪ್ರಾಧಾನ್ಯತೆ ನೀಡಲಾಗಿದೆ.

೯. ಗ್ರಾಮೀಣ ಭಾಗದ ಮುಗ್ದ ಮಹಿಳೆಯರಿಗೆ ಕಾನೂನು ಅರಿವು ಹಾಗೂ ನೆರವು ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಇನ್ನು ಜಾರಿಗೆ ಬರಬೇಕಾಗಿರುವ ಪ್ರಮುಖ ಸಲಹೆಗಳು:

೧. ಜಿಲ್ಲೆಗೊಂದು ರಾಜಕೀಯ ಮಹಿಳಾ ತರಬೇತಿ ಕೇಂದ್ರ ಸ್ಥಾಪಿಸಬೇಕು.

೨. ರಾಜ್ಯ ಮಹಿಳಾ ಸಶಕ್ತೀರಣ, ಸಂಪನ್ಮೂಲ ಕೇಂದ್ರ ಸ್ಥಾಪಿಸಬೇಕು.

೩. ಸರಕಾರದಲ್ಲಿ ಮಹಿಳಾ ಅಭಿವೃದ್ಧಿಗಾಗಿ ನಿಗದಿ ಮಾಡಲ್ಪಟ್ಟ ಹಣದ ಖರ್ಚಿನ ಬಗ್ಗೆ ಸೂಕ್ತ ವ್ಯವಸ್ಥೆಯಾಗಬೇಕು.

೪. ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮಹಿಳಾ ಮತ್ತು ಬಾಲಕಿಯರ ಅಭಿವೃದ್ಧಿಗೆ ಮೀಸಲಾತಿ ಒದಗಿಸಬೇಕು.

೫. ಎಲ್.ಎಂ.ಪಿ. (Legal Medical Practitioner) ಮಾದರಿಯಲ್ಲಿ ಬಿ.ಎಸ್.ಸಿ ವೈದ್ಯಕೀಯ ಶಿಕ್ಷಣ ಪ್ರಾರಂಭ ಮಾಡಬೇಕು.

೬. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಣ್ಣು ಮಕ್ಕಳಿಗೆ ತರಬೇತಿ ಕೇಂದ್ರ ಸ್ಥಾಪನೆಗಳಾಗಬೇಕು. ಉತ್ತರ ಕರ್ನಾಟಕದಲ್ಲಿ ಒಂದು, ದಕ್ಷಿಣ ಕರ್ನಾಟಕದಲ್ಲಿ ಒಂದು.

೭ ಮಹಿಳೆಯರಿಗೆ ಸಂಬಂಧಪಟ್ಟಂತೆ ಕಾನೂನುಗಳು ಕ್ರೋಢೀಕರಣ ಮಾಡಬೇಕು.

೮. ಸಂವಿಧಾನದ ೮೪ನೇ ತಿದ್ದುಪಡಿಗೆ ಒತ್ತಾಯ.

ಹೀಗೆ ಅನೇಕ ಮಹತ್ತರ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರಕ್ಕೆ ಮಾಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ದರ್ಪಣದ ರೀತಿಯಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ.

೬. ಮಹಿಳಾ ಹಕ್ಕುಗಳ ಕ್ರೂಢೀಕರಣಕ್ಕೆ ಟಾಸ್ಕ್ ಫೋರ್ಸ್

೨೦೦೧ನೇ ವರ್ಷವು ಮಹಿಳಾ ಸಶಕ್ತಿಕರಣದ ವರ್ಷವಾದರೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ಮಹಿಳಾ ಸರ್ವತೋಮುಖ ಅಭಿವೃದ್ಧಿಗಾಗಿ ಒಂದು ತಜ್ಞರ ತಂಡವೊಂದನ್ನು ರಚಿಸಿ ಅದಕ್ಕೆ ಗುರಮ್ಮ ಸಿದ್ಧಾರೆಡ್ಡಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದರು.

ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳ ಪರಿಹಾರಕ್ಕಾಗಿ ಯೋಜನೆಗಳನ್ನು ರೂಪಿಸಿ ಸರ್ಕಾರಕ್ಕೆ ಸಲಹೆ ಕೊಡುವ ಸಮಿತಿಯೇ ಮಹಿಳಾ ಕಾರ್ಯ ಪಡೆ (ಉಮೇನ್ಸ್ ಟಾಸ್ಕ್ ಫೋರ್ಸ್) ಇದನ್ನೇ ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನೆ ಎಂದು ಕರೆಯಲಾಗುತ್ತದೆ. ಇದರ ಉದ್ದೇಶಗಳು ಇಂತಿವೆ.

೧. ಮಹಿಳಾ ಶಿಕ್ಷಣ

೨. ಮಹಿಳಾ ಆರೋಗ್ಯ ಸಮಸ್ಯೆಗಳಿಗೆ ಪರಿಹಾರಗಳು

೩. ಮಹಿಳೆಯರ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು

೪. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆಯಾಗುವಂತೆ ಮಾಡುವುದು

೫. ರಾಜಕೀಯದಲ್ಲಿ ಮಹಿಳೆಯರು ಸಶಕ್ತತೆ ಹೊಂದುವಂತೆ ಮಾಡುವುದು

೬. ರೈತ ಮಹಿಳೆಯರಿಗೆ ಆರ್ಥಿಕ ನೆರವು ನೀಡುವುದು

೭. ಅಂಗವಿಕಲ ಮಹಿಳೆಯರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು

೮. ಕೌಟುಂಬಿಕ ಹಿಂಸೆಗಳಿಂದ ರಕ್ಷಿಸುವುದು

೯. ಮಹಿಳೆಯರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವ ಕಾನೂನು ಸಾಕ್ಷರತಾ ಶಿಬಿರಗಳನ್ನು ಆಯೋಜಿಸುವುದು

ಹಲವಾರು ಉದ್ದೇಶಿತ ಕಾರ್ಯಗಳನ್ನು ಹೊಂದಿರುವ ಟಾಸ್ಕ್ ಫೋರ್ಸ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ರೂಪುಗೊಂಡಿದೆ.

ರಾಜ್ಯದಲ್ಲಿ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಕ್ರಿಯಾ ಯೋಜನೆ ರೂಪಿಸಲು ೨೦೦೧ರ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಟಾಸ್ಕ್ ಫೋರ್ಸ್ ಮೂಲಕ ಮಾಡಿರುವ ಅವರ ಶಿಫಾರಸ್ಸುಗಳು ಇಂತಿವೆ.



ಅಧ್ಯಕ್ಷೆ ಶ್ರೀಮತಿ ಗುರಮ್ಮ ಸಿದ್ದಾರಡ್ಡಿಯವರು ತಮ್ಮ ಮಹಿಳಾ ಟಾಸ್ಕ್ ಫೋರ್ಸ್‌ನ ಮಧ್ಯಂತರ ವರದಿಯನ್ನು ಮುಖ್ಯಮಂತ್ರಿಗಳಾದ ಸನ್ಮಾನ್ಯ ಎಸ್.ಎಮ್.ಕೃಷ್ಣ ಅವರಿಗೆ ಒಪ್ಪಿಸುತ್ತಿರುವುದು.

೧. ಮಹಿಳಾ ಅಭಿವೃದ್ಧಿಯನ್ನು ತ್ವರಿತಗೊಳಿಸುವುದಕ್ಕೆ ಪೂರಕವಾಗಿ ಸರ್ಕಾರ / ಸರ್ಕಾರೇತರ ಎಲ್ಲಾ ಪ್ರಯತ್ನಗಳಿಗೆ ಸಹಾಯಕವಾಗುವಂತೆ ಈ ಪ್ರಯತ್ನಗಳನ್ನು ಸಮನ್ವಯಗೊಳಿಸುವ ಸಲುವಾಗಿ ಮತ್ತು ಈ ಪ್ರಯತ್ನಗಳ ವತಿಯಿಂದ ಮಹಿಳಾ ಅಭಿವೃದ್ಧಿಯಲ್ಲಿ ಉಂಟಾಗುವ ಫಲವನ್ನು ಮೌಲ್ಯಮಾಪನ ಮಾಡುವ ದೃಷ್ಟಿಯಿಂದ ಮಹಿಳಾ ಅಭಿವೃದ್ಧಿ ನಿಗಮದಲ್ಲಿರುವ ರಾಜ್ಯ ಮಹಿಳಾ ಸಶಕ್ತಿಕರಣ, ಸಂಪನ್ಮೂಲ ಕೇಂದ್ರ ವಿಸ್ತರಿಸಿ, ಅದಕ್ಕೆ ಸೂಕ್ತವಾದ ಹೆಚ್ಚಿನ ಆರ್ಥಿಕ ಸಹಾಯವನ್ನು ಸರ್ಕಾರ ನೀಡಬೇಕು.

* ಗುಡಿ ಕೈಗಾರಿಕೆ, ಸ್ವಯಂ ಉದ್ಯೋಗ ಮುಂತಾದವುಗಳಿಂದ ಮಹಿಳೆಯರು ಉತ್ಪಾದಿಸುವ ವಸ್ತುಗಳಿಗೆ ಸರಿಯಾದ ಮಾರುಕಟ್ಟೆ ದೊರೆಯಬೇಕು. ಇದಕ್ಕೆ ಸರ್ಕಾರ ಸಹಕಾರಿ ಸಂಘಟನೆಗಳ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಜಾಲವೊಂದನ್ನು ಪ್ರತಿ ಜಿಲ್ಲೆಯ ಹಂತದಲ್ಲೂ ಅಭಿವೃದ್ಧಿಪಡಿಸಬೇಕು.

* ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಸೇರಿದಂತೆ ಸರ್ಕಾರದ ಒಟ್ಟು ೨೬ ಇಲಾಖೆಗಳು ಮಹಿಳಾ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಈ ಎಲ್ಲಾ ಪ್ರಯತ್ನಗಳನ್ನು ಸಮನ್ವಯ ಗೊಳಿಸುವ ದೃಷ್ಟಿಯಿಂದ ಎಲ್ಲಾ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಸಂಯುಕ್ತ ಸಮಿತಿಯನ್ನು ರಚಿಸಲು ಶೀಘ್ರದಲ್ಲಿಯೇ ಆದೇಶ ನೀಡಿದರು.

ಪ್ರತಿ ಗ್ರಾಮ ಮಟ್ಟದಲ್ಲೂ ಮಹಿಳೆಯರಿಗೆ ಕೃಷಿ, ಪಶುಪಾಲನಾ, ತೋಟಗಾರಿಕೆ, ಶಿಕ್ಷಣ, ಆರೋಗ್ಯ, ಉದ್ಯೋಗಾವಕಾಶ, ಸಹಕಾರ, ಕಾನೂನು ಮುಂತಾದ ಮಹಿಳೆಯರ ವಿಷಯಗಳಿಗೆ ಸಂಬಂಧಪಟ್ಟಂತೆ ಸಮನ್ವಯ ಸೇವಾ ಸೌಲಭ್ಯಗಳನ್ನು ಒದಗಿಸಿದರೆ ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿಯ ದಿಶೆಯಲ್ಲಿ ಒಂದು ಮೈಲಿಗಲ್ಲಾಗುತ್ತದೆ.

* ಆಸ್ತಿ–ಪಾಸ್ತಿ, ಹಿಂಸಾಚಾರ, ದೌರ್ಜನ್ಯ ವಿವಾಹ, ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ರಾಜಕೀಯ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಕಾನೂನು ಬದ್ಧವಾಗಿ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಎಲ್ಲಾ ಸೌಲಭ್ಯ ಮತ್ತು ಪರಿಹಾರಗಳ ಬಗ್ಗೆ ರಾಜ್ಯದಲ್ಲಿರುವ ಎಲ್ಲಾ ಕಾನೂನುಗಳ ಕ್ರೂಢೀಕರಣವಾಗಿ (Codification) ಒಂದು ಸಮಗ್ರವಾದ ಪ್ರಕಟಣೆಗಳನ್ನು ರಾಜ್ಯ ಸರ್ಕಾರವು ಹೊರತಂದು, ಸಂಬಂಧಪಟ್ಟ ಸರ್ಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳಿಗೆ ಇವುಗಳ ಪ್ರತಿಯನ್ನು ಒದಗಿಸಿಕೊಡಬೇಕು.

* ಕರ್ನಾಟಕ ರಾಜ್ಯದಲ್ಲಿ ರಾಜಕೀಯದಲ್ಲಿ ಮಹಿಳೆಯರ ನಾಯಕತ್ವವನ್ನು ಬೆಳೆಸಿ, ಅವರನ್ನು ನಿರ್ಧಾರಯುತ ವೇದಿಕೆಗಳಲ್ಲಿ ಪ್ರಬಲಗೊಳಿಸುವ ಸಲುವಾಗಿ ಕರ್ನಾಟಕ ರಾಜ್ಯ ಮಹಿಳಾ ರಾಜಕೀಯ ಕೇಂದ್ರವೊಂದನ್ನು ರಾಜ್ಯ ಸರ್ಕಾರವು ಸ್ಥಾಪಿಸಿ ಯುವ ರಾಜಕೀಯ ಮಹಿಳೆಯರಿಗೆ ಸೂಕ್ತ ತರಬೇತಿ ನೀಡುವುದಲ್ಲದೇ ಗ್ರಾಮ ಪಂಚಾಯತ್ ಮಟ್ಟದಿಂದ ರಾಜ್ಯ ವಿಧಾನಸಭೆ ಪರಿಷತ್ ಮಟ್ಟದವರೆಗಿನ ಎಲ್ಲಾ ಚುನಾಯಿತ ಸದಸ್ಯರಿಗೂ ಸೂಕ್ತ ತರಬೇತಿ ನೀಡುವ ಜವಾಬ್ದಾರಿಯನ್ನು ಈ ಕೇಂದ್ರಕ್ಕೆ ವಹಿಸಿಕೊಡಬೇಕು.

* ಲೈಂಗಿಕ ಕಿರುಕುಳದ ಪರಿಹಾರಕ್ಕೆ ಸಂಬಂಧಿಸಿದಂತೆ, ಪ್ರತಿ ಇಲಾಖೆಯಲ್ಲೂ ಒಂದೊಂದು ಸ್ಥಾಯಿ ಸಮಿತಿಯನ್ನು ರಚಿಸುವಂತೆ ಸರ್ಕಾರ ನಿರ್ದೇಶನ ನೀಡಬೇಕು. ಈ ನಿರ್ದೇಶನಗಳು ಜಾರಿಗೆ ಬಂದಿರುವುದರ ಬಗ್ಗೆ ದೃಢೀಕರಣ ಮಾಡಿಕೊಳ್ಳಬೇಕು. ಮಹಿಳೆಯರು ಕೆಲಸ ಮಾಡುವ ಕಡೆ ಲೈಂಗಿಕ ಕಿರುಕುಳ ಪರಿಹಾರಕ್ಕೆ ಸಂಬಂಧಪಟ್ಟಂತೆ ಸೂಕ್ತ ಕಾನೂನನ್ನು ರಚಿಸಬೇಕು.

* ರಾಜ್ಯದ ಎಲ್ಲಾ ೨೭ ಜಿಲ್ಲೆ ಕೇಂದ್ರ ಗಳಲ್ಲಿಯೂ ಮಹಿಳಾ ಪೋಲಿಸ್ ಠಾಣೆಗಳನ್ನು ಸ್ಥಾಪಿಸಬೇಕೆಂದು ಗುರಮ್ಮ ಸಿದ್ದಾರೆಡ್ಡಿಯವರು ಕಾಲ ಕ್ರಮೇಣ ಇದನ್ನು ಎಲ್ಲಾ ೧೭೫ ತಾಲೂಕಾ ಕೇಂದ್ರಗಳಿಗೆ ವಿಸ್ತರಿಸಬೇಕೆಂದು ಹೇಳಿದ್ದಾರೆ.

ಇದಲ್ಲದೇ ಪ್ರತಿ ಠಾಣೆಯಲ್ಲೂ ಮಹಿಳಾ ಅಧಿಕಾರಿಯೊಬ್ಬರ ನೇಮಕ ಮಾಡಬೇಕೆಂದು ಮತ್ತು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ದೂರು ನೀಡಿದಾಗ ಸಮೀಪದಲ್ಲಿರುವ ಯಾವುದೇ ಪೋಲಿಸ್ ಠಾಣೆಯಲ್ಲಿ ಅದನ್ನು ನೋಂದಣಿ ಮಾಡಿಕೊಡಬೇಕು.

* ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಉದ್ಯೋಗ ಮತ್ತು ತರಬೇತಿ ಕೇಂದ್ರವನ್ನು ರಾಜ್ಯದ ಎಲ್ಲಾ ವಿಭಾಗೀಯ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸುವುದಲ್ಲದೇ ಉದ್ಯೋಗಾವಕಾಶಕ್ಕೆ ಅನುವು ಮಾಡಿಕೊಡಬೇಕು.

* ಮುಂಬೈಯಲ್ಲಿರುವ ಎಸ್.ಎನ್.ಡಿ.ಟಿ. (Shree Nathibai Damodar Thackersey Women' University Church gate, South Mumbai) ಮತ್ತು ತಿರುಪತಿಯಲ್ಲಿರುವ ಪದ್ಮಾವತಿ ಮಹಿಳಾ ವಿಶ್ವವಿದ್ಯಾಲಯಗಳ

ಸಂಯುಕ್ತ ಕರ್ನಾಟಕ 11-05-2001

ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಗೆ ಒತ್ತಾಯ

(ನಮ್ಮ ಪ್ರತಿನಿಧಿಯಿಂದ)

ಕೊಪ್ಪಳ, 10- ಮಹಿಳಾ ಶಿಕ್ಷಣಕ್ಕೆ ಆದ್ಯತೆ, ರಾಜ್ಯದಲ್ಲಿ ಎರಡು ಪ್ರತ್ಯೇಕ ಮಹಿಳಾ ವಿಶ್ವವಿದ್ಯಾನಿಲಯಗಳ ಸ್ಥಾಪನೆ, ಮಹಿಳೆಯರಿಗೆ ಐಎಎಸ್ ಟ್ರೇನಿಂಗ್ ಸೆಂಟರ್ ತೆರೆಯಬೇಕೆಂದು ರಾಜ್ಯ ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನಾ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಸಮಿತಿ ಅಧ್ಯಕ್ಷೆ ಗುರಮ್ಮ ಸಿದ್ಧಾರೆಡ್ಡಿ ರಾಜ್ಯ ಸರ್ಕಾರಕ್ಕೆ ತಾವು ಮಧ್ಯಂತರ ವರದಿ ಸಲ್ಲಿಸಿದ್ದು, ಅದನ್ನು ಪರಿಶೀಲಿಸಿ, ಅನುಷ್ಠಾನಕ್ಕೆ ತರುವುದಾಗಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಭರವಸೆ ನೀಡಿದ್ದಾರೆಂದು ಹೇಳಿದರು.

ಸುದ್ದಿಗಾರರೊಂದಿಗೆ ಇಂದಿಲ್ಲಿ ಮಾತನಾಡಿದ ಅವರು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಧರ್ಮಸ್ಥಳದಲ್ಲಿ ಹಾಗೂ ಕಿತ್ತೂರು ಚೆನ್ನಮ್ಮ ಶಿಕ್ಷಣ ಸಂಸ್ಥೆ ಬೆಳಗಾವಿಯಲ್ಲಿ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿಸಲು ಮುಂದೆ ಬಂದಿದ್ದಾರೆಂದು ಹೇಳಿದರು.

ಮಹಿಳಾ ಶಿಕ್ಷಣ, ಆರೋಗ್ಯ, ದೌರ್ಜನ್ಯ ತಡೆಯಲು ವರದಿಯಲ್ಲಿ ಅನೇಕ ಪರಿಹಾರ ಸೂಚಿಸಿದೆ. ಗ್ರಾಮೀಣ ಭಾಗದಲ್ಲಿ ಮಹಿಳಾ ಸಮಿತಿಗೆ ಚುನಾಯಿತ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು, ಪ್ರಾಂಶುಪಾಲರು ಸದಸ್ಯರಾಗಿ ಮಹಿಳಾ ಪೋಲಿಸ್ ನಿಯಂತ್ರಿಸಬೇಕೆಂದರು. ಚುನಾಯಿತ ಸದಸ್ಯೆಯರಿಗೆ ಶಿವಮೊಗ್ಗ ಹಾಗೂ ಗುಲ್ಬರ್ಗದಲ್ಲಿ ತರಬೇತಿ ಕೇಂದ್ರ ತೆರೆಯಬೇಕು, ಮಹಿಳಾ ಜಾಗೃತಿ ಶಿಬಿರ ನಡೆಸಬೇಕು, ನಿಗಮ ಮಂಡಳಿ ಮುಂತಾದ ನಾಮಕರ ಹುದ್ದೆಗಳಲ್ಲಿ ಮಹಿಳಾ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿದರು.

ಇದಕ್ಕೂ ಮೊದಲು ಅವರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಜಿಲ್ಲೆಯ ಮಹಿಳಾ ಸಂಘಟನೆಯ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿ ಅವರು ಸಮಸ್ಯೆಗಳನ್ನು ಕೇಳಿದರು.

ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಮಲ್ಲಿನಾಥ, ಮಹಿಳಾ ಮಕ್ಕಳ ಇಲಾಖೆ ಜಿಲ್ಲಾ ಅಧಿಕಾರಿ ರಾಧಾಕೃಷ್ಣ ಸಮಾರಂಭದಲ್ಲಿದ್ದರು. ರಾಜ್ಯದಲ್ಲಿ 2 ಕೋಟಿ 20 ಲಕ್ಷ ಮಹಿಳೆಯರಿದ್ದು, ಅಭಿವೃದ್ಧಿಗೆ ಸರ್ಕಾರ ನೀಡುವ ಮೂರು ಕೋಟಿ ರೂ. ಸಾಲದು. ಹೆಚ್ಚಿನ ಹಣ ಬಿಡುಗಡೆಗೆ ತಾವು ಮುಖ್ಯಮಂತ್ರಿಗಳಿಗೆ ಮನವಿ ಮಾಡಿರುವುದಾಗಿ ಹೇಳಿದರು. ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾಗಿದ್ದು ಇಲ್ಲಿ ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಅವಶ್ಯವಿದೆ ಎಂದರು.

ಮಾದರಿಯಲ್ಲಿ ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಮಹಿಳೆಯರಿಗಾಗಿಯೇ ಪ್ರತ್ಯೇಕವಾದ ಎರಡು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು.

* ಸಮಗ್ರ, ಶಿಶು ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಂಗನವಾಡಿ ನಡೆಸುವ ಜವಾಬ್ದಾರಿಯನ್ನು ಜಿಲ್ಲಾ ಮತ್ತು ತಾಲೂಕಾ ಪಂಚಾಯತ್‌ಯಿಂದ ಗ್ರಾಮ ಪಂಚಾಯತಿಗೆ ವರ್ಗಾಯಿಸಿ, ಸ್ಥಳೀಯ ಬಾಲ ವಿಕಾಸ ಮಹಿಳಾ ಸಮಿತಿಗಳನ್ನು ಈ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದ್ದಾರೆ. ಅಂಗನವಾಡಿಯ ಮೂಲಕ ನೀಡುತ್ತಿರುವ ಪೌಷ್ಟಿಕ ಆಹಾರಕ್ಕೆ ಪ್ರತಿ ಮಗುವಿಗೆ ಈಗ ನಿಗದಿಯಾಗಿರುವ ೧.೨೫ ರೂ.ಗಳಿಂದ ರೂ. ೩.೦೦ ಗಳಿಗೆ ಹೆಚ್ಚಿಸಬೇಕೆಂದೂ ಸಹ ಅವರು ಸಲಹೆ ನೀಡಿರುತ್ತಾರೆ. ಇದರಲ್ಲಿ ಅನೇಕ ಶಿಫಾರಸ್ಸುಗಳು ಜಾರಿಯಾಗಿದ್ದು, ಸಂತಸ ತಂದಿರುತ್ತವೆ.

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸಲ್ಲಿಸಿದ ಅನುಪಮ ಸೇವೆ

ಸ್ಕೌಟ್ಸ್ ಮತ್ತು ಗೈಡ್ಸ್ ಚಳಚಳಿ ವಿಶ್ವವ್ಯಾಪಿಯಾಗಿರುವ ಒಂದು ಯುವಜನಾಂಗದ ಕೂಟ. ಈ ಚಳವಳಿಯ ಉದ್ದೇಶವು ಯುವ ಪೀಳಿಗೆಯ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ ಮಾಡುವುದಾಗಿದೆ.

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಜಗತ್ತಿನ ಅತಿ ದೊಡ್ಡ ಸೇವಾ ಸಂಸ್ಥೆಗಳಲ್ಲಿ ಒಂದು. ರಾಜಕೀಯವಲ್ಲದ, ಜಾತಿ, ಹುಟ್ಟು, ಮತ, ಪಂಥಗಳ ಬೇಧವಿಲ್ಲದೆ ಎಲ್ಲ ಮಕ್ಕಳಿಗೂ, ಯುವಕರಿಗೆ ಬೆಳೆಯಲು ಅವಕಾಶವಿರುವ ಈ ಸಂಸ್ಥೆಯ ಸ್ಥಾಪಕರು ಲಾಡ್ ಬೇಡನ್ ಪೊವೆಲ್.

ಈ ಸಂಸ್ಥೆ ದೇವರಿಗೂ, ದೇಶಕ್ಕೂ, ಪರರಿಗೂ ಹಾಗೂ ತನ್ನ ಪೂರ್ಣ ಬೆಳವಣಿಗೆಗೂ ಮಾಡಬೇಕಾದ ಕರ್ತವ್ಯದ ಹೊಣೆಗಾರಿಕೆಯನ್ನು ತಿಳಿಸಿಕೊಡುತ್ತದೆ.

ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಲು ವಯಸ್ಸಿನ ಯಾವ ನಿರ್ಭಂಧವೂ ಇಲ್ಲ. ಲಿಂಗ ಬೇಧವೂ ಇಲ್ಲ. ಆಸಕ್ತರು ಇಲ್ಲಿ ಭಾಗವಹಿಸಿ ತನ್ನ ಕೈಲಾದ ಮಟ್ಟಿಗೆ ಸೇವೆ ಸಲ್ಲಿಸಬಹುದು. ಶ್ರೀಮತಿ ಗುರಮ್ಮ ಸಿದ್ಧಾರಡ್ಡಿಯವರು ಈ ಸಂಸ್ಥೆಗೆ ಸಲ್ಲಿಸಿದ ಸೇವೆ ಅನುಪಮವಾಗಿದೆ. ೧೯೭೫ರಲ್ಲಿ ಈ ಸಂಸ್ಥೆಯ ಸದಸ್ಯರಾಗಿ ಸತತ ೩೦ ವರ್ಷಗಳ ಕಾಲ ಡಾ. ಎಸ್.ಎಸ್. ಸಿದ್ಧಾರಡ್ಡಿಯವರು ಕಟ್ಟಿ ಬೆಳೆಸಿದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಬೀದರ ಜಿಲ್ಲಾ ಸಂಸ್ಥೆಯು ಅವರ ಆಕಸ್ಮಿಕ ನಿಧನದಿಂದ ತೆರವಾಗಿದ್ದ ಮುಖ್ಯ ಜಿಲ್ಲಾ ಆಯುಕ್ತರ ಜಾಗಕ್ಕೆ ಕಳೆದ ೩ ವರ್ಷಗಳಿಂದ ಗುರಮ್ಮ ಸಿದ್ಧಾರಡ್ಡಿಯವರು ನೇಮಕಗೊಂಡರು. ಅಂದಿನಿಂದ

ಜಗತ್ತಿನ ಅತ್ಯಂತ ಸುವ್ಯವಸ್ಥಿತ ಎನಿಸಿದ ಈ ಸಂಸ್ಥೆಗೆ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ.

ಕಳೆದ ಮೂರು ವರ್ಷಗಳಿಂದ ಜಿಲ್ಲಾ ಮಟ್ಟದ ಕ್ಯಾಂಪೂರಿ, ಪ್ರೇರಣಾ ತರಬೇತಿ, ಸ್ಕೌಟ್ಸ್ ಮತ್ತು ಗೈಡ್ಸ್ ಮೂಲ ತರಬೇತಿ, ಸ್ಮಾರ್ಟ್ ತರಬೇತಿ, ಕಾಲೇಜು ವಿದ್ಯಾರ್ಥಿಗಳಿಗೆ ಅಗ್ರಗಾಮಿತ್ವ ಹಾಗೂ ಸಾಹಸಮಯ ತರಬೇತಿ, ವಿಶ್ವ ಶಾಂತಿ ದಿನಾಚರಣೆ ನಿಮಿತ್ಯ ಪಥಸಂಚಲನ ಹಾಗೂ ವಿಚಾರ ಸಂಕಿರಣ ನಡೆಸುತ್ತಾರೆ. ಅಲ್ಲದೆ ಎಲ್ಲ ರಾಷ್ಟ್ರೀಯ ಹಬ್ಬಗಳಂದು ಗೌರವ ವಂದನೆ ಸಲ್ಲಿಸಲು ಕವಾಯಿತು ಕಾರ್ಯಕ್ರಮ, ಪರಿಸರ ಸಂರಕ್ಷಣೆಗಾಗಿ ಮಗುವಿಗೊಂದು ಮರ ಕಾರ್ಯಕ್ರಮಗಳು ಮಾಡುವುದರಲ್ಲಿ ಎತ್ತಿದ ಕೈ.



ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಂಸ್ಥೆಯ ರಾಜ್ಯಾಧ್ಯಕ್ಷರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾ ಅವರೊಂದಿಗೆ ಜಿಲ್ಲಾಧ್ಯಕ್ಷರಾದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು

ಇದಕ್ಕೆಲ್ಲಾ ಮಿಗಿಲಾಗಿ ಡಾ. ಎಸ್.ಎಸ್. ಸಿದ್ಧಾರಡ್ಡಿಯವರ ಸ್ಮರಣಾರ್ಥ ರಾಜ್ಯ ಪುರಸ್ಕಾರ ಮತ್ತು ರಾಷ್ಟ್ರಪತಿ ಪುರಸ್ಕಾರ ಪಡೆದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಗೌರವ ಸನ್ಮಾನ ಮಾಡುತ್ತಿರುವರು. ಅನೇಕ ಕಾರ್ಯಕ್ರಮಗಳನ್ನು ಮಾಡಿ ಈ ಸಂಸ್ಥೆಯ ಕಚೇರಿಗೆ ಸ್ಥಳವನ್ನು ಉಚಿತವಾಗಿ ನೀಡಿದ್ದಾರೆ. ರಾಜ್ಯದಲ್ಲಿ ೩೪ ಜಿಲ್ಲೆಯಲ್ಲಿ ಬರಿ ೫ ಜನ ಮಹಿಳಾ ಜಿಲ್ಲಾ ಮುಖ್ಯ ಆಯುಕ್ತರಿದ್ದಾರೆ. ಅವರಲ್ಲಿ ಬೀದರಿನಲ್ಲಿ ಗುರಮ್ಮ ಸಿದ್ಧಾರೆಡ್ಡಿ ಒಬ್ಬರು. ಮಕ್ಕಳ ಬಗ್ಗೆ ಅತೀವ ಕಾಳಜಿ ಹೊಂದಿರುವ ರಾಜ್ಯದಲ್ಲಿ ಮೊದಲನೆಯವರು.

ಮಂಡ್ಯ ಜಿಲ್ಲೆಯ ಮೀರಾ ಶಿವಲಿಂಗೇಗೌಡ, ತುಮಕೂರಿನ ಆಶಾ ಪ್ರಸನ್ನಗೌಡ, ಹಾವೇರಿಯಲ್ಲಿ ಮಾಧುರಿ ದೇವದಾರ, ಬೆಂಗಳೂರಿನಲ್ಲಿ ಸರೋಜಾ ಇರುವ ಹಾಗೆ ಬೀದರನಲ್ಲಿ ಗುರಮ್ಮಾ ಸಿದ್ದಾರಡ್ಡಿಯವರು ಯುನಿಫಾರಂ ಹಾಕಿ ಮಕ್ಕಳ ಕಷ್ಟ ಸುಖ ಗಮನಿಸುತ್ತಾರೆ ಎಂದು ಈ ಸಂಸ್ಥೆಯ ರಾಜ್ಯ ಅಧ್ಯಕ್ಷರಾದ ಶ್ರೀ ಪಿ.ಜಿ.ಆರ್. ಸಿಂಧಿಯಾ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಗತಿಪರ ರಾಜಕಾರಣಿ

ಶ್ರೀಮತಿ ಗುರಮ್ಮ ಮತ್ತು ಡಾ. ಎಸ್.ಎಸ್. ಸಿದ್ದಾರಡ್ಡಿ ದಂಪತಿಗಳಿಬ್ಬರು ಆದರ್ಶರು. ಅವರ್‍ಯಾರಿಗೂ ತೊಂದರೆ ಕೊಟ್ಟವರಲ್ಲ. ಇನ್ನೊಬ್ಬರ ಭಾವನೆಗಳಿಗೆ ಸ್ಪಂದಿಸುವ ಮನೋಭಾವದರು. ಕೇವಲ ಕನಸು ಕಾಣುತ್ತಾ ಕೂರುವ ವ್ಯಕ್ತಿಗಳು ಅವರಲ್ಲ ಕೆಲಸವೇ ಜೀವನದಲ್ಲಿ ಉತ್ಸಾಹವನ್ನು ಹೆಚ್ಚಿಸುವುದರಿಂದ, ಸದಾ ಒಂದಿಲ್ಲೊಂದು ಕೆಲಸದಲ್ಲಿ ತನ್ನನ್ನು ತಾವು ತೊಡಗಿಸಿ ಕೊಳ್ಳುತ್ತಿದ್ದರು. ಅವರ ಮಟ್ಟಿಗೆ ಅವರು ಮಾಡುವ ಕೆಲಸ ಬರೀ ಕೆಲಸವಾಗಿರಲಿಲ್ಲ. ಅದು ಕಾಯಕವಾಗಿತ್ತು. ಆಯ್ದಕ್ಕಿ ಮಾರಯ್ಯ ಹೇಳುವಂತೆ "ಕಾಯಕದಲ್ಲಿ ನಿರತನಾದಡೆ ಗುರು, ಲಿಂಗ, ಜಂಗಮರ ಹಂಗು ಹರಿಯಬೇಕು" ಎನ್ನುವ ಮಾತು, ಏಕೆಂದರೆ ಕಣ್ಣಿಗೆ ಕಾಣದ ಕೈಲಾಸ ಯಾವುದು ಇಲ್ಲ ಕಾಯಕವೇ ಕೈಲಾಸವೆಂಬ ತತ್ವ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ಒಂದು ದಿವಸ ಅದೇನಾಯಿತೆಂದರೆ ಡಾಕ್ಟರುಗಳು ಜಮೀನು, ಭೂಮಿ ಕೊಂಡುಕೊಳ್ಳಬಾರದು, ಅದು ಕಾನೂನು ಬಾಹಿರ ಎಂದು ೧೯೮೩ರಲ್ಲಿ ಆಗಿನ ಎ.ಸಿ. ಅವರು ಸಿದ್ಧಾರಡ್ಡಿಯವರ ಮೇಲೆ ಕೇಸು ಹಾಕಿದರು. ಅವರಿಗಿದ್ದ ೧೩.೨೮ ಗುಂಟೆ ಎಕರೆ ಭೂಮಿಯನ್ನು ಬಡವರಿಗೆ ಹಂಚಲು ಮುಂದಾದರು. ಇವರೊಂದಿಗೆ ಕೃಷ್ಣಮೂರ್ತಿ ಅವರಿಗೂ ಇದೇ ಸಂಬಂಧ ಕೇಸ ಮಾಡಲಾಯಿತು. ಏನು ಮಾಡುವುದೆಂದು ತೋಚದಾದರು. ಆವಾಗ ಭೀಮಣ್ಣ ಖಂಡ್ರೆಯವರು ಡಾ. ಸಿದ್ದಾರಡ್ಡಿಯವರನ್ನು ಕರೆಯಿಸಿ ೨೪ ಗುಂಟೆಯೊಳಗೆ ಕೋರ್ಟನಿಂದ

ಸ್ಟೇ ತರಿಸಿ ನಾನಿರುವರೆಗೆ ಹೆದರಬೇಡಿಯೆಂದು ಧೈರ್ಯ ತುಂಬಿದರು. ಆದರೆ ನಾವು ಯಾವತ್ತು ಇನ್ನೊಬ್ಬರಿಗೆ ತೊಂದರೆ ಮಾಡಿದವರಲ್ಲ. ನಮಗೇಕೆ ಇಂಥ ಪರಿಸ್ಥಿತಿ ಬಂತೆಂದು ಸ್ವಲ್ಪ ಬೇಸರವೆನಿಸಿತ್ತು. ಆವಾಗ ಗುರಮ್ಮ ನವರ ತಲೆಯಲ್ಲಿ ಒಂದು ವಿಚಾರ ಹೊಳೆಯಿತು. ಹೇಗಾದರೂ ನಾನು ಖಾಲಿಯಿದ್ದೇನೆ, ನಾನೇನು ಡಾಕ್ಟರಳಲ್ಲ, ಇಂಜಿನಿಯರಳು ಅಲ್ಲ. ಶಿಕ್ಷಕಿಯೂ ಅಲ್ಲ. ಯಾವ ಸರಕಾರಿ ಉದ್ಯೋಗಸ್ಥಳೂ ಅಲ್ಲ ನಾನೇಕೆ ರಾಜಕೀಯ ಸೇರಬಾರದು, ರಾಜಕೀಯ ವ್ಯಕ್ತಿಗಳಿಗೆ ಜನ ಬಹಳ ಗೌರವ ಕೂಡುತ್ತಾರೆಂಬ ಸುಳ್ಳು ಪ್ರತಿಷ್ಠೆ ಗುರಮ್ಮರವರಲ್ಲಿ ಮೂಡಿತು. ಆ ಕ್ಷಣವೇ ಒಂದು ನಿರ್ಧಾರ ತೆಗೆದುಕೊಂಡರು. ತಾನೊಬ್ಬ ನಿಷ್ಠಾವಂತ ರಾಜಕಾರಣಿಯಾಗಬೇಕು. ಜನರ ಸೇವೆ ಮಾಡುವ ಅವಕಾಶ ಸಿಗುತ್ತದೆ. ನೊಂದವರ ನೋವಿಗೆ ಸ್ಪಂದಿಸಲು ಅವಕಾಶ ದೊರೆಯುತ್ತದೆಂದು ವಿಚಾರಿಸಿ ಆ ಕ್ಷಣವೇ ರಾಜಕೀಯ ಪ್ರವೇಶಕ್ಕೆ ಸಿದ್ಧರಾದರು.

ತನ್ನನ್ನು ತಾನು ರಕ್ಷಿಸಿಕೊಳ್ಳಲು ಖಂಡ್ರೆಯವರಂತಹ ರಾಜಕಾರಣಿಗಳ ಬಲ ಸಿಗುತ್ತದೆಯೆಂದುಕೊಂಡು ವಿಚಾರ ಮಾಡುತ್ತಾರೆ. ಆದರೆ ತನ್ನ ಯಾವ ನಿರ್ಧಾರವು ಒಂಟಿಯಾಗಿ ನಿರ್ಧರಿಸುತ್ತಿರಲಿಲ್ಲ. ಯಾವಾಗಲೂ ಪತಿಯೊಂದಿಗೆ ಒಂದಾಗಿ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸುವ ಸ್ವಭಾವ ಅವರದಾಗಿತ್ತು. ಆದರೆ ಡಾಕ್ಟರ್ ಪತಿ ಹೆಂಡತಿಯ ಈ ವಿಚಾರ ಕೇಳಿ ಒಮ್ಮೆಲೆ ಒಪ್ಪಿಗೆ ನೀಡದಿದ್ದರೂ, ಕೆಲವೊಂದು ಸಮಜಾಯಿಸಿಯ ಮಾತುಗಳು ಹೇಳಿದರು. ಪತ್ನಿಯು ಏಕಾಂತದಲ್ಲಿ ಬಂದು ಹೇಳಿದ ಈ ಮಾತುಗಳ ಬಗ್ಗೆ ಅಲೋಚಿಸಿ ಹೀಗೆಂದರು. "ನೀನು ಸ್ವಭಾವತಃ ಮುಂಗೋಪಿ, ಸಹನೆ ಕಡಿಮೆ, ಸಣ್ಣಮಾತಿಗೂ ನಿನಗೆ ಪ್ರತಿಷ್ಠೆ ಅಂತ ಕೂರುತಿ, ನಿನಗೆ ಆ ಕ್ಷೇತ್ರ ಬಹುಶಃ ಸರಿಯಾದುದಲ್ಲ. ರಾಜಕೀಯ ಎಂಬುದು ಅಷ್ಟು ಸುಲಭದ ಕ್ಷೇತ್ರವಲ್ಲ. ತುಂಬಾ ಸಮಸ್ಯೆಗಳು ಎದುರಾಗುತ್ತವೆ. ಅದು ಸಮುದ್ರದಂತೆ. ನೀರಿಗಿಳಿದರೆ ಈಜಲು ಕಲಿಯಬೇಕಾಗುತ್ತದೆ. ಇಲ್ಲವಾದರೆ ಅಪಾಯ ತಪ್ಪಿದ್ದಲ್ಲ. ನೀನು ಒಬ್ಬಳೆ ಮುಳುಗುವುದಿಲ್ಲ. ನಮ್ಮೆಲ್ಲರನ್ನು

ಮುಳುಗಿಸುತ್ತಿಯೆಂದು" ಹೇಳಿದರು. ಡಾಕ್ಟರ್ ಸಾಹೇಬರು ಗುರಮ್ಮನವರ ಬದುಕಿನ ಸಾಂತ್ವನ ಶಕ್ತಿಯಾಗಿದ್ದರು. ಉತ್ತಮ ಸಲಹೆಗಾರರಾಗಿದ್ದರು.

ನೀನೊಬ್ಬ ಆವೇಶಭರಿತಳು ಮತ್ತು ಸೌಂದರ್ಯವಂತಳಲ್ಲವೆಂಬ ಕೀಳರಮೆ ನಿನ್ನೊಳಗಿದೆ, ಇವೆಲ್ಲ ಬಿಡಬೇಕಾಗುತ್ತದೆ. ಎಲ್ಲಾ ಜನರೊಂದಿಗೆ ಹೊಂದಾಣಿಕೆಯಿಂದ ಇರಬೇಕಾಗುತ್ತದೆ. ನೀನು ಹಳ್ಳಿಯ ಕುಟುಂಬದವಳು. ನನ್ನ ಮದುವೆಯಾದ ನಂತರವೂ ನೀನು ಕ್ಲಬ್, ಮಹಿಳಾಮಂಡಳ ಅಂತ, ಎತ್ತರದ ವ್ಯಕ್ತಿಗಳ ಜೊತೆ ಅಡ್ಡಾಡುತ್ತಿ, ನೀನು ರಾಜಕೀಯ ಸೇರಬೇಕೆಂದರೆ ಸರಳ ಜೀವನ ಬೇಕು ಒಡವೆ ಧರಿಸುವುದು ಬಿಡಬೇಕು ಸಾದಾ ಉಡುಪು ಇರಬೇಕು ನಿನ್ನ ಕೆಲಸವೇ ನಿನಗೆ ಒಡವೆಯಾಗಬೇಕು ಅಂದಾಗ ಮಾತ್ರ ಸಮಾಜ ಮನ್ನಣೆ ಕೊಡುತ್ತದೆಂದು ಧಾರಾಳವಾಗಿ ಸಲಹೆ, ಕಿವಿಮಾತುಗಳು ಹೇಳಲಾರಂಭಿಸಿದರು.

ಈ ಎಲ್ಲಾ ವಿಚಾರಗಳು ಮನದಲ್ಲಿಟ್ಟುಕೊಂಡು ಜೀವದ ಗೆಳತಿಯಾದ ರತ್ನಾ ಕುಶನೂರ ಹತ್ತಿರ ಸಲಹೆ ಕೇಳಿದಾಗ ಅವರು ಸುತ್ತು ಬಳಸಿ ನಕಾರಾತ್ಮಕ ಉತ್ತರ ನೀಡಿದರು. ಇದೇ ಮಾತು ಅವರ ಪತಿ ಶ್ರೀ ವೀರಶೆಟ್ಟಿ ಕುಶನೂರು ಅವರಿಗೆ ವಿಚಾರಿಸುತ್ತಾರೆ. ಸಹೋದರ ಸಮಾನರಾದ ಅವರು ತಂಗಿಯವರೇ ನೀವು ರಾಜಕೀಯಕ್ಕೆ ಬರುವುದು ನನ್ನ ಮುಖಾಂತರ ಬೇಡ, ನಾನೇನಿದ್ದರು ನನ್ನ ಹೆಂಡತಿಗೆ ಮೇಲೆ ತರುವ ಪ್ರಯತ್ನದಲ್ಲಿರುತ್ತೇನೆ. ನೀವು ರಾಜಕೀಯ ಮುತ್ಸದ್ಧಿ ಭೀಮಣ್ಣಾ ಖಂಡ್ರೆಯವರ ಮುಖಾಂತರ ಪಕ್ಷ ಸೇರಬಹುದು ಎಂದು ಬಿಚ್ಚು ಮನಸ್ಸಿನಿಂದ ಉತ್ತರಿಸಿದರು. ಆವಾಗ ಗುರಮ್ಮನವರು ತಮ್ಮ ಮನದ ಇಂಗಿತವನ್ನು ಖಂಡ್ರೆಯವರಿಗೆ ತಿಳಿಸಿದರು. ತಾನು ಇಂದಿರಾ ಗಾಂಧೀಜಿಯವರ ತತ್ವಗಳಿಗೆ, ಸಿದ್ಧಾಂತಕ್ಕೆ ಮೊರೆ ಹೋದ ವಿಷಯ ಅವರು ಮಾಡಿರುವ ಬ್ಯಾಂಕ್ ರಾಷ್ಟ್ರೀಕರಣ, ೨೦ ಅಂಶಗಳ ಕಾರ್ಯಕ್ರಮ ಅವರು ಇಟ್ಟ ದಿಟ್ಟ ಹೆಜ್ಜೆಯ ನಿಲುವುಗಳು ನನಗೆ ಹಿಡಿಸಿವೆಯೆಂದು, ನಾನು ನಿಮ್ಮ ಮುಖಾಂತರ ಕಾಂಗ್ರೆಸ್

ಸೇರಬೇಕೆಂದಿರುವೆ ಎಂದು ಹೇಳಿದರು. ಆವತ್ತಿನ ದಿವಸವೇ ಚಂದ್ರಕಾಂತ ಸಿಂದೋಲರವರು, ರಾಮಚಂದ್ರ ವೀರಪ್ಪ ಆಗ ಕಾಂಗ್ರೇಸ್‌ನಲ್ಲಿದ್ದವರು, ಶಿವರಾಜ ಗುಮ್ಮಾ, ಸುಧಾಕರ ತಿವಾರಿಯವರ ಒಟ್ಟು ಟೀಮು ಒಂದು ಪ್ರೇಸ್ ಮೀಟ ಮಾಡಿ ಗುರಮ್ಮರವರನ್ನು ಕಾಂಗ್ರೇಸ್ ಪಕ್ಷಕ್ಕೆ ಸೇರಿಸಿಕೊಂಡರು. "ನಾನಂದು ರಾಜಕೀಯ ಬಣ್ಣ ಬಳಿದುಕೊಂಡೆ" ಎನ್ನುತ್ತಾರೆ. ಏಕೆಂದರೆ ಇಲ್ಲಿಯವರೆಗೆ ರಾಜಕೀಯ ಅಂದರೆ ಏನು ಅಂತಾ ತಿಳಿದಿರದ ಗುರಮ್ಮನವರು ಚುರುಕಿನಿಂದ ರಾಜಕೀಯದಲ್ಲಿ ಕಾರ್ಯ ಪ್ರವತ್ತರಾದರು. ಅದೇ ಓಡಾಟದ ಖುಷಿಯಲ್ಲಿ ಮನ್ನಳ್ಳಿ ಕ್ಷೇತ್ರದಿಂದ ಜಿಲ್ಲಾ ಪಂಚಾಯತಗೆ ಟಿಕೇಟ ಕೇಳಿದಕ್ಕೆ ಇವರಿಗೆ ಟಿಕೇಟ್ ಸಿಗಲಿಲ್ಲ. ಆದರೆ ಖರ್ಗೆಯವರ ಗುಂಪೆಂದು ಗುರುತಿಸಿಕೊಂಡ ರತ್ನಾ ಕುಶನೂರವರಿಗೆ ಟಿಕೇಟ್ ಸಿಕ್ಕಿತು. ಅವರು ಗೆದ್ದು ಬಂದರು. ಉತ್ಸಾಹದಿಂದ ಬೀಗಿದರು. ಆ ಕ್ಷಣಕ್ಕೆ ಗುರಮ್ಮನವರಿಗೆ ಅವಮಾನವೆನಿಸಿದರೂ, ನೊಂದುಕೊಳ್ಳಲಿಲ್ಲ. ಬೇರೆಯವರಾಗಿದ್ದರೆ ಘರ್ಷಣೆ, ಪೈಪೋಟಿ, ವೈರತ್ವ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳುತ್ತಿದ್ದರು.

ಒಂದು ದಿವಸ ಡಾ. ಕೌಜಲಗಿ ಹಾಗೂ ನಾಗಣ್ಣ ಜಾಬಶೆಟ್ಟಿಯವರು ಗುರಮ್ಮನವರನ್ನು ಕರೆದು ಹೀಗೆನ್ನುತ್ತಾರೆ... ನೀವಿಬ್ಬರು ರಾಜಕೀಯದಲ್ಲಿ ವೈಮನಸ್ಸು ಮಾಡಿಕೊಳ್ಳಬಾರದು. ಇದು ನಿಮಗೆ ಶೋಭೆಯಲ್ಲ ನಮ್ಮ ಹೆಣ್ಣು ಮಕ್ಕಳು ಹೋಗಿ ಬಂದು ಕೆಲಸ ಮಾಡಬೇಕಷ್ಟೆ ಬುಸುಗುಟ್ಟಿದರೆ ಹೊರಗೆ ಹೋಗುವುದೇ ಬೇಡವೆಂದು ಹೇಳಿದರು. ಈ ಮಾತನ್ನು ಗುರಮ್ಮ ನವರು ಗಂಭೀರವಾಗಿ ತೆಗೆದುಕೊಂಡು ರತ್ನಾ ಕುಶನೂರ ಎದುರಿಗೆ ಸೋಲನ್ನೊಪ್ಪಿಕೊಂಡವಳಂತೆ ಮಾಡಿ ಸ್ಥಾನ ಗಿಟ್ಟಿಸಲು ಏನೇನೋ ತಂತ್ರಗಾರಿಕೆ ಮಾಡಿದರು. ಮುಂದೆ ಕಾಂಗ್ರೇಸ್ ಪಕ್ಷದಲ್ಲಿ ಉತ್ತಮ ಕಾರ್ಯಮಾಡಿ, ಒಳ್ಳೆಯ ಹೆಸರು ಪಡೆದು ೧೯೮೬ರಲ್ಲಿ ಜಿಲ್ಲಾ ಮಹಿಳಾ ಕಾಂಗ್ರೇಸ್ ಅಧ್ಯಕ್ಷರಾದರು. ೧೯೯೮ ಕಾರ್ಯದರ್ಶಿಯಾಗಿ ಉಪಾಧ್ಯಕ್ಷರಾದರು. ಮುಂದೆ ರಾಜ್ಯ ಮಹಿಳಾ ಕಾಂಗ್ರೇಸ್‌ನ ಕಾರ್ಯದರ್ಶಿಯಾಗಿ,

ಉಪಾಧ್ಯಕ್ಷರಾದರು. ಮತ್ತು ಟೇಲಿಫೋನ್ ಅಡ್ವೈಜರಿಬೋರ್ಡ್‌ನ್ ಸದಸ್ಯರಾಗಿ, ಸೋಸಿಯಲ್ ವೆಲ್‌ಫೇರ್ ಬೋರ್ಡ್‌ನ ಸದಸ್ಯರಾದರು. ಕಪಾರ್ಟ್ ಸದಸ್ಯರಾದರು ನ್ಯಾಷನಲ್ ಬೋರ್ಡ್ ಹೀಗೆ ಹಲವಾರು ಸದಸ್ಯತ್ವವನ್ನು ಪಡೆದು, ಪಕ್ಷದಲ್ಲಿ ನಿಷ್ಠಾವಂತರಾಗಿ ದುಡಿದರು. ಖಂಡ್ರೆಯವರು ಗುರಮ್ಮನವರಿಗೆ ಎತ್ತರಕ್ಕೆ ಬೆಳಸಬೇಕೆಂಬ ಆಸೆ ಹೊಂದಿದ್ದರು. ಅವರ ಆಸೆಯಂತೆ ಬೆಳೆಯತೊಡಗಿದರು. ಬೀದರ ಜಿಲ್ಲಾ ಸಹಕಾರ ಒಕ್ಕೂಟದ ಸದಸ್ಯರಾಗಿ ಆರು ವರ್ಷ ಸೇವೆಸಲ್ಲಿಸಿದರು. ಬೀದರ ಜಿಲ್ಲಾ ಗ್ರಾಹಕರ ವೇದಿಕೆ ಸದಸ್ಯರಾಗಿ ೧೯೯೨ರಿಂದ ೧೯೯೭ರ ವರೆಗೆ ಸೇವೆ ಸಲ್ಲಿಸಿದರು. ಗ್ರಾಮೀಣ ತಂತ್ರಜ್ಞಾನ, ಪ್ರವಾಸೋದ್ಯಮ, ಯುವಜನ ಸೇವೆ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರಚಾರ ಇಲಾಖೆ ಸಮಿತಿಯ ಸದಸ್ಯರಾಗಿ ಲಿಂಗ ಸಮಾನತೆ ಬೋರ್ಡಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇವೆಲ್ಲವುಗಳನ್ನು ಪಡೆಯಲು ಸಾಕಷ್ಟು ಪ್ರಯತ್ನ ಮಾಡಬೇಕಾಗಿತ್ತು ಎನ್ನುತ್ತಾರೆ.

ಇವರು ಇನ್ನರ ವಿಲ್ ಕ್ಲಬ್‌ನ ಸಂಸ್ಥಾಪಕ ಜಿಲ್ಲಾ ಅಧ್ಯಕ್ಷರಾಗಿ, ಇನ್ನರವ್ಹಿಲು ಜಿಲ್ಲಾ ೩೧೬ ಸಭಾಪತಿಯಾಗಿ ಅನೇಕ ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ಅವುಗಳ ಮುಖಾಂತರ ಅಹರ್ನಿಶ ಸೇವೆ ಸಲ್ಲಿಸಿ, ಸಮಾಜ ಸೇವಕರಿಗೆ ಮಾದರಿ ಆಗಿದ್ದಾರೆ. ಅವರು ವ್ಯಕ್ತಿಯಾಗಿ ದುಡಿದು ಸಾಮಾಜಿಕ ಶಕ್ತಿಯಾಗಿದ್ದಾರೆ. ಅಲ್ಲದೆ ರಾಷ್ಟ್ರಮಟ್ಟದ ರಾಜಕೀಯ ಮುಖಂಡರಾದ ಮಾರ್ಗರೆಟ್ ಆಳ್ವ, ಶ್ರೀಮತಿ ಶೌಖತ ಖುರೇಶಿಯಂಥವರ ಜೊತೆಗೆ ನಿಕಟ ಸಂಪರ್ಕ ಇಟ್ಟುಕೊಂಡರು. ಎಷ್ಟೇ ಪ್ರಭಾವ ಬೀರಿದರೂ ರಾಜಕೀಯದಲ್ಲಿ ಮೇಲೆ ಬರಲು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತಿತ್ತು.

ಆದರೆ ಗುರಮ್ಮನವರಿಗೆ ಜನ ಸಂಪರ್ಕ ಹೆಚ್ಚಿತ್ತು. ಏಕೆಂದರೆ ಡಾ: ಸಿದ್ದಾರಡ್ಡಿಯವರು ಜನಪ್ರಿಯ ವೈದ್ಯರಾಗಿದ್ದರು ಹಳ್ಳಿ ಹಳ್ಳಿಗೂ ಹೆಸರುವಾಸಿಯಾಗಿದ್ದರು. ಗುರಮ್ಮನವರು ಹಳ್ಳಿಗಳಿಗೆ ಪ್ರಚಾರಕ್ಕೆ ಹೋದಾಗ ಡಾ. ಹೆಂಡತಿಯೆಂದು ತಿಳಿದು ಒಳಕರೆದು ಊಟ, ತಿಂಡಿ ಮಾಡಿಸಿ ಕೆಲವೊಂದು

ಬುದ್ಧಿ ಮಾತುಗಳು ಹೇಳಿ ಕಳುಹಿಸುತ್ತಿದ್ದರು. ಡಾಕ್ಟರ್ ದೇವರಂಥ ಮನುಷ್ಯರು ನೀವೇಕೆ ಕಾಂಗ್ರೇಸ್‌ನವರೊಂದಿಗೆ ತಿರುಗಾಡುತ್ತಿರುವಿರಿ, ಡಾಕ್ಟರು ದೇವರ ಸಮಾನ, ದೇವರನ್ನು ಹೊತ್ತ ಕತ್ತೆಯಾಗಬೇಡಿ ಅವರು ಎಲ್ಲರಗಿಂತ ಮೇಲಾದವರು, ಅವರ ವರ್ಚಸ್ಸಿಗೆ ಧಕ್ಕೆ ತರಬೇಡಿಯೆಂದು ಕೆಲವು ಅವರ ಅತ್ಮೀಯ ರೋಗಿಗಳು ಅವರಿಗೆ ಉಚಿತ ಉಪದೇಶ ಮಾಡಿದರು ಎಂದು ನೆನಪಿಸಿಕೊಳ್ಳುತ್ತಾರೆ.

ಹೀಗೆಲ್ಲಾ ಕೇಳಿದ ಮೇಲೆ ಗುರಮ್ಮನವರಿಗೂ ತಾನೇನು ತಪ್ಪು ಮಾಡಿದ್ದಿನಾ ಅಂತ ಯೋಚನೆ ಬರುತ್ತಿತ್ತು. ಆದರೂ ನೀರಿಗಿಳಿದ ಮೇಲೆ ಈಜಾಡಲೇ ಬೇಕೆಂದು ಮುಂದೆ ಹೊರಟರು. ಹೇಳಿ ಕೇಳಿ ಹಟವಾದಿ ಛಲಗಾರ್ತಿ, ಪರಿಶ್ರಮಜೀವಿಯಾದ ಇವರು ಪ್ರಯತ್ನದಿಂದ ಪ್ರತಿಭಾವಂತರಾಗಬೇಕೆಂಬ ಹಂಬಲವುಳ್ಳವಳು. ಯಾವುದೇ ಕಾರಣಕ್ಕೂ ಆತ್ಮ ವಿಶ್ವಾಸವನ್ನು ಕುಗ್ಗಿಸಿ ಕೊಂಡವರಲ್ಲ. ಈ ಹಟಮಾರಿ ಸ್ವಭಾವದಿಂದ ಮುಂದೆ ಅನೇಕ ಸಮಸ್ಯೆಗಳು ಕಷ್ಟಗಳು ಎದುರಿಸಬೇಕಾಯಿತು. ಭೀಮಣ್ಣ ಖಂಡ್ರೆಯವರು ಇವರ ಬಗ್ಗೆ ತುಂಬಾ ಯೋಚನೆ ಮಾಡುತ್ತಿದ್ದರು. ತನ್ನ ಪಕ್ಕಕ್ಕೆ ಕೂರಿಸಿಕೊಂಡೆ ರಾಜಕೀಯ ಮಾಡಿದರು. ಇವರ ಮೇಲೆ ಬಹಳ ವಿಶ್ವಾಸವಿತ್ತು. ಇವರ ಮಾತುಗಳು ಖಂಡ್ರೆಯವರಿಗೆ ವೇದವಾಕ್ಯ. ಅವರ ಮಾತಿಗೆ ಮನ್ನಣೆ ಕೊಡುತ್ತಿದ್ದರು. ಹಾಗಾಗಿ ಖಂಡ್ರೆಯವರೊಂದಿಗೆ ಅನೇಕ ಸಲ ಮುಕ್ತ ಚರ್ಚೆಗಳು ನಡೆಯುತ್ತಿದ್ದವು. ಅನೇಕರಿಗೆ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಕೊಡಿಸಿದರು. ಇಂಜಿನೀಯರಿಂಗ್ ಸೀಟು ಕೊಡಿಸಿದರು. ತಾನೆ ಮಂತ್ರಿಯೆನ್ನುವಂತೆ ವರ್ತಿಸುತ್ತಿದ್ದರು. ಭಾಲ್ಕಿಯ ಜನರೆಲ್ಲ ಇವರನ್ನು ಊರ ಮಗಳಂತೆ ಗೌರವಿಸುತ್ತಿದ್ದರು. ಇವರ ಯಾವ ಕೆಲಸಗಳು ನಿಲ್ಲುತ್ತಿರಲಿಲ್ಲ. ಇಷ್ಟೆ ಖಂಡ್ರೆಯವರಿಗೆ ದ್ವೇಷಿಸುವವರು ಇವರಿಗೂ ದ್ವೇಷಿಸುತ್ತಿದ್ದರು.

೧೯೮೯ರಲ್ಲಿ ಡಾ. ವಿಜಯಕುಮಾರ ಖಂಡ್ರೆ ಎಂ.ಎಲ್.ಎ. ಆದರು. ಸೂರ್ಯವಂಶಿ ಎಂ.ಪಿ. ಆದರೂ ಇಬ್ಬರು ಭೀಮಣ್ಣ ಖಂಡ್ರೆಯವರ ಅಭ್ಯರ್ಥಿಗಳೇ. ಬೀದರಿನಿಂದ ಲಾಯಿಕೊದ್ದೀನ ಕಾಂಗ್ರೇಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಗುರಮ್ಮನವರು ಹೋಗಿದ್ದರು. ಇವರಿಗೆ ಆತ್ಮೀಯರೊಬ್ಬರು ಸ್ವತಂತ್ರವಾಗಿ ಸ್ಪರ್ಧಿಸಿದ್ದರು. ಯಾರೊಬ್ಬರ ಸಲುವಾಗಿ ನೀವು ರಾಜಕೀಯ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಬಾರದೆಂದು ಗುರಮ್ಮನವರಿಗೆ ಹೆದರಿಸಿದರು. ನೀವು ಅತಿಯಾಗಿ ಮುಂದುವರಿಯುತ್ತೀರಿ. ನಿಮಗೆ ದಾಖಲು ಮಾಡಲು ನಮಗೆ ಅಸಹ್ಯವೆನಿಸುತ್ತಿದೆ. ನಿಮ್ಮ ಮನೆ ಸುಡುತ್ತೇವೆಂದು ಬೆದರಿಸಿದರು. ಆ ವಯಸ್ಸಿನಲ್ಲಿ ಅವರಿಗೂ ಹಮ್ಮೂ ಅಹಂಕಾರವೇನು ಕಡಿಮೆ ಇರಲಿಲ್ಲ. ಅವರ ಮಾತಿಗೆ ಹೆದರಲಿಲ್ಲ. ಬೆನ್ನಿಗೆ ಖಂಡ್ರೆಬಾಬಾರಿದ್ದಾರೆಂಬುದು ಅಲ್ಲದೆ ಎಲ್ಲಾ ದೊಡ್ಡ ದೊಡ್ಡ ಅಧಿಕಾರಿಗಳ ಹತ್ತಿರ ಗಂಡನಾದ ಸಿದ್ದಾರಡ್ಡಿಯವರ ಪ್ರಭಾವವಿದೆ ಎಂಬ ವಿಶ್ವಾಸದಿಂದ ಅವರಿಗೆ ಹೀಗೆ ಪ್ರತಿಉತ್ತರ ನೀಡುತ್ತಾರೆ. "ನಾನೇನು ಕಾಗದದ ಮನೆ ಕಟ್ಟಿಲ್ಲ. ನೀವು ಸುಡುವುದಕ್ಕೆ ತಾಕತ್ತಿದ್ದರೆ ಸುಟ್ಟುನೋಡಿ" ಅಂದರು. ಇವರ ಈ ಮಾತುಗಳೇ ಇವರ ಬದುಕಿಗೆ ಮುಳುವಾದವು. ಅನಂತರ ಆ ಮಾತಿನ ಅರಿವಾಯಿತ್ತು. ಮಾತಿಗಿಂತ ಮೌನಕ್ಕೆ ಹೆಚ್ಚು ಬೆಲೆಯೆಂಬದು ಗೊತ್ತಾಯಿತ್ತು. ಅದರೆ ಸಮಯ ಮೀರಿತ್ತು. ಅವರು ಸೋಲಬೇಕಾಗಿತ್ತು. ಸೋತು ಗೆದ್ದರೆ ಚೆನ್ನಾಗಿತ್ತು. ಆದರೆ ಗುರಮ್ಮನವರು ಗೆದ್ದು ಸೋಲುತ್ತಾರೆ. ಏನು ಮಾಡಬೇಕೆಂದು ಅರಿಯದಾದರು, ಯಾವುದು ಅತಿಯಾದರು ವಿಷವಾಗುತ್ತದೆಂಬ ವಿಚಾರಗಳು ಬೇಗ ತಿಳಿಯಲಿಲ್ಲ. ಅವರ ಮಾತುಗಳೇ ಅವರಿಗೆ ವೈರಿಗಳಾದವು.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗ ಮಚ್ಚಿ ಅಹುದಹುದೆನಬೇಕು

ನುಡಿಯೊಳಗಾಗಿ ನಡೆಯದಿದ್ದರೆ
ನಮ್ಮ ಕೂಡಲಸಂಗಮನೆಂತೊಲಿಯವನಯ್ಯ

ಎನ್ನುವಂತೆ ಇವರ ಮಾತು ಕಠೋರವಾದರೂ ಸತ್ಯದಿಂದ ಕೂಡಿರುತ್ತಿದ್ದವು. ಇದ್ದದ್ದು ಇದ್ದಂತೆ ಹೇಳುವ ಸ್ವಭಾವ ಅವರದು. ಅವರು ತಾವು ಏನೇ ತಪ್ಪು ಮಾಡಿದರೂ ಮುಚ್ಚಿಡುವುದಿಲ್ಲ. ಮನಬಿಚ್ಚಿ ಮಾತನಾಡುತ್ತಾರೆ.

ಎಸ್.ಎಮ್. ಕೃಷ್ಣರವರು ಮುಖ್ಯಮಂತ್ರಿಯಾದ ನಂತರ ೨೦೦೧ ಮಹಿಳಾ ಸಶಕ್ತೀಕರಣ ವರ್ಷಾವಾದರೆ ೨೦೦೦ ಮಾರ್ಚ್ ೮ರಂದು ತಜ್ಞರ ತಂಡವೊಂದನ್ನು ರಚಿಸಿ, ಅದಕ್ಕೆ ಇವರನ್ನು ಅಧ್ಯಕ್ಷರನ್ನಾಗಿ ಮಾಡಿ ಕರ್ನಾಟಕದ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿ ವರದಿ ಸಲ್ಲಿಸಲು ಮಹಿಳಾ ಅಭಿವೃದ್ಧಿ ಕ್ರಿಯಾ ಯೋಜನೆ ಅಂತ ಹೊಸ ಸಮಿತಿ ರಚಿಸಿ ಗುರಮ್ಮವರಿಗೆ ಜವಾಬ್ದಾರಿ ಕೊಟ್ಟಿದ್ದರು. ಅದಕ್ಕೆ ಬಹಳ ಕಷ್ಟಪಟ್ಟು ರಾಜ್ಯದ ತುಂಬಾ ಸಂಚರಿಸಿ ಸಮಿತಿಗೆ ವರದಿ ಸಲ್ಲಿಸಿದರು. ಆ ವರದಿಯ ಸಲಹೆಗಳು ಪ್ರಮುಖವಾಗಿದ್ದು ರಾಜ್ಯದೆಲ್ಲೆಡೆಯಿಂದ ಅನೇಕ ಹೊಗಳಿಕೆಯ ಪತ್ರಗಳು ಬಂದವು. ಗುರಮ್ಮ ಸಿದ್ದಾರಡ್ಡಿಯವರಿಗೆ ರಾಜ್ಯ ಸಚಿವರ ಸ್ಥಾನಮಾನ ನೀಡಿದ್ದು ಸಾಮಾನ್ಯ ವಿಷಯವಲ್ಲ. ಅದಕ್ಕವರು ಹೆಜ್ಜೆ ಹೆಜ್ಜೆಗೂ ಚನ್ನಬಸವ ಪಟ್ಟದ್ದೇವರನ್ನು ನೆನೆಸುತ್ತಾರೆ. ಕಲ್ಮಶವಿಲ್ಲದ ಸ್ವಾಮಿಜಿಯವರು, ರಾಜಕೀಯದ ಸೊಂಕು ಎಳ್ಳುಕಾಳಿನಷ್ಟೂ ಅವರಿಗೆ ಸುಳಿಯದಿರಲಿಲ್ಲ. ಅಪ್ಪಟಗುರು. ಅವರಂದಿದ್ದೆ ಆಯಿತು. ನನಗೆ ಸೇವೆ ಸಲ್ಲಿಸಲು ಅಪ್ಪ ಬಸವಣ್ಣನವರು ಬೀದರಿಗೆ ತಂದು ಇಲ್ಲಿನ ಜನರ ಆಶೀರ್ವಾದದಿಂದ ನಾನು ಅಳಿಲು ಸೇವೆ ಸಲ್ಲಿಸಿದೆ ಎನ್ನುತ್ತಾರೆ.

ಗುರಮ್ಮನವರು ಟಾಸ್ಕ್ ಫೋರ್ಸ್ ವತಿಯಿಂದ ಗುಲಬರ್ಗಾದಲ್ಲಿ ವಿಭಾಗ ಮಟ್ಟದ ಮಹಿಳಾ ಸಮಾವೇಶ ಮಾಡಿದಾಗ ಪೂರ್ಣಿಮಾ ಜಾರ್ಜ್‌ರನ್ನು ನಿರ್ದೇಶನ (ಎಂಕ್ಯರ) ಮಾಡಲು ಕರೆದೊಯ್ದಿದ್ದರು. ಶ್ರೀಮತಿ ಪದ್ಮಸೇಠರವರು

ಪೂರ್ಣಿಮಾರನ್ನು ಹೊಗಳುತ್ತ... ಈ ಹುಡುಗಿ ಮುಂದೆ ಅಂತರಾಷ್ಟ್ರೀಯ; ಮಟ್ಟದಲ್ಲಿ ಬೆಳೆಯುತ್ತಾಳೆಂದು ಹೇಳಿದರು. ಆ ಮಾತು ಸತ್ಯವಾಗಿ ಪರಿಣಮಿಸಿದೆ. ಪೂರ್ಣಿಮಾರವರು ಅಂದು ತಮ್ಮ ಮಗಳ ಹುಟ್ಟುಹಬ್ಬ ಆಚರಿಸುವುದನ್ನು ಬಿಟ್ಟು ನಮ್ಮ ಸಭೆಗೆ ಬಂದಿದ್ದರು. ಇಂತಹ ಹಲವು ಸಂದರ್ಭಗಳು ಕುಟುಂಬಕ್ಕಿಂತ ಸಮಾಜ ಮುಖ್ಯ ಎನ್ನುವುದನ್ನು ಸ್ಪಷ್ಟಪಡಿಸುತ್ತವೆ.

ಇವರು ಟಾಸ್ಕ್ ಫೋರ್ಸ್ ಅಧ್ಯಕ್ಷರಾಗಿದ್ದಾಗ "ಸರಾಯಿ ಇಲ್ಲದೆ ಸರಕಾರ ನಡೆಯುವುದಿಲ್ಲವೇ?" ಎಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದ ರಾಜಕಾರಣಿ ಮತ್ತು ಅಧಿಕಾರಿಗಳನ್ನು ಪ್ರಶ್ನಿಸಿದ್ದರು. ಮಹಿಳಾ ಶೋಷಣೆಗೆ ಕಾರಣವಾಗಿದ್ದ ಪ್ರಸಂಗಗಳನ್ನು ಖಂಡನೆ ಮಾಡಿರುವ ದಿಟ್ಟಮಹಿಳೆ ಇವರಾಗಿದ್ದಾರೆ. ನೀರಾ ತೆಗೆಯಲು ಸರಕಾರ ಅನುಮತಿ ನೀಡಿತ್ತು. ಸರಾಯಿ ಬದಲಾಗಿ ನೀರಾ ತೆಗೆಯಲು ಕೆಲವರು ಸಲಹೆ ನೀಡಿದ್ದರು. ನೀರಾ ಸ್ವಲ್ಪ ಹೊತ್ತಿಗೆ ಸರಾಯಿ


ನೀರಾ ಇಳಿಸಲು ಅನುಮತಿ: ತಕ್ಷಣ ಹಿಂದೆ ಪಡೆಯಲು ಆಗ್ರಹ

ಕನ್ನಡ ಪ್ರಭ 5-11-2001

ಆಗುತ್ತದೆ ಎಂದಿದ್ದರು. ಇಂಥ ಕಾರ್ಯಗಳಿಂದ ನಮ್ಮ ಯುವಕರು ದಾರಿ ತಪ್ಪುತ್ತಾರೆ. ಮಹಿಳೆಯರಿಗೆ ಸಂಸಾರ ಮಾಡುವುದೇ ಕಷ್ಟವಾಗುತ್ತದೆಂದು ಖಡಾ ಖಂಡಿತವಾಗಿ ಹೇಳಿದ್ದರು.

ಈ ಅಭಿಪ್ರಾಯ ಮಂಡಿಸಿದ್ದರಿಂದಲೇ ಗುರಮ್ಮನವರಿಗೆ ಯಶೋದಾ ದಾಸಪ್ಪ ಪ್ರಶಸ್ತಿ ಸಿಕ್ಕಿದ್ದು. ಯಶೋದಾ ದಾಸಪ್ಪನವರು ಕರ್ನಾಟಕ ರಾಜ್ಯದ ಮೊದಲನೆಯ ಮಹಿಳಾ ಮಂತ್ರಿ ಆಗಿದ್ದರು. ಅವರು ಸರಕಾರದಲ್ಲಿದ್ದಾಗ ಕುಡಿಯುವುದನ್ನು, ಮದ್ಯ ಮಾರಾಟ ನಿಲ್ಲಿಸಬೇಕೆಂದು ಒತ್ತಾಯ ಮಾಡಿದ್ದರು. ಅದು ಸಾಧ್ಯವಾಗದಿದ್ದಾಗ ತಮ್ಮ ಸಚಿವ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಿದ್ದರು. ನೀರಾ ಇಳಿಸಲು ಅನುಮತಿ ಕೊಟ್ಟ ಸರಕಾರದ ವಿರುದ್ಧ ಗುಡುಗಿದ್ದಕ್ಕೆ ಅವರ ಹೆಸರಿನ ಒಂದು ಪ್ರಶಸ್ತಿ ನನಗೆ ಸಿಕ್ಕಿತ್ತೆಂದು ಹೇಳುತ್ತಾರೆ.

ತಾನೊಂದು ವೇಳೆ ಟಾಸ್ಕ್ ಫೋರ್ಸ್ ಚೇರಮನ್ ಆಗಿದ್ದಿಲ್ಲವಾದರೆ ತಾವೊಬ್ಬ ಫೇಲಾಗುವುದರಲ್ಲಿ ಮಾದರಿ ಮಹಿಳೆ ಆಗುತ್ತಿದ್ದೆ. ಮುಂದೆ ಮಹಿಳೆಯರು ರಾಜಕೀಯಕ್ಕೆ ಬರಲು ಅಲ್ಲಗಳೆಯುತ್ತಿದ್ದರು ಅನ್ನುತ್ತಾರೆ. ಅವಕಾಶ ಮಾಡಿಕೊಟ್ಟ ಸೋನಿಯಾ ಗಾಂಧಿಯವರಿಗೆ, ಮಾರ್ಗರೇಟ ಆಳ್ವ ಅವರಿಗೆ ಕೃತಜ್ಞತಾ ನಮನಗಳನ್ನು ಸಲ್ಲಿಸುತ್ತಾರೆ.

ಸಿಹಿಕಹಿಗಳ ಅನುಭವವಿದ್ದಾಗಲೆ ಅದು ಜೀವನವಾಗುತ್ತದೆ. ಸಂಸಾರದಲ್ಲಿದ್ದು ಎಲ್ಲವನ್ನು ಗೆಲ್ಲುವುದು ಅಸಾಧ್ಯ. ಕೆಲವನ್ನು ಕಳೆದುಕೊಂಡರೂ ಸಹಿಸಿಕೊಂಡು ದೇವರ ಮೇಲೆ ಭರವಸೆ ಇಟ್ಟರೇ ಒಳ್ಳೆಯ ಗುರಿ ಮುಟ್ಟಲು ಸಾಧ್ಯವಾಗುತ್ತದೆ.

ಕೃತಜ್ಞತಾಭಾವನೆಯ ಇವರು ಮಾತು ಮಾತಿಗೂ ಅಪ್ಪ ಚೆನ್ನಬಸವ ಪಟ್ಟದ್ದೇವರನ್ನು ನೆನೆಯುವುದನ್ನು ನೋಡಿದರೆ ಇವರ ಬದುಕಿನಲಿ ಅಸೀಮವಾದ ಸಮರ್ಪಣ ಭಾವವಿದೆ ಎನಿಸುತ್ತಿದೆ.

ಸರ್ವಜ್ಞನ ವಚನಗಳೆಲ್ಲವನ್ನು ಅಭ್ಯಸಿಸಿದ ಶ್ರೀ ಭೀಮಣ್ಣ ಮಜ್ಜಗೆಯವರ ಸಲಹೆ ಸೂಚನೆಗಳನ್ನು ಬೆನ್ನಿಗಿಟ್ಟುಕೊಂಡು ಹೊರಟವರು. ಶ್ರೀ ಪ್ರಭುರಾವ ಕಂಬಳಿವಾಲೆಯವರು ಇವರ ಕನ್ನಡ ಸೇವೆಯನ್ನು ಕಂಡು ಹೊಗಳುತ್ತಿದ್ದರು. ಬೆನ್ನು ತಟ್ಟಿ ಭಾಷಣಗಳಿಗೆ ತಯಾರು ಮಾಡುತ್ತಿದ್ದರು. 'ರಾಜಕೀಯ ಗುರು' ಎಂದು ಬಾಬಾ ಅವರನ್ನು ಡಾ. ಭೀಮಣ್ಣ ಖಂಡ್ರೆಯವರನ್ನು ಗೌರವಿಸುತ್ತಿದ್ದರು. ಜನಪರ ಕಾಳಜಿಯುಳ್ಳ ಮಹನೀಯರ ಚತುರತೆ, ಸೇವಾಭಾವಗಳು ತಮಗೆ ದಾರಿದೀಪವಾಯಿತು ಎನ್ನುತ್ತಾರೆ.

ಮೊದಲನೆಯ ಗೆಳತಿ ಪ್ರೇಮಾ ವಿಶ್ವಕರ್ಮ, ಅತ್ಮೀಯ ಗೆಳತಿ ಶಾಂತ ಕೃಷ್ಣಮೂರ್ತಿ, ಹೊಕ್ರಣಾ ಗೌಡತಿ ಸುಶೀಲಮ್ಮ, ವಿಮಲಾಬಾಯಿ ಘುಲೆಕರ್, ರತ್ನ ಕುಶನೂರ, ಲೀಲಾವತಿ ಚಾಕೋತೆ, ಪುಣ್ಯವತಿ ವಿಸಾಜಿ, ಸುನೀತಾ ದಾಡಗೆ, ಭಾರತಿ ವಸ್ತ್ರದ, ಶಕುಂತಲಾ ಬೆಲ್ದಾಳೆ ಮುಂತಾದ ಗೆಳತಿಯರೊಂದಿಗೆ ಸ್ನೇಹಜೀವಿ ಆಗಿರುತ್ತಿದ್ದ ಗುರಮ್ಮನವರೊಬ್ಬ ಗಟ್ಟಿ ಕನ್ನಡಗಿತ್ತಿ. ಮಹತ್ವಾಕ್ಷಾಂಕ್ಷೆಯ ಮಹಿಳೆ. ತಮ್ಮ ಹೃದಯಕ್ಕಾದ ಗಾಯವನ್ನು ಸಹಿಸಿಕೊಂಡು, ವಿಷವನ್ನು ನುಂಗಿ, ಸಾರ್ಥಕ ಪ್ರಯತ್ನದ ಮೂಲಕ ಸಮಾಜದಲ್ಲಿ ಗುರುತಿಸಿಕೊಂಡವರು.

ಇವರ ದೇಹಕ್ಕೆ ವಯಸ್ಸಾಗಿದೆಯೇ ಹೊರತು ಮನಸ್ಸಿಗಲ್ಲ. ಇವರು ಯುವತಿಯಂತೆ ಉತ್ಸಾಹದಿಂದ ಬಾಳ್ವೆ ನಡೆಸುತ್ತಾರೆ. ಮಾನಸಿಕವಾಗಿ, ದೈಹಿಕವಾಗಿ ಲವಲವಿಕೆಯ ಚಟುವಟಿಕೆಗಳಿಂದ ಜೀವನ ಸಾಗಿಸುತ್ತಿದ್ದಾರೆ. ಇವರೊಬ್ಬ ಕಷ್ಟ ಜೀವಿಗಳು. ಆದರೂ ಬೇರೆಯವರ ಕಷ್ಟ ನಿವಾರಣೆಯ ನೆರವಿಗೆ ಹೋಗಲು ಹಂಬಲಿಸುತ್ತಾರೆ. ಸ್ತುತಿ ನಿಂದೆಗಳಿಗೆ ಕುಗ್ಗದ ಸ್ವಭಾವ ಇವರದ್ದಾಗಿದೆ. ಸ್ವಾಭಿಮಾನಿ, ಜವಾಬ್ದಾರಿಯುತ ಮಹಿಳೆಯಾಗಿರುವ ಇವರು ಮಹಿಳಾ ಸಮಾಜಕ್ಕೆ ಸ್ಫೂರ್ತಿಯಾಗಿದ್ದಾರೆ.

ರಾಜಕೀಯ ನಾಯಕತ್ವದ ಕೆಚ್ಚು ಅವರ ರಕ್ತದಲ್ಲಿಯೇ ಅಡಗಿದಂತೆ ತೋರುತ್ತದೆ. ೧೯೮೪ರಲ್ಲಿ ಅವರಲ್ಲಿ ಸುಪ್ತವಾಗಿದ್ದ ರಾಜಕೀಯ ಬೀಜವು ಮೊಳಕೆಯೊಡೆಯಿತು. ಅದಕ್ಕೆ ಸೂಕ್ತಭೂಮಿಕೆಯಾಗಿ ಕಾಂಗ್ರೇಸ್ ಪಕ್ಷವು ವೇದಿಕೆ ಕಲ್ಪಿಸಿತು. ಶ್ರೀ ಭೀಮಣ್ಣ ಖಂಡ್ರೆಯವರ ನೇತೃತ್ವದಲ್ಲಿ ಮೊದಲಿಗೆ ಅವರು ಪ್ರಾಥಮಿಕ ಸದಸ್ಯತ್ವ ಸ್ವೀಕರಿಸಿ, ತನ್ನ ಜೀವಮಾನದ ಕೊನೆಯವರೆಗೆ ದೇಶ ಸೇವೆ ಮಾಡುವ ನಿರ್ಧಾರ ತೆಗೆದುಕೊಂಡರು.

ಇಂದಿರಾ ಗಾಂಧಿ ಅವರ ತತ್ವ ಸಿದ್ಧಾಂತಗಳು ಇವರ ಮೇಲೆ ಪ್ರಭಾವ ಬೀರಿದವು. ಗರೀಬಿ ಹಟಾವೊ ನಂತಹ ಕಾರ್ಯಗಳಿಗೆ ಮೆಚ್ಚಿ ಕಾಂಗ್ರೇಸ್ ಪಕ್ಷ ಸೇರಿಕೊಂಡೆ ಎನ್ನುತ್ತಾರೆ ಗುರಮ್ಮ ಸಿದ್ದಾರೆಡ್ಡಿಯವರು. ಇಂದಿರಾ ಗಾಂಧಿ ಅವರ ಹತ್ಯೆಯಿಂದ ಮನನೊಂದು ಬೇಸರಗೊಂಡರು. ೧೯೮೬ರಲ್ಲಿ ಮಹಿಳಾ ಕಾಂಗ್ರೇಸ್‌ನ ಜಿಲ್ಲಾಧ್ಯಕ್ಷರಾಗಿ ೧೯೯೮ರ ವರೆಗೆ ಸೇವೆ ಸಲ್ಲಿಸಿದರು. ರಾಜ್ಯ ಕಾಂಗ್ರೆಸ್‌ನ ಮಹಿಳಾ ಕಾರ್ಯದರ್ಶಿಯಾಗಿ ಹೈದ್ರಾಬಾದ ಕರ್ನಾಟಕದ ಮಹಿಳಾ ಕಾಂಗ್ರೇಸ್ ಜವಾಬ್ದಾರಿ ಹೊತ್ತು, ನಂತರ ಮುಂದೆ ರಾಜ್ಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ೨೦೦೫ರಿಂದ ೨೦೧೬ರ ವರೆಗೆ AICC ಸದಸ್ಯರಾಗಿದ್ದರು. ಈಗ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಣಿ ಸದಸ್ಯರಾಗಿದ್ದಾರೆ.

ಕಾಂಗ್ರೇಸ್ ಪಕ್ಷ ಸೇರಿದ ನಂತರ ಕಪಾರ್ಟ್ ಸದಸ್ಯರಾಗಿ, ಕರಕುಶಲ ಅಭಿವೃದ್ಧಿ ನಿಗಮದ ಸದಸ್ಯರಾಗಿ, ಕಂಜ್ಯೂಮರ್ ಫೋರಮ್‌ನ ಸದಸ್ಯರಾಗಿ, ೧೯೯೧ರಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಸದಸ್ಯರಾಗಿ ೬ ವರ್ಷ ಸೇವೆ ಸಲ್ಲಿಸಿದರು. ಮಹಿಳಾ ಟಾಸ್ಕಫೋರ್ಸ್ ಅಧ್ಯಕ್ಷರಾಗಿ ೨೦೦೦ರ ಮಾರ್ಚ್ ೮ ರಿಂದ ೨೦೦೩ರ ಮಾರ್ಚ್‌ವರೆಗೆ ಸೇವೆ ಸಲ್ಲಿಸಿದ್ದಾರೆ.

ಈಗ ನಿಮಗೇನು ಕೆಲಸ. ನಿಮ್ಮ ಪಕ್ಷವೇ ನೆಲಕಚ್ಚಿದೆ ಎಂದು ಯಾರಾದರೂ ಟಿಂಗಲ್ ಮಾಡಿದರೆ, ಇರಲಿ ಬಿಡಿ. ಜನರು ಬದಲಾವಣೆ ಬಯಸುವುದು ಸಹಜ. ಬೇರೆಯವರಾದರೂ ಕೆಲಸ ಮಾಡಲಿ ನಮಗಂತೂ ನಮ್ಮ ಕೆಲಸದಲ್ಲಿ ತೃಪ್ತಿಯಿದೆ. ನಾವು ಸುದೀರ್ಘ ಅವಧಿಯವರೆಗೆ ಕೆಲಸ ಮಾಡಿದ್ದೇವೆ ಎನ್ನುತ್ತಾರೆ.

ಸಿದ್ದಾರೆಡ್ಡಿ ಫೌಂಡೇಶನ್

ಡಾ. ಸಿದ್ಧಾರೆಡ್ಡಿಯವರು ದೇಶದ ಯುವಕರು, ಹಳ್ಳಿ ಗ್ರಾಮೀಣ ಭಾಗದ ಮಕ್ಕಳು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು. ಜನಸಂಖ್ಯೆ ನಿಯಂತ್ರಣ ದಲ್ಲಿಡಬೇಕು. ಬಡವರು ಸ್ವಾವಲಂಬಿಯಾಗಿ ಬದುಕಬೇಕು ಇಂತಹ ಹತ್ತು ಹಲವು ಕನಸುಗಳನ್ನು ಹೊಂದಿದ್ದರು. ಅವರ ಕನಸು ನನಸು ಮಾಡುವ ಉದ್ದೇಶದಿಂದ ಮತ್ತು ಡಾ. ಎಸ್.ಎಸ್. ಸಿದ್ಧಾರೆಡ್ಡಿ ಅವರ ಸ್ಮರಣಾರ್ಥ ೨೦೧೪ರಲ್ಲಿ "ಡಾ. ಸಿದ್ದಾರೆಡ್ಡಿ ಫೌಂಡೇಶನ್" ಸ್ಥಾಪಿಸಲಾಯಿತು. ಅದರ ಗೌರವಾಧ್ಯಕ್ಷರಾಗಿ, ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿಯವರು ಅವಿಸ್ಮರಣೀಯ ಕಾರ್ಯ ಮಾಡುತ್ತಿದ್ದಾರೆ. ವಿಶೇಷವಾಗಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಉನ್ನತ ಶಿಕ್ಷಣದಲ್ಲಿ ಹೆಚ್ಚು ಅಂಕ ಗಳಿಸಿದ ಅತ್ಯಂತ ಕಡು ಬಡತನದ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡುತ್ತಿದ್ದಾರೆ. ಇದಕ್ಕೆಲ್ಲ ಮಕ್ಕಳಾದ ಡಾ. ವಿಕ್ರಮ ಸಿದ್ದಾರಡ್ಡಿಯವರ, ಡಾ. ರಾಜಶ್ರೀ ರೆಡ್ಡಿಯವರ ಸಹಕಾರವಿದೆಂದು ಹೇಳುತ್ತಾರೆ.

* ಪ್ರತಿ ವರ್ಷ ಇಬ್ಬರು ಮೇಡಿಕಲ್ ವಿದ್ಯಾಭ್ಯಾಸ ಮಾಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಶುಲ್ಕ ಭರಿಸುತ್ತಿದ್ದಾರೆ.

* ಸಿದ್ದಾರೆಡ್ಡಿ ಫೌಂಡೇಶನ್ ಹಾಗೂ ಪ್ರಜಾಪಿತಾ ಬ್ರಹ್ಮಕುಮಾರಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಮಹಿಳಾ ಆರೋಗ್ಯ ಶಿಬಿರಗಳು ನಡೆಸುತ್ತಾರೆ.

* ನಾಡಿನ ಹೆಸರಾಂತ ಮನೋವಿಜ್ಞಾನಿ ಡಾ. ಸಿ.ಆರ್. ಚಂದ್ರಶೇಖರ ಅವರನ್ನು ಕರೆಯಿಸಿ ಕಲಬುರಗಿ ಹಾಗೂ ಬೀದರಿನ ಮೇಡಿಕಲ್ ಕಾಲೇಜುಗಳಲ್ಲಿ ಮದ್ಯಪಾನ ನಿಷೇಧ ಕುರಿತು ಯುವಕರಿಗಾಗಿ ವಿಚಾರ ಸಂಕಿರಣಗಳನ್ನು ಹಾಗೂ ಹವ್ಯಾಸಿಗರಿಗೆ ಆಪ್ತ ಸಮಾಲೋಚನಾ ತರಬೇತಿಗಳನ್ನು ಆಯೋಜಿಸುತ್ತಾರೆ.

* ಡಾ. ಸಿದ್ಧಾರೆಡ್ಡಿಯವರು ಆರೋಗ್ಯ ಕ್ಷೇತ್ರದಲ್ಲಂತೂ ಮಹತ್ತರ ಹೆಜ್ಜೆ ಇರಿಸಿದ್ದರು. ಫೌಂಡೇಶನ್ ವತಿಯಿಂದ ಡಾ. ಸಿದ್ಧಾರೆಡ್ಡಿ ದೃಷ್ಟಿ ಕಣ್ಣಿನ ಆಸ್ಪತ್ರೆ ಪ್ರಾರಂಭಿಸಿ, ಸಹಸ್ರಾರು ಗ್ರಾಮೀಣ, ಬಡತನ ರೇಖೆಕ್ಕಿಂತ ಕೆಳಗಿರುವ ಅದೆಷ್ಟೋ ಜಗತ್ತು ನೋಡದ ಜೀವಿಗಳಿಗೆ ಸಂಚಾರಿ ವಾಹನದ ಮೂಲಕ ಉಚಿತ ತಪಾಸಣೆ ಹಾಗೂ ರಿಯಾಯತಿ ದರದಲ್ಲಿ ಯಶಸ್ವಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿ ಜಗದರ್ಶನ ತೋರುತ್ತಿದ್ದಾರೆ.

* ಅದೇ ರೀತಿ ವಿಶೇಷ ತಪಾಸಣೆ ಶಿಬಿರಗಳು, ಶಾಲಾ ಮಕ್ಕಳಿಗೆ ನೇತ್ರ ತಪಾಸಣೆ ಮತ್ತು ಶಿಬಿರಗಳು ಹಾಗೂ ಉಚಿತ ಕನ್ನಡಕಗಳ ವಿತರಣೆ ಸೇರಿದಂತೆ ಹತ್ತು ಹಲವು ಮಹತ್ತರ ಕಾರ್ಯಚಟುವಟಿಕೆಗಳನ್ನು ಮಾಡುವ ಮೂಲಕ ಸಮಾಜ ಸೇವೆಯಿಂದ ಹೆಸರು ಮಾಡುತ್ತಿದ್ದಾರೆ.

* ದ್ರೋಣ ಕಂಡುಹಿಡಿದ ಯುವವಿಜ್ಞಾನಿ ಪ್ರತಾಪನಿಗೆ ೨೦೧೯ರ ವಚನ ವಿಜಯೋತ್ಸವದಲ್ಲಿ ಸಿದ್ಧಾರೆಡ್ಡಿ ಫೌಂಡೇಶನ್ ವತಿಯಿಂದ ಸನ್ಮಾನಿಸಲಾಯಿತು.

೨೦೧೯-೨೦ನೇ ಸಾಲಿನಲ್ಲಿ ವಿಕಾಸ ಅಕಾಡೆಮಿ ಹಾಗೂ ಇನ್ನಿತರ ಸಂಘ ಸಂಸ್ಥೆಯ ಸಹಯೋಗದೊಂದಿಗೆ "ಶಿಕ್ಷಕರ ದಿನಾಚರಣೆ" ಆಚರಿಸಲಾಗಿತ್ತು. ಅದರಲ್ಲಿ ಡಾ. ಗುರುರಾಜ ಕರ್ಜಗಿ ಅವರು ಬೋಧಕರಿಗೆ ಉತ್ತೇಜನಕಾರಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಿಕ್ಷಕರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಸಿದ್ದಾರೆಡ್ಡಿಯವರ ಕನಸಿನಂತೆ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು.

ತಂದೆ ತಾಯಿಗಳ ನಂತರದ ಸ್ಥಾನ ಗುರುವಿಗೆ ಇರುತ್ತದೆ. ಏಕೆಂದರೆ ಅವರು ದೇಶದ ಭವಿಷ್ಯ ನಿರ್ಮಾತೃಗಳು. ಸಾಕ್ಷಾತ ಪರಬ್ರಹ್ಮನ ಸ್ವರೂಪಿಗಳೆಂದು ತಿಳಿದು ಗುರುಗಳಿಗೆ ಗೌರವ ಕೊಡುತ್ತಿದ್ದರು. ನಮ್ಮ ದೇಶದ ಪ್ರಥಮ ಪ್ರಜೆಯಾದ ರಾಷ್ಟ್ರಪತಿ ಕೂಡ ಗುರುವಿನ ಮಾರ್ಗದರ್ಶನದಿಂದಲೇ ತಯಾರಾದವರು. ಅದಕ್ಕೆ ಗುರುವಿಗೆ ಗೌರವ ಯಾವತ್ತು ಸಿಗಲೇಬೇಕೆಂಬ ವಿಚಾರವುಳ್ಳವರು. ನಮ್ಮನ್ನು ಅಜ್ಞಾನದಿಂದ ಸುಜ್ಞಾನದ ಕಡೆಗೆ, ಮೂಢನಂಬಿಕೆಯಿಂದ ವೈಚಾರಿಕತೆಯೆಡೆಗೆ ಕರೆದೊಯ್ಯುವವರು ಅವರೇ. ನಮಗೆ ಅನೇಕ ವಿಷಯಗಳನ್ನು ಕಲಿಸಿ ಸರ್ವಾಂಗೀಣ ಪ್ರಗತಿಗೆ ಕಾರಣೀಭೂತರಾದವರು. ಅಂಥವರಿಗೆ ಕೃತಜ್ಞತಾಭಾವ ಸೂಚಿಸುವುದು ನಮ್ಮ ಕರ್ತವ್ಯವೆಂದು ಗುರಮ್ಮನವರು ತಿಳಿದು ಈ ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಯಲ್ಲಿ ಪ್ರತಿಶತ ಫಲಿತಾಂಶ ಪಡೆದ ಸುಮಾರು ೫೩ ಶಾಲೆಯ ಮುಖ್ಯಗುರುಗಳಿಗೆ ಗೌರವ ಸನ್ಮಾನ ಮಾಡಿದರು.

ಸಿದ್ಧಾರೆಡ್ಡಿ ಫೌಂಡೇಶನ್ ವತಿಯಿಂದ ದಿನಾಂಕ ೨೦೧೯-೨೦ನೇ ಸಾಲಿನಲ್ಲಿ ಚಂದನ ದೂರದರ್ಶನ ಕೇಂದ್ರದಿಂದ ನಡೆಸಲಾಗುತ್ತಿರುವ "ಥಟ್ ಅಂತ ಹೇಳಿ" ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಯ ಸುಮಾರು ೫೪ ವಿದ್ಯಾರ್ಥಿಗಳು ಭಾಗವಹಿಸುವಂತೆ ಅವಕಾಶ ಮಾಡಿಕೊಟ್ಟಿರುವುದು ಮಹತ್ವದ ಸಂಗತಿಯಾಗಿದೆ. ಇದರಲ್ಲಿ ವಿಜೇತರಾದ ಮಕ್ಕಳಿಗೆ ೧೦,೦೦೦, ೭೦೦೦, ೫೦೦೦ ರೂಪಾಯಿಗಳನ್ನು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದವರಿಗೆ ಕೊಡಲಾಯಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ೫೪ ಜನ ವಿದ್ಯಾರ್ಥಿಗಳು ಮತ್ತು ಎಂಟು ಶಿಕ್ಷಕರ ಮೂರು ದಿವಸಗಳ ಖರ್ಚು-ವೆಚ್ಚ, ಊಟ ವಸತಿ ವ್ಯವಸ್ಥೆಯನ್ನು ಸ್ವತಃ ನಿಭಾಯಿಸಿದರು. ಈ ಕಾರ್ಯಕ್ರಮವು ಇತಿಹಾಸದ ಪುಟ ಸೇರುವಂತೆ ಮಾಡಿದ ಶ್ರೇಯಸ್ಸು ಸಿದ್ಧಾರೆಡ್ಡಿ ಫೌಂಡೇಶನ್ ಅಧ್ಯಕ್ಷರಾದ ಡಾ. ವಿಕ್ರಮ ಅವರಿಗೂ ಶ್ರೀಮತಿ ಗುರಮ್ಮನವರಿಗೂ ಹಾಗೂ ಸಕಲ ಸದಸ್ಯರೆಲ್ಲರಿಗೂ ಸಲ್ಲುತ್ತದೆ.


ಎಂದೂ ರೈಲು ಹತ್ತದ, ಅವಕಾಶವಂಚಿತ ಗ್ರಾಮೀಣ ಭಾಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರು. ಅದರಲ್ಲೂ ಬಹುತೇಕ ಸರಕಾರಿ ಶಾಲೆಯ ವಿದ್ಯಾರ್ಥಿಗಳೇ ಇದರಲ್ಲಿ ಭಾಗವಹಿಸಿದ್ದರು. ಅವರ ಜೀವನದಲ್ಲಿ ಇದೊಂದು ಮರೆಯಲಾಗದ ನೆನಪು. ರಾಜಧಾನಿ ಬೆಂಗಳೂರಿಗೆ ಬಂದು ಮೂರು ದಿವಸ ಕಳೆದ ಆ ದಿವಸಗಳು, ವೀಕ್ಷಿಸಿದ ಹಲವು ಪ್ರದೇಶಗಳು, ವಿವಿಧ ಶಾಲೆಯ ಗೆಳೆಯರೊಂದಿಗೆ ಕೂಡಿಕೊಂಡು ನಕ್ಕು ನಲಿದ ಆ ಕ್ಷಣಗಳು ಎಂದು ಮರೆಯಲು ಸಾಧ್ಯವಿಲ್ಲವೆನ್ನುತ್ತಾರೆ ಮಕ್ಕಳು.

ಇಂತಹ ಕಾರ್ಯಕ್ರಮಗಳು ನಾವು ಕೇವಲ ದೂರದರ್ಶನದಲ್ಲಿ ನೋಡುತ್ತಿದ್ದೇವು. ನಾವೇ ಸ್ವತಃ ಹಾಟ್‌ಸೀಟ್‌ನಲ್ಲಿ ಕುಳಿತು ಕಾರ್ಯಕ್ರಮ ಕೊಟ್ಟದ್ದು ತುಂಬಾ ಖುಷಿ ಕೊಟ್ಟಿತು ಎನ್ನುತ್ತಾರೆ. ಇದಕ್ಕೆ ಕಾರಣೀಕೃತರಾದ ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿಯವರಿಗೆ ತುಂಬುಹೃದಯದ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ಬೀದರಿನ ಮಕ್ಕಳ ಭಾಗವಹಿಸುವಿಕೆ ಕುರಿತು ಚಂದನ ವಾಹಿನಿಯ ನಿರ್ದೇಶಕಿ ನಿರ್ಮಲಾ ಎಲಿಗಾರ ತುಂಬಾ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ನಾವು ಸುಮಾರು ಸಾವಿರಗಟ್ಟಲೇ ಕಂತು (ಎಪಿಸೋಡ್)ಗಳು ಮಾಡಿದ್ದೇವು. ಆದರೆ ಬೀದರಿನ ಮಕ್ಕಳ ತಯಾರಿ, ಅವರು ಭಾಗವಹಿಸುವಿಕೆ ಅತ್ಯುತ್ತಮವಾಗಿತ್ತು. ಇದು ನಮ್ಮ ಕಾರ್ಯಕ್ರಮದಲ್ಲಿಯೇ ಎರಡನೇ ಉತ್ತಮ ಕಾರ್ಯಕ್ರಮವೆಂದು ಮನಸಾರೆ ಹೊಗಳಿದರು. ಇದೆಲ್ಲದ್ದಕ್ಕೂ ಕಾರಣೀಭೂತರಾದ ಶ್ರೀಮತಿ ಗುರಮ್ಮನವರಿಗೆ ಕೃತಜ್ಞತೆ ಸಲ್ಲಿಸಿದ ಕ್ಷಣಗಳು ಅವಿಸ್ಮರಣೀಯವಾಗಿವೆ.

ಸುಮಾರು ೧೩ ಕಂತುಗಳಲ್ಲಿ ಪ್ರಸಾರವಾದ ಕಾರ್ಯಕ್ರಮ "ಲಿಮಕಾ ಬುಕ್ ಆಫ್ ರಿಕಾರ್ಡ್"ನಲ್ಲಿ ದಾಖಲಾಗಿರುವುದು ಬೀದರ ಜಿಲ್ಲೆಗೆ ಹೆಮ್ಮೆಯ ವಿಷಯ. ಅಲ್ಲದೆ ಈ ಕಾರ್ಯಕ್ರಮ ಗಿನ್ನಿಸ್ ದಾಖಲೆಯಾಗುವತ್ತ ಹೊರಟಿರುವುದು ನಮ್ಮೆಲ್ಲರಿಗೂ ಅಭಿಮಾನದ ಸಂಗತಿಯಾಗಿದೆ. ಹೀಗೆ ಸಿದ್ಧಾರೆಡ್ಡಿನ ಫೌಂಡೇಶನ್

ಹಲವಾರು ವಿನೂತನ ಕಾರ್ಯಕ್ರಮ ಆಯೋಜನೆ ಮಾಡುವಲ್ಲಿ ತುಂಬಾ ಮುಂಚೂಣಿಯಲ್ಲಿದೆ.



ಕಾರ್ಯಕ್ರಮದಲ್ಲಿ ವಿಜೇತರಾದ ಮಕ್ಕಳೊಂದಿಗೆ ನಾ. ಸೋಮೇಶ್ವರ, ಶ್ರೀ ಹಿರೇಮಠ, ಗುರಮ್ಮ ಸಿದ್ಧಾರಡ್ಡಿ, ಪುಣ್ಯವತಿ ವಿಸಾಜಿ, ಸುನೀತಾ ದಾಡಗೆ, ಮಹಾದೇವ ಮಡಿವಾಳ ಇತರರು

ನೋವು ನಲಿವು:

೧೯೯೧-೯೨ನೇ ವರ್ಷದಲ್ಲಿ ಅವರ ಬದುಕಿನಲ್ಲಿ ದೊಡ್ಡ ಆಘಾತ ಸಂಭವಿಸಿತು. ಒಂದು ೧೯೯೧ರಲ್ಲಿ ರಾಜೀವ ಗಾಂಧಿಯವರ ಕೊಲೆಯಾಯಿತು. ದೇಶದ ಎಲ್ಲ ಭಾಗಗಳಲ್ಲಿ ಇದರ ಪರಿಣಾಮ ಕಂಡುಬಂದಿತು. ಅದರಲ್ಲೂ ದೇಶದ ಎಲ್ಲ ಅಭಿವೃದ್ಧಿ ಕೆಲಸ-ಕಾರ್ಯಗಳು ನಿಂತು ಹೋದವು. ಎರಡನೆಯದಾಗಿ ೧೯೯೨ ಫೆಬ್ರವರಿ ೧೪ರಂದು ಅವರ ೨೪ ವರ್ಷ ವಯಸ್ಸಿನ ಹಿರಿಯ ಮಗ ಆಕಸ್ಮಿಕ ನಿಧನ ಹೊಂದಿದ. ಇದರಿಂದ ಅವರು ಸಂಪೂರ್ಣವಾಗಿ ಜರ್ಜರಿತ ಗೊಂಡರು. ಮನಸ್ಸು ಚುರು ಚೂರಾಯಿತು. ಇವೆರಡೂ ನೋವಿನ ಘಟನೆಗಳು ಅವರ ವೈಯಕ್ತಿಕ ಜೀವನದಲ್ಲಿ ಬದಲಾವಣೆಯ ಘಟ್ಟಗಳಾಗಿ ಪರಿಣಮಿಸಿದವು.

ಹಿರಿಮಗನ ಮೇಲಿದ್ದ ಮಮಕಾರಗಳೆಲ್ಲ ಮಗಳು ಹಾಗೂ ಚಿಕ್ಕ ಮಗನ ಕಡೆಗೆ ಕೇಂದ್ರಿಕೃತಗೊಂಡವು. ಆನಂತರ ಅವರ ಜವಾಬ್ದಾರಿ ಕುಟುಂಬದ ಕಡೆಗೆ ಹೆಚ್ಚಿತು. ೧೯೯೮ ರವರೆಗೆ ಮನೆಯ ಬಗ್ಗೆ ಹೆಚ್ಚಿನ ಕಾಳಜಿ ಮತ್ತು ಮೊಮ್ಮಗನನ್ನು ಅಜ್ಜಿಯ ಸ್ಥಾನದಲ್ಲಿದ್ದು ನೋಡಿಕೊಳ್ಳಬೇಕಾಯಿತು. ಅಂತಹ ಕಷ್ಟಕಾಲದ ಅವಸ್ಥೆಯಲ್ಲಿಯೂ ಸಹ ನನ್ನ ಕಾಂಗ್ರೆಸ್ ಪಕ್ಷದ ಬಗ್ಗೆ ಹೆಚ್ಚಿನ ಒಲುವು ಮತ್ತು ಸಂಬಂಧ ಬಲವಾಗುತ್ತ ಹೋಯಿತು. ಅವರು ಸ್ವತಃ ಪಕ್ಷದ ನಿಯಮಗಳ ಪ್ರಾಮುಖ್ಯತೆಯನ್ನು ಮನಗಂಡು ಪ್ರತಿಯೊಬ್ಬ ಭಾರತೀಯ ಪ್ರಜೆಯನ್ನು ಸಶಕ್ತಗೊಳಿಸಲು ಪ್ರಯತ್ನಿಸಿದ್ದೇನೆ ಎನ್ನುತ್ತಾರೆ.

ಕಾಂಗ್ರೆಸ್ ಪಕ್ಷದ ಬಗೆಗಿರುವ ಸಕಾರಾತ್ಮಕ ವಿಚಾರಗಳು:

ಕಾಂಗ್ರೆಸ್ ಪಕ್ಷದ ಬಗ್ಗೆ ಇದ್ದ ಅವರ ನಂಬಿಕೆ, ಬದ್ಧತೆ ಮತ್ತು ಕಷ್ಟಪಟ್ಟು ಕೆಲಸ ಮಾಡುವ ದೃಢ ನಿಶ್ಚಯದಿಂದ ಕೆಲಸ ಮಾಡಲು ಶ್ರೀಮತಿ ಇಂದಿರಾಜೀ ಮತ್ತು ಶ್ರೀ ರಾಜೀವಜೀ ಅವರ ಕನಸನ್ನು ನನಸಾಗಿಸಲು ನಿಶ್ಚಯಸಿದ್ದರು.

ವರ್ಷಗಳು ಕಳೆದಂತೆ ಮಾಜಿ ಪ್ರಧಾನಿ ರಾಜೀವ ಗಾಂಧಿಜಿಂಯವರ ಪ್ರಯತ್ನಗಳು ಪರಿಣಾಮಕಾರಿಯಾಗಿ ಕಾಣಲಾರಂಭಿಸಿದ್ದವು. ೧೯೮೭ರಲ್ಲಿ ರಾಜೀವಜೀಯವರು ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಬದಲಾವಣೆ ಮಾಡಿದ್ದು, ಬಲಾಢ್ಯ ಶಕ್ತಿಯುತ ನಾಲ್ಕನೇ ಅಂಗವಾದ ಎಲೇಕ್ಟ್ರಾನಿಕ್ ಮಿಡಿಯಾ ಸೃಷ್ಟಿಸಿದಲ್ಲದೇ ಮುಂದೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಭರವಸೆಯನ್ನು ಮೂಡಿಸಿತು.

೧೯೯೯ರಲ್ಲಿ ಗುರಮ್ಮನವರನ್ನು ಈ ಭಾಗದ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಂತೆ ಮಾಡಿದಾಗ ನನ್ನ ಪ್ರಾರ್ಥನೆಗೆ ಉತ್ತರ ಸಿಕ್ಕಿತೆಂದು ತಿಳಿದುಕೊಂಡು ಆಗಿಂದಾಗಲೇ ಪಕ್ಷದ ಅಧಿಕಾರವನ್ನು ಮುಂಚೂಣಿಯಲ್ಲಿ ತರುವ ಕೆಲಸ ಪ್ರಾರಂಭಿಸಿದರು.

ಒಂದು ಸಣ್ಣ ಹಳ್ಳಿಯಿಂದ ಕಾಂಗ್ರೆಸ್ ಪಕ್ಷಕ್ಕೆ ಮಾಡಿದ ಪ್ರಯಾಣವು ನನಗೆ ತೃಪ್ತಿ ಮತ್ತು ಆನಂದವೂ ಕೊಟ್ಟಿದೆ. ನನಗೆ ಸೇವೆ ಸಲ್ಲಿಸಲು ಮಾರ್ಗದರ್ಶನ ಮಾಡಿದ ಕೇಂದ್ರ ಸಚಿವೆಯರಾದ, ಶ್ರೀಮತಿ ಮಾರ್ಗರೇಟ್ ಆಳ್ವ ಅವರಿಗೆ ಹಾಗೂ ನನಗೆ ಸಹಕರಿಸಿದ ಹೈದ್ರಾಬಾದ ಕರ್ನಾಟಕದ ಮತ್ತು ರಾಜ್ಯದ ಎಲ್ಲ ಕಾಂಗ್ರೆಸ್ ಪಕ್ಷದ ನಾಯಕರಿಗೂ ಹಾಗೂ ನಾಯಕಿಯರಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾರ್ಚ್ ೯, ೨೦೧೦ರಲ್ಲಿ ರಾಜ್ಯ ಸಭೆಯಲ್ಲಿ ಮಹಿಳೆಯರ ಮೀಸಲಾತಿ ಮಸೂದೆ ಪಾಸಾಗಿ ತದನಂತರ ಎನ್.ಡಿ.ಟಿ.ವಿ.ಯಲ್ಲಿ ಈ ಸುದ್ದಿ ಬಿತ್ತರಿಸಿದಾಗ, ಅತಿ ಸಂತೋಷದಿಂದ ಆನಂದಭಾಷ್ಪ ಉರುಳಿದವು.

ಈ ಐತಿಹಾಸಿಕ ಸಂದರ್ಭದಕ್ಕೆ ನನ್ನ ನಮನಗಳು ಎಂದು ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿ ಅವರು ಹೇಳುತ್ತಾರೆ.

೨೦೦೦ ಮಾರ್ಚ್ ೮ರಂದು ಕರ್ನಾಟಕ ರಾಜ್ಯ ಮಹಿಳಾ ಟಾಸ್ಕ್ ಫೋರ್ಸ್ ಅಧ್ಯಕ್ಷರಾಗಿ ನೇಮಕಗೊಂಡರು. ೨೦೦೦ ರಿಂದ ೨೦೦೩ ರ ವರೆಗೆ ರಾಜ್ಯ ಸಚಿವರ ಸ್ಥಾನಮಾನದಲ್ಲಿದ್ದರು. ಆಗ ವಿಜಯಪುರದ ಅಕ್ಕಮಹಾದೇವಿ ವಿಶ್ವವಿದ್ಯಾಲಯವು ನಮ್ಮ ಟಾಸ್ಕ್ ಫೋರ್ಸ್ ಸಲಹೆ ಮೇರೆಗೆ ಆಗಿದೆ ಎಂದು ಹರ್ಷದಿಂದ ತಿಳಿಸುತ್ತಾರೆ.

ಯಾವುದೇ ಕಾರ್ಯ ಮಾಡಲು ಜೀವನೋತ್ಸಾಹ ಮತ್ತು ಅಚಲ ನಿಷ್ಠೆ ಇರಬೇಕು. ಸದಾ ಪ್ರಯತ್ನಶೀಲರಾಗಿ ಶುದ್ಧತೆಯಿಂದ, ಬದ್ಧತೆಯಿಂದ ಕೆಲಸ ಮಾಡಬೇಕು. ಅಂದಾಗ ಮಾತ್ರ ಯಶಸ್ಸು ನಮ್ಮದಾಗುತ್ತದೆ. ನಾನು ನನ್ನವರಿಗಾಗಿ ಎನ್ನದೇ, ನಮ್ಮವರಿಗಾಗಿ ಎಂಬ ಭಾವ ಬಂದಾಗ ಮಾತ್ರ ಸೇವಾ ಭಾವನೆ ಬೆಳೆಯಲು ಸಾಧ್ಯ ಎನ್ನುತ್ತಾರೆ.

ಅವರ ತಾಯಿಯವರ ಸಂಕಲ್ಪದಂತೆ ರಾಜ್ಯ ಸಚಿವ ಸ್ಥಾನ ಮಾನ ದೊರೆತಾಗ ಸಂತೋಷದ ಜೊತೆ ದೊಡ್ಡ ಜವಾಬ್ದಾರಿಯೂ ಹೆಚ್ಚಿತು ಅನ್ನುತ್ತಾರೆ. ಟಾಸ್ಕ್‌ಫೋರ್ಸ್‌ನ ಸಲಹೆಗಳು ಒಂದೊಂದೇ ಬಳಕೆಯಲ್ಲಿ ಬಂದಾಗ ನನಗೆ ಅತ್ಯಂತ ಆನಂದ, ಖುಷಿಯಾಗುತ್ತಿದೆ ಎನ್ನುತ್ತಾರೆ. ದೇವರಲ್ಲಿ ಅಚಲ ನಂಬಿಕೆ ಹೊಂದಿದ ಇವರು ಸರ್ಕಾರದಲ್ಲಿ ಛಾಪು / ಪ್ರಭಾವ ಮೂಡಿಸಬೇಕಾದರೆ ನಮ್ಮ ಸಲಹೆಗಳು ಸರ್ಕಾರಕ್ಕೆ ಸರಿ ಎನಿಸಬೇಕಾದರೆ ದೇವರ ಕೃಪೆ ಬೇಕಾಗುತ್ತದೆ ಎನ್ನುತ್ತಾರೆ.

ನಂಬರು, ನೆಚ್ಚರು, ಬರಿದೆ ಕರೆವರು
ನಂಬಲರಿಯರೀ ಲೋಕದ ಮನುಜರು

ನಂಬಿ ಕರೆದಡೆ, ಓ ಎನ್ನನೇ ಶಿವನು?
ನಂಬದೆ, ನೆಚ್ಚದೆ, ಬರಿದೆ ಕರೆವರ
ಕೊಂಬ ಮೆಚ್ಚ ಕೂಗೆಂದ ಕೂಡಲಸಂಗಮದೇವ

ಎನ್ನುವರಂತೆ ದೇವರಲ್ಲಿ ನಂಬಿಕೆಯಿದ್ದರೆ, ಮಾಡುವ ಕಾರ್ಯದಲ್ಲಿ ನಿಷ್ಠೆ ಇದ್ದರೆ, ಭಕ್ತಿಯಿದ್ದರೆ ಎಲ್ಲಾ ಕೆಲಸಗಳು ಆಗುತ್ತವೆ. ಸಮಾಜದಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯಾಗಬೇಕಾದರೆ ನಮ್ಮ ನಡತೆ ಮತ್ತು ವ್ಯಕ್ತಿತ್ವ ಮುಖ್ಯವಾಗುತ್ತದೆ. ತಾಳ್ಮೆ, ಸಹನೆಗಳು ನಮ್ಮ ಮಿತ್ರರಾಗಬೇಕು. ಸಮಾಜ ಸೇವೆಯ ಸಂದರ್ಭದಲ್ಲಿ ಎಚ್ಚರಿಕೆ ಮತ್ತು ಜಾಣ್ಮೆಗಳು ಬಹುಮುಖ್ಯ ನಿಸ್ವಾರ್ಥದಿಂದ ದುಡಿಯಬೇಕಾಗುತ್ತದೆ ಎನ್ನುತ್ತಾರೆ.

* ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯುವರು ಟಾಸ್ಕ್‌ಫೋರ್ಸ್ ಅಧ್ಯಕ್ಷರಾಗಿದ್ದಾಗ ಬೀದರರನಿಂದ ಒಂದು ಬೇಡಿಕೆ ಬಂತು. ಪ್ರಜಾವಾಣಿ ವರದಿಗಾರರಾದ ಕಾಕಡೆಯವರು, ವಾರ್ತಾ–ಪ್ರಚಾರ ಇಲಾಖೆಯ ಬಿರಾದಾರ ಅವರು ಸಮಾಜಜೀವಿ ಪ್ರೊ. ಬಿ.ಆರ್. ಕೊಂಡಾ ರವರು, ಡಿ.ಸಿ.ಸಿ. ಬ್ಯಾಂಕಿನ ಅಂದಿನ ಮ್ಯಾನೇಜರ್ ಆದ ಶ್ರೀ ಬಿ.ಎಸ್. ಕುದುರೆಯವರು, ಕುಟುಂಬ ಕಲ್ಯಾಣ ಸಂಘದ ಶ್ರೀ ಶೇಖ್ ಮುಸ್ತಾಕ ಅಲಿಯವರು ಬಂದು ಸ್ತ್ರೀಶಕ್ತಿ ತರಬೇತಿ ನೀಡಲು ಡಿಸಿಸಿ ಬ್ಯಾಂಕಿಗೆ ತರಬೇತಿ ನೀಡಲು ಅವಕಾಶ ಕೊಡಿಸಿದರೆ ಮುಂದೆ ಸ್ತ್ರೀಯರಿಗೆ ನಾವು ಬ್ಯಾಂಕಿನಿಂದ ಸಾಲ ಕೊಡುತ್ತೇವೆ. ಸ್ವಯಂ ಉದ್ಯೋಗ ಮಾಡಿ ಸಬಲರಾಗುತ್ತಾರೆಂದು ಹೇಳಿದರು.

ಶ್ರೀಮತಿ ಸಿದ್ದಾರೆಡ್ಡಿಯವರು ಆಗಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಮೀರಾ ಸಕ್ಸೆನಾ ಇವರಿಗೆ ಮನಗಾಣಿಸಿದರು. ಫಲಶೃತಿಯಾಗಿ ಅವರು ಸ್ತ್ರಿಶಕ್ತಿ ತರಬೇತಿ, ಡಿಸಿಸಿ ಬ್ಯಾಂಕಿನಿಂದ ಪ್ರಾರಂಭಿಸಲು ಒಪ್ಪಿದರು. ಇದರಿಂದ ಇಂದು ಬೀದರ ಡಿಸಿಸಿ

ಬ್ಯಾಂಕಿನ ತರಬೇತಿ ಇಡೀ ದೇಶದಲ್ಲಿಯೇ ಪ್ರಪ್ರಥಮ ತರಬೇತಿ ಕೇಂದ್ರವಾಯಿತು. ಅಷ್ಟೇ ಅಲ್ಲ. ಹೊರ ದೇಶಗಳಿಂದ ಜನರು ಡಿ.ಸಿ.ಸಿ. ಬ್ಯಾಂಕಿಗೆ ಬಂದು ತರಬೇತಿ ಪಡೆಯುತ್ತಿದ್ದಾರೆ. ಈ ತರಬೇತಿಗೆ ವಿಶ್ವಮಾನ್ಯತೆ ಸಿಕ್ಕಿದ್ದು, ಅವರು ಹೆಮ್ಮೆಪಡುವ ವಿಷಯವೆಂದು ತಿಳಿಸುತ್ತಾರೆ.

* ಕಪಾರ್ಟ್ ಸಂಸ್ಥೆಯ ಸದಸ್ಯಳಾಗಿದ್ದಾಗ ಈ ಭಾಗದ ಜನರಿಗೆ ಅದರ ಉಪಯೋಗವಾಗಲೆಂದು ಅದರ ಒಂದು ಶಾಖೆಯನ್ನು ಹೈದ್ರಾಬಾದಿಗೆ ತಂದರು. ಆದರೆ ಈ ಭಾಗದವರು ಅದರ ಹೆಚ್ಚು ಲಾಭ ಪಡೆಯಲಿಲ್ಲ ಎನ್ನುತ್ತಾರೆ.

* ೨೦೦೨ ರಲ್ಲಿ ೧೩೩೦ ಅಂಗನವಾಡಿ ಸೂಪರ್‌ವೈಜರ್ ಪೋಸ್ಟ್ ಬಿಟ್ಟಿದವು. Nutrition ಹಾಗೂ Sociology ವಿಷಯ ಪರಿಣಿತರು ಅರ್ಜಿ ಸಲ್ಲಿಸಬೇಕೆಂದಾಗ ರೂರಲ್ ಹೋಮ್ ಸಾಯಿನ್ಸ್ ಆದ ಉತ್ತರ ಕರ್ನಾಟಕದ ಅನೇಕ ಮಹಿಳೆಯರಿಗೆ ಈ ಹುದ್ದೆ ಪಡೆಯಲು ಅವಕಾಶ ಸಿಕ್ಕಿತು.

* ೨೦೧೧ರಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಕಾರ್ಮಿಕ (ಲೇಬರ್) ಮಂತ್ರಿಗಳಾಗಿದ್ದಾಗ ಗುರಮ್ಮ ಅವರಿಗೆ ಸದಸ್ಯರನ್ನಾಗಿ ಮಾಡಿದರು. ಅವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಒಂದು ಸಭೆ ನಡೆಯಿತು. ಆ ಸಭೆಯಲ್ಲಿ ಭಾರತ ದೇಶದ ಅನೇಕ ಮಹಿಳೆಯರು ಸೇರಿ ಪುರುಷ ಮತ್ತು ಸ್ತ್ರೀಯರಿಗೆ ಪ್ರಧಾನಮಂತ್ರಿ, ರೋಜಗಾರ್ ಯೋಜನೆಯಲ್ಲಿ ಕೂಲಿ (ಲೇಬರ್ ಚಾರ್ಜ್) ಸಮಾನತೆ ತಂದ ಹೆಮ್ಮೆ ಇವರಿಗಿದೆ.

* ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ನಿರ್ದೇಶಕರಾಗಿ ಅನೇಕ ಮಹಿಳೆಯರಿಗೆ ಸಾಲ ಸೌಲಭ್ಯ ಒದಗಿಸಿ, ಅವರು ಕರಕುಶಲತೆಯಲ್ಲಿ ಆರ್ಥಿಕವಾಗಿ ಬೆಳೆಯಲು ಪ್ರೋತ್ಸಾಹಿಸಿದ ಹೆಮ್ಮೆ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರಿಗಿದೆ.

* ಇವರೊಬ್ಬ ನಿಷ್ಠಾವಂತ ಕಾಂಗ್ರೇಸ್ ಕಾರ್ಯಕರ್ತೆಯಾಗಿದ್ದರಿಂದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎನ್. ಧರಂ ಸಿಂಗ್ ರವರು ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಏನೇ ಕೆಲಸ ತೆಗೆದುಕೊಂಡು ಹೋದರೂ ಬೇಸರಪಡುತ್ತಿರಲಿಲ್ಲ. ಬೀದರ ಸಿ.ಡಿ.ಪಿ. (ಸಿಟಿ ಡೆವಲಪ್‌ಮೆಂಟ್ ಪ್ಲಾನಿಂಗ್) ಮಾಡಿಸಿಕೊಟ್ಟ ಶ್ರೇಯ ಧರಂಸಿಂಗ್ ರವರಿಗೆ ಸಲ್ಲುವುದು. ಹಾಗೂ ಜಿಲ್ಲಾ ಉಸ್ತುವಾರಿ ಮಾಜಿ ಸಚಿವರಾಗಿದ್ದ ಈಶ್ವರ ಖಂಡ್ರೆಯವರಿಗೆ ಸಲ್ಲುತ್ತದೆ. ಈ ರೀತಿಯ ಸಮಾಜೋಪಯೋಗಿ ಕಾರ್ಯದಲ್ಲಿ ಸಂತೋಷ ಪಡುತ್ತಾರೆ. ಇದಕ್ಕೆಲ್ಲಾ ತಮ್ಮ ಪತಿಯವರಾದ ಡಾ. ಸಿದ್ದಾರೆಡ್ಡಿ ಪ್ರೋತ್ಸಾಹವೇ ಕಾರಣವೆಂದು ಹೆಜ್ಜೆ ಹೆಜ್ಜೆಗೂ ಸ್ಮರಿಸುತ್ತಾರೆ.

* ಬೀದರ ಸಿಟಿ ಡೆವಲಪ್‌ಮೆಂಟ್ ಆಗುವಲ್ಲಿ ಇವರ ಸತತ ಪ್ರಯತ್ನವಿದೆ. ಇದರಿಂದ ಬಡವರು ಸಹಿತ ಕಡಿಮೆ ಬೆಲೆಯಲ್ಲಿ ನಿವೇಶನಗಳನ್ನು ಪಡೆಯಲು ಅನುಕೂಲವಾಗಿದೆ.

* ಇಷ್ಟೆಲ್ಲಾ ಬಿಡುವಿಲ್ಲದ ಕೆಲಸದ ಒತ್ತಡಗಳ ಮಧ್ಯೆಯೂ ಸಂಬಂಧಗಳಿಗೆ ಸಮಯಕೊಡುವ ಸಮಯದಾನಿಗಳು. ಮದುವೆಗಿಂತ ಮುಂಚೆ ಬರಿ ಎಸ್.ಎಸ್.ಎಲ್.ಸಿ. ವರೆಗೆ ಶಿಕ್ಷಣ ಪಡೆದ ಗುರಮ್ಮ ತಾಯಿಯವರು ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣ ಪಡೆಯುವಂತೆ ಮಾಡುವಲ್ಲಿ ಅವರ ಪತಿಯ ಪ್ರೋತ್ಸಾಹ ಅಗತ್ಯ. ಇವರಿಗೆ ಒಬ್ಬ ಮಗ ಡಾ. ವಿಕ್ರಮ ಸಿದ್ಧಾರೆಡ್ಡಿ, ಎಂ.ಎಸ್. ಕಲಬುರಗಿಯಲ್ಲಿ ಯುನೈಟೆಡ್ ಆಸ್ಪತ್ರೆಯನ್ನು ನಡೆಸುತ್ತಿದ್ದಾರೆ. ಇವರ ಪತ್ನಿ ಶ್ರೀಮತಿ ವೀಣಾ ಸಿದ್ದಾರೆಡ್ಡಿಯವರು ನೇತ್ರತಜ್ಞರಾಗಿದ್ದಾರೆ. ಇವರ ಮಗಳು ಡಾ. ರಾಜಶ್ರೀ ರೆಡ್ಡಿ ಅಳಿಯ ಡಾ. ವಿಶ್ವನಾಥರೆಡ್ಡಿ ಇವರು ನೇತ್ರತಜ್ಞರಾಗಿ ಕಲಬುರಗಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಕಣ್ಣಿನ ಆಸ್ಪತ್ರೆ ತೆಗೆದು, ಜನರ ಸೇವೆ ಮಾಡುತ್ತಿದ್ದಾರೆ.

ನೊಂದವರ ಆಶಾಕಿರಣ

ಗುರಮ್ಮ ಸಿದ್ಧಾರೆಡ್ಡಿಯವರು ನಡೆಸುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳಕ್ಕೊಮ್ಮೆ ಭೇಟಿ ನೀಡಿದೆ. ಅಲ್ಲಿದ್ದ ಅನೇಕ ಮಹಿಳೆಯರು, ಯುವತಿಯರು ತಮ್ಮ ಮನದಾಳದ ಮಾತುಗಳನ್ನು ನನ್ನೊಂದಿಗೆ ಹಂಚಿಕೊಂಡರು.

ನಾನು ನಂದಿನಿ, ೧೬ ವರ್ಷ. ನಾನು ಸಂಸಾರ, ಜೀವನದ ಯಾವ ಗಾಳಿ ಗಂಧಗೊತ್ತಿರದ ಒಬ್ಬ ಹುಡುಗನನ್ನು ಪ್ರೀತಿಸಿದೆ. ಮದುವೆಯಾಗಲು ಮುಂದಾದೆ. ನಮ್ಮ ತಂದೆ ತಾಯಿಯರಿಗೆ ಅದು ಇಷ್ಟವಿರಲಿಲ್ಲ. ಅದು ಬಾಲ್ಯವಿವಾಹವೆಂದು ಕೇಸು ಮಾಡಿಸಿದರು. ನನ್ನನ್ನು ಪ್ರೀತಿಸಿದ ಹುಡುಗನಿಂದ ದೂರ ಮಾಡಿ ನನಗೆ ಕಿತ್ತೂರು ರಾಣಿ ಮಹಿಳಾ ಮಂಡಳಕ್ಕೆ ತಂದು ಬಿಟ್ಟರು. ಇಲ್ಲಿಗೆ ಬಂದಾಗ ನನಗಾರ ಪರಿಚಯವಿರಲಿಲ್ಲ. ನೋವಿನಿಂದ ಕುಗ್ಗಿದ ನಾನು ಇನ್ನೊಬ್ಬರೊಂದಿಗೆ ಬೆರೆಯಲು ಮನಸ್ಸು ಮಾಡಲಿಲ್ಲ. ಯಾವುದೋ ಗೂಡಿನಲ್ಲಿ ಸಿಕ್ಕಿಕೊಂಡಂತೆ ಒದ್ದಾಡಿದೆ. ದಿನಕಳೆದಂತೆ ಇಲ್ಲಿಯ ವಾತಾವರಣ ಹಿಡಿಸಿತು. ಇಲ್ಲಿ ಕಲಿಸಿಕೊಡುವ ತರಬೇತಿಗಳಿಗೆ ಹೊಂದಿಕೊಂಡೆನು. ಹೊಲಿಗೆ ತರಬೇತಿ, ಅಡಿಗೆ ತಯಾರಿಸುವುದು, ವಯಕ್ತಿಕ ಸ್ವಚ್ಛತೆ, ಇನ್ನೊಬ್ಬರೊಂದಿಗೆ ಬೆರೆಯುವ ಕಲೆ, ಪೆಂಟಿಂಗ್ ಎಲ್ಲವೂ ತುಂಬಾ ಚೆನ್ನಾಗಿ ಕಲಿಸಿಕೊಟ್ಟರು. ನನಗೆ ಬದುಕುವ ಕಲೆ ಕಲಿಸಿಕೊಟ್ಟ ಶ್ರೇಯಸ್ಸು ಶ್ರೀಮತಿ ಗುರಮ್ಮಾ ತಾಯಿಯವರಿಗೆ ಸಲ್ಲುತ್ತದೆ.

ನಾವು ತಪ್ಪು ಮಾಡಿ ಇಲ್ಲಿ ಬಂದಿದ್ದರೂ ನಮ್ಮ ತಪ್ಪನ್ನು ಯಾರ ಮುಂದೆಯು ಹೇಳದೆ ನಮ್ಮ ಮಹಿಳಾ ಮಂಡಳದ ಹುಡುಗಿಯರೆಂದು ಬಂದವರಿಗೆ ಪರಿಚಯಿಸುತ್ತಾರೆ. ಅವರ ಈ ಗುಣ ನನಗೆ ತುಂಬಾ ಹಿಡಿಸುತ್ತದೆ. ನಾನು ಬಂದ ದಿವಸ ಅಮ್ಮ ನನಗೆ ನೂರು ರೂಪಾಯಿ ಕೊಟ್ಟು ಸಾಬೂನು, ಕೊಬ್ಬರಿ ಎಣ್ಣೆ, ಅಗತ್ಯ ವಸ್ತುಗಳು ತರಿಸಿಕೊಟ್ಟರು. ಅವರಿಗೆ ತುಂಬಾ ಕೃತಜ್ಞಳಾಗಿದ್ದೇನೆ. ಏಕೆಂದರೆ ನನಗೆ ಬದುಕುವ ದಾರಿಯನ್ನು ಕಲಿಸಿಕೊಟ್ಟರು. ಇನ್ನು ನಾನು ಆರ್ಥಿಕ ಸ್ವಾವಲಂಬಿಯಾಗಿ ನನ್ನ ಕಾಲಮೇಲೆ ನಾನು ನಿಲ್ಲಬಲ್ಲೆ ಅಮ್ಮಾ. ತುಂಬಾ ತುಂಬಾ ಥ್ಯಾಂಕ್ಸ್.

ಮಹಿಳಾ ಮಂಡಳದ ಇನ್ನೊಬ್ಬ ಪೋಸ್ಕೊ ಕಾಯಿದೆ ಅಡಿಯಲ್ಲಿ ಬಂದಿರುವ ಯುವತಿಯನ್ನು ಮಾತನಾಡಿಸಿದಾಗ– "ನಾನು ಜಯಸುಂದರಿ. ನನಗೆ ಬಾಲ್ಯವಿವಾಹವೆಂದರೇನೂ ಗೊತ್ತಿರಲಿಲ್ಲ. ಮದುವೆಯೆಂದರೇನು ಎಂಬುದು ಸರಿಯಾಗಿ ತಿಳಿದುಕೊಳ್ಳದೆ ಸಿನಿಮಾದವರಂತೆ ನಾನು ಒಬ್ಬ ಹುಡುಗನನ್ನು ಪ್ರೀತಿಸಿ ಬೆಂಗಳೂರಿಗೆ ಓಡಿಹೋದೆ. ಆವಾಗಿನ್ನೂ ನನಗೆ ೧೫ ವರ್ಷ. ಇದನ್ನು ತಿಳಿದ ನಮ್ಮ ಮನೆಯವರು ನಾ ಪ್ರೀತಿಸಿದ ಹುಡುಗನ ಮೇಲೆ ಪೋಸ್ಕೊ ಕಾಯ್ದಡಿ ಕೇಸ ಮಾಡಿ ಜೈಲಿಗೆ ಹಾಕಿದರು. ನನ್ನನ್ನು ಕಿತ್ತೂರುರಾಣಿ ಚೆನ್ನಮ್ಮ ಮಹಿಳಾ ಮಂಡಳಕ್ಕೆ ತಂದುಬಿಟ್ಟರು. ನನಗೆ ಏನೂ ತಿಳಿಯದಾಯಿತು. ಅಳುವುದೊಂದೆ ದಾರಿಯಾಗಿತ್ತು. ಇಲ್ಲಿ ಎಲ್ಲರೂ ಅಪರಿಚಯಸ್ಥರೆ. ಹೇಗೋ ನಾಲ್ಕೈದು ದಿವಸ ಕಳೆದ ಮೇಲೆ ನಿಧಾನವಾಗಿ ಆ ವಾತಾವರಣಕ್ಕೆ ಹೊಂದಿಕೊಂಡೆ. ಎಲ್ಲರೂ ನನಗೆ ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇಲ್ಲಿಗೆ ಬರುವ ಮುನ್ನ ನನ್ನ ಗೆಳೆಯನ ಪ್ರೀತಿ ಮುಂದೆ ನನಗ್ಯಾರ ಪ್ರೀತಿಯೂ ಬೇಕಾಗಿರಲಿಲ್ಲ. ಅಷ್ಟೊಂದು ಅವನನ್ನು ನಂಬಿಕೊಂಡಿದ್ದೆ. ಇಲ್ಲಿಗೆ ಬಂದ ಮೇಲೆ ಅವನ ಪ್ರೀತಿ, ಸಂಸಾರದ ಜಂಜಾಟ ಗೌಣವಾಯಿತು. ನನ್ನ ವರ್ತನೆಗಳನ್ನು ಕೇಳಿ ತಿಳಿದ ಅಮ್ಮಾ ಅವರು ಅನೇಕ ಸಲ ಮಹಿಳಾ ಮಂಡಳಕ್ಕೆ ಬಂದು ನಮಗೆ ಬುದ್ದಿವಾದ

ಹೇಳುತ್ತಿದ್ದರು. ನಮ್ಮ ತಪ್ಪುಗಳನ್ನು ತಿದ್ದಿ ಸರಿದಾರಿಗೆ ತರುತ್ತಿದ್ದಗು ಅವರು ನಮ್ಮ ಪಾಲಿನ ಪ್ರತ್ಯಕ್ಷ ದೇವತೆಯವರು. ಏಕೆಂದರೆ ಯಾರಾದರೂ ಹೊಸಬರು ಇಲ್ಲಿಗೆ ಬಂದರೆ ಅವರೆಲ್ಲಾ ನಮ್ಮ ಹುಡುಗಿಯರು, ಬಟ್ಟೆ ಚೆನ್ನಾಗಿ ಹೋಲಿತಾರೆಂದು ನಮ್ಮ ವರ್ಣನೆ ಮಾಡುತ್ತಾರೆಯೇ ಹೊರತು ಫೋಸ್ಕೋ ಕೇಸಿನಿಂದ ಇಲ್ಲಿಗೆ ಬಂದವರೆಂದು ಯಾರೊಬ್ಬರಿಗೂ ಗೊತ್ತು ಮಾಡಿಸುವುದಿಲ್ಲ. ಯಾರೊಬ್ಬರ ವೈಯಕ್ತಿಕ ಮಾಹಿತಿಗಳನ್ನು, ಇಲ್ಲಿಗೆ ಬಂದ ಕಾರಣಗಳನ್ನು ಹೇಳುವುದಿಲ್ಲ. ಇದು ಅವರ ಬಹುದೊಡ್ಡ ಗುಣವಾಗಿದೆ. ನಮ್ಮನ್ನೆಲ್ಲ ಮನೆ ಮಕ್ಕಳಂತೆ ನೋಡಿಕೊಳ್ಳುತ್ತಾರೆ.

ಹಬ್ಬ-ಹರಿದಿನಗಳಿಗೆ ಸಿಹಿತಿಂಡಿ ಮಾಡಿಸುತ್ತಾರೆ. ಇಲ್ಲಿ ಬಂದ ಮೇಲೆ ನಾನು ಹೊಲಿಗೆ ಕಲಿತುಕೊಂಡಿದ್ದೇನೆ. ಅಡಿಗೆ ಮಾಡುವುದನ್ನು ಪುಷ್ಪಾ ಅಂಟಿ ಕಲಿಸಿದ್ದಾರೆ. ಇನ್ನೊಬ್ಬರ ಜೊತೆ ಹೇಗೆ ಮಾತನಾಡಬೇಕೆಂಬುದು ನಾನು ತಿಳಿದುಕೊಂಡಿದ್ದೇನೆ. ನಮಗೇನೂ ಕೊರತೆಯಾಗದಂತೆ ಅಮ್ಮಾ ನೋಡಿಕೊಳ್ಳುತ್ತಾರೆ. ಅವರು ನಮ್ಮ ಎರಡನೇ ತಾಯಿ, ನಮ್ಮ ಕಣ್ಣು ತೆರೆಸಿದವರು. ನಾನಿಲ್ಲಿದ್ದು ೧೭ ತಿಂಗಳುಗಳಾದವು. ನಾನೇನು ಇನ್ನು ಕೆಲವೇ ತಿಂಗಳುಗಳಲ್ಲಿ ಇಲ್ಲಿಂದ ಹೋಗುತ್ತೇನೆ. ಆದರೆ ನಾನೀಗ ಮೊದಲಿನ ಜಯಸುಂದರಿ ಅಲ್ಲ. ತುಂಬಾ ಧೈರ್ಯ ಬಂದಿದೆ. ಸಮಾಜದಲ್ಲಿ ಹೇಗೆ ಬದುಕಬೇಕೆಂಬ ರೀತಿ ರಿವಾಜುಗಳನ್ನು ತಿಳಿದುಕೊಂಡಿದ್ದೇನೆ. ಇದನ್ನೆಲ್ಲ ಕಲಿಸಿದ ಅಮ್ಮಾನವರಿಗೆ ನನ್ನ ಕೋಟಿ ಕೋಟಿ ನಮಸ್ಕಾರಗಳು" ಎಂದು ಭಾವಪೂರ್ಣವಾಗಿ ನಿವೇದಿಸಿ ಕೊಳ್ಳುತ್ತಾರೆ.

ಹೀಗೆ ಮಹಿಳಾ ಮಂಡಳದಲ್ಲಿ ಫೋಸ್ಕೋ ಕಾಯ್ದೆಯಡಿಯಲ್ಲಿ ಬಂದವರು, ಅತ್ಯಾಚಾರಕ್ಕೊಳಗಾದ ಹುಡುಗಿಯರು ತಮ್ಮ ಬದುಕು ಕಟ್ಟಿಕೊಳ್ಳುವ ಕೌಶಲ್ಯಗಳನ್ನು ಕಲಿತಿದ್ದಾರೆ. ಆರ್ಥಿಕ ಸಂಪಾದನೆಗೆ ಸ್ವಯಂ ಉದ್ಯೋಗ ತರಬೇತಿಗಳನ್ನು ಪಡೆದಿದ್ದಾರೆ. ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ.

ವಿಲಾಸವತಿ ಎಂಬ ಬಡ ಹುಡುಗಿಗೆ ತನ್ನ ಹಳ್ಳಿಯಿಂದ ಬೀದರಿಗೆ ಬಂದು ಓದುವುದು ಕಷ್ಟವಾಗಿತ್ತು. ಅವಳಿಗೆ ಹಾಸ್ಟಲ್ ವ್ಯವಸ್ಥೆ ಮಾಡಿಸಿದಕ್ಕೆ ಆಕೆಯಿಂದು ಬಿ.ಎ. ಮುಗಿಸಿ ಎಂ.ಎ. ಮಾಡಿಕೊಳ್ಳುತ್ತ ಬಟ್ಟೆ ಹೋಲಿಗೆಯನ್ನು ಕಲಿತುಕೊಂಡಿದ್ದಾಳೆ. ಆಕೆ ಹೇಳುವಂತೆ– ಅಮ್ಮ ನನ್ನ ಬದುಕನ್ನು ರೂಪಿಸಿಕೊಟ್ಟು ದಾರಿ ಮಾಡಿಕೊಟ್ಟ ದೇವರೆಂದು ಆರಾಧಿಸುತ್ತಾಳೆ.

೨೬ ವರ್ಷದ ಜಯಶ್ರೀ ಬೀದರ ಎಂಬ ಹುಡುಗಿ ತುಂಬಾ ಬಡಕುಟುಂಬದವಳು. ಕಿತ್ತೂರು ರಾಣಿ ಚನ್ನಮ್ಮ ಮಹಿಳಾ ಮಂಡಳದ ಬಗ್ಗೆ ಕೇಳಿ ಇಲ್ಲಿಗೆ ಬಂದು ಆಶ್ರಯ ಪಡೆದಿರುವಳು. ಸಹವರ್ತಿ ಮಹಿಳೆಯರ ಜೊತೆ ಉಳಿದು ವಿದ್ಯಾಭ್ಯಾಸ ಮಾಡಿಕೊಂಡಿರುವಳು. ಅವಳ ಅಭಿಪ್ರಾಯದಂತೆ– "ಅಮ್ಮ ನಮಗೆ ತುಂಬಾ ಪ್ರೋತ್ಸಾಹ ಸಹಾಯ ನೀಡಿದ್ದರಿಂದ ಬಿ.ಎ. ಬಿ.ಎಡ್. ಓದಿಕೊಂಡೆ. ಈ ಸಂಸ್ಥೆಯಲ್ಲಿ ಉಳಿದುಕೊಂಡಿದ್ದರಿಂದ ನನಗೆ ತುಂಬಾ ಸಹಾಯವಾಯಿತು. ಸಮಾಜ ಸೇವಾ ಮನೋಭಾವ ಬೆಳೆಯಲು ಇಲ್ಲಿಯ ವಾತಾವರಣ ನನಗೆ ಸಹಾಯ ಮಾಡಿತು. ಇದಕ್ಕೆ ಕಾರಣ ಸಂಸ್ಥೆಯ ಅಧ್ಯಕ್ಷರಾದ ಗುರಮ್ಮ ಸಿದ್ದಾರೆಡ್ಡಿಯವರು. ನನ್ನ ಸೇವಾ ಮನೋಭಾವ ಕಾರ್ಯವನ್ನು ಪರಿಗಣಿಸಿ ನನಗೆ ನವದೆಹಲಿಯಲ್ಲಿ ಸಾವಿತ್ರಿಬಾಯಿ ಘುಲೆ ಹೆಸರಿನ ನ್ಯಾಷನಲ್ ಅವಾರ್ಡ ದೊರೆಯಿತು.

ಈ ಪ್ರಶಸ್ತಿ ನನ್ನ ಕಾರ್ಯಕ್ಕೆ ಇನ್ನಷ್ಟು ಸ್ಫೂರ್ತಿ ನೀಡಿತು. ನನ್ನಲ್ಲಿ ಧೈರ್ಯ, ಆತ್ಮಸ್ಥೈರ್ಯ ಬೆಳೆಯಿತು. ನನ್ನಂಥ ಅನೇಕ ಅಸಹಾಯಕ ಮಹಿಳೆಯರಿಗೆ ಸಲಹೆ ನೀಡುವ, ಸಮಾಧಾನ ಕೊಡುವ ಸಾಮರ್ಥ್ಯ ಬಂದಿದೆ. ಇದಕ್ಕೆಲ್ಲಾ ಕಾರಣ ಅಮ್ಮನವರೇ ಆಗಿದ್ದಾರೆ. ಅಮ್ಮ ನನ್ನ ಆರಾಧ್ಯದೇವರೆನ್ನುತ್ತಾಳೆ. ಈಗ ನಾನು ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಯುವಸ್ಪಂದನ ಆಫೀಸಿನಲ್ಲಿ ಯುವ ಪ್ರವರ್ತಕಿಯಾಗಿ ಕಾರ್ಯ ಮಾಡುತ್ತಿದ್ದೇನೆಂದು ಹೆಮ್ಮೆಯಿಂದ ಹೇಳುತ್ತಾಳೆ.

ಸುನೀತಾ:

ಅವರು ಹೇಳುವಂತೆ ಈ ಹಿಂದೆ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳದಲ್ಲಿ ಕೆಲಸ ಮಾಡುತ್ತಿದ್ದ ಮತ್ತು ಈಗ ವಕೀಲಿ ವೃತ್ತಿ ಮಾಡುತ್ತಿರುವ "ಪದ್ಮಾವತಿಯವರ ಸಹಾಯದಿಂದ ನಾನು ಕಿತ್ತೂರು ರಾಣಿಚೆನ್ನಮ್ಮ ಮಹಿಳಾ ಮಂಡಳಕ್ಕೆ ಸೇರಿಕೊಂಡೆ. ನನಗಾಗ ಕೇವಲ ೧೭ ವರ್ಷ. ತುಂಬಾ ಚೆನ್ನಾಗಿ ಪೇಟಿಂಗ್ ಮಾಡುತ್ತಿದ್ದೆ. ನನ್ನ ಕಲೆ ಅಮ್ಮನಿಗೆ ತೋರಿಸಿದೆ. ಅವರು ಬಹಳನೇ ಮೆಚ್ಚಿಕೊಂಡರು. ನಾವು ಬಡವರು ಮೇಲಾಗಿ ನಾನು ಅಂಗವಿಕಲೆ. ಹೆಚ್ಚು ಓದಿಸುವುದು ನನ್ನ ತಾಯಿಗೆ ಇಷ್ಟವಿರಲಿಲ್ಲ. ಮದುವೆ ಮಾಡಿಕೊಡುವುದೇ ಅವರಿಗೆ ಒಂದು ಚಿಂತೆಯಾಗಿತ್ತು. ಆದರೆ ಅಮ್ಮ ನನಗೆ ಬೆಂಗಳೂರಿಗೆ ಕಳುಹಿಸಿ ಅಪ್ತ ಸಹಾಯಕಿಯ ತರಬೇತಿ ಕೊಡಿಸಿದರು. ಎಂ.ಎ. ಸಮಾಜಶಾಸ್ತ್ರದಲ್ಲಿ ಮುಗಿಸಿ ಎಂ.ಎಸ್.ಡಬ್ಲ್ಯೂ. ಮಾಡಿಸಿದರು. ಆಮೇಲೆ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳದಲ್ಲಿ ಅಪ್ತ ಸಮಾಲೋಚಕರ ಹುದ್ದೆಗೆ ನೇಮಿಸಿಕೊಂಡರು. ಹೆಚ್ಚು ಓದದ ಹುಡುಗನೊಂದಿಗೆ ನನ್ನ ಮದುವೆಯಾಯಿತು. ಸರ್ಕಾರಿ ನೌಕರಿ ಸೇರಬೇಕೆಂಬ ಇಚ್ಛೆ ನನ್ನಲ್ಲಿ ಬಲವಾಗಿತ್ತು. ಆದರೆ ನಮ್ಮ ಸಮುದಾಯದವರಿಗೆ ವ್ಯಾಪಾರವೇ ವಗ್ಗುತ್ತಿದೆಯೆಂದು ಒಂದು ಸಣ್ಣ ವ್ಯಾಪಾರ ಆರಂಭಿಸಿದೆವು. ಅಮ್ಮನಿಂದ ಧೈರ್ಯ ಸ್ಥೈರ್ಯ ಕಲಿತುಕೊಂಡೆ. ಒಂದೊಂದು ಸಾರಿ ಈ ಕೆಲಸಕ್ಕೆ ನಾನು ಯಾಕಾದರೂ ಸೇರಿದೆನೆಂಬ ಮುಜುಗರವಾಗುತ್ತಿತ್ತು. ಆದರೆ ಈಗ ನಾನೊಂದು ಮಹಿಳಾ ಮಂಡಳ ನಡೆಸುವ ಚಾಕಚಕ್ಯತೆ ಸಾಮರ್ಥ್ಯ ಬಂದಿದೆಯೆಂದು ಹೇಳಲು ಹೆಮ್ಮೆಯೆನಿಸುತ್ತದೆ. ನನಗೆ ಜವಾಬ್ದಾರಿಯ ಅರಿವು ಆಗುತ್ತಿದೆ. ಇದನ್ನು ಗಮನಿಸಿದ ಅಮ್ಮ ನನ್ನ ಸಾಮರ್ಥ್ಯಕ್ಕನುಗುಣವಾಗಿ ಜವಾಬ್ದಾರಿಗಳನ್ನು ಕೊಟ್ಟರು.

ಎಷ್ಟು ದೊಡ್ಡ ಕಾರ್ಯವೆಂದರೆ ಅಲ್ಲಿ ಒಂದೊಬ್ಬರು ಒಂದಿಷ್ಟು ಮೈಮರೆತರೆ ಅನಾಹುತ ತಪ್ಪಿದಲ್ಲ. ಮೈಯಲ್ಲಾ ಕಣ್ಣಾಗಿ ಕಾರ್ಯ ನಿರ್ವಹಿಸಬೇಕು.

ಇಂತಹ ವಿಷಯದಲ್ಲಿ ಅಮ್ಮನ ಗಂಡು ಗುಂಡಿಗೆಯ ಧೈರ್ಯ ಮೆಚ್ಚುವಂತಹದ್ದು. ಪೊಲೀಸರ ಜೊತೆ, ವಕೀಲರ ಜೊತೆ, ಅಧಿಕಾರಿಗಳ ಜೊತೆ ಅವರು ಮಾತಾಡುವ ರೀತಿ ತುಂಬಾ ಪ್ರಭಾವಿಸುವಂತಹದ್ದು. ಅವರ ನೆರಳಿನಲ್ಲಿ ಬೆಳೆದ ನನಗೆ ತುಂಬಾ ಸಹಾಯವಾಗಿದೆ. ಆರ್ಥಿಕ ಸ್ವಾವಲಂಬಿಯಾಗಿ, ಪ್ರತಿಷ್ಠಿತ ವ್ಯಾಪಾರಿಗಳಲ್ಲಿ ನಾವೂ ಒಬ್ಬರಾಗಿದ್ದೇವೆ. ದಿನಾಲು ಸಾವಿರಾರು ರೂಪಾಯಿಗಳ ವ್ಯವಹಾರ ನಡೆಸುತ್ತೇವೆ. ಅಂಗವಿಕಲತೆ ಶಾಪವಿಲ್ಲ. ಅದು ನಮಗೆ ವರವೆಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟೊಂದು ಸಬಲತೆಯಿಂದ ಬದುಕುತ್ತಿರುವುದಕ್ಕೆ ಕಾರಣರಾದ ಅಮ್ಮಳಿಗೆ ನಾನು ಚಿರಋಣಿ.

ಗೀತಾ ಶ್ರೀಹರಿ:

ಹೇಳುವಂತೆ– "ಮದುವೆಯಾದ ಮೇಲೆ ಗಂಡನೊಂದಿಗೆ ಉದ್ಯೋಗ ಮಾಡುತ್ತಾ ಹೈದ್ರಾಬಾದಿನಲ್ಲಿ ಸುಖಸಂಸಾರ ಮಾಡುತ್ತಿದ್ದೆ. ವಿಧಿಯ ವಕ್ರದೃಷ್ಟಿ ನನ್ನ ಗಂಡನ ಮೇಲೆ ಬಿದ್ದಿತು. ಅಕಾಲಿಕವಾಗಿ ನನ್ನ ಗಂಡ ಮರಣಹೊಂದಿದರು. ಎರಡು ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು ಹೇಗೆ ಬದುಕುವುದೆಂದು ಚಿಂತೆಯಾಯಿತು. ಕುಟುಂಬದಲ್ಲಿ ತುಂಬಾ ತೊಂದರೆಯಿತ್ತು. ಆಗ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳದ ಬಗ್ಗೆ ಗೊತ್ತಾಯಿತು. ಅಮ್ಮ ಇದ್ದಾರೆ. ಅವರು ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುತ್ತಾರೆಂದು ಕೇಳಿ ಅವರ ಹತ್ತಿರ ನನ್ನ ಗೆಳತಿಯನ್ನು ಕರೆದುಕೊಂಡು ಬಂದೆ. ನನ್ನ ಒಂದುವರೆ ವರ್ಷ ಮತ್ತು ೩ ವರ್ಷದ ಎರಡು ಮಕ್ಕಳನ್ನು ಕಂಕುಳಲ್ಲಿ ಎತ್ತುಕೊಂಡು ದಿಕ್ಕು ತೋಚದವಳಂತೆ ಕಂಗಾಲಾಗಿದ್ದ ನನ್ನನ್ನು ಅಮ್ಮ ಕಂಡರು. ನನ್ನ ಸಂದಿಗ್ಧತೆ ಅರ್ಥಮಾಡಿಕೊಂಡು ಕೈಹಿಡಿದು ಕಾಪಾಡಿದರು. ನನಗೆ ಧೈರ್ಯ ತುಂಬಿ, ಆರಂಭದಲ್ಲಿ ಸಣ್ಣಪುಟ್ಟ ಕೆಲಸ ಮಾಡಲು ಹೇಳಿದರು. ನಾನು ಹೊಲಿಗೆಯನ್ನು ಕಲಿತೆ, ಆಮೇಲೆ ನನಗೆ ಬ್ಯಾಂಕ್‌ನವರ ಸಹಾಯದಿಂದ ಖಾರಾ ಕುಟ್ಟುವ ಯಂತ್ರ, ಹಪ್ಪಳ ಮಾಡುವ ಯಂತ್ರ ಕೊಡಿಸಿದರು. ಮಹಿಳಾ ಮಂಡಳದಲ್ಲಿ ಜವಾಬ್ದಾರಿಯುತ ಕೆಲಸಕೊಟ್ಟರು.

ನನಗೆ ವಹಿಸಿದ ಕಾರ್ಯ ಬಹಳ ನಿಷ್ಠೆಯಿಂದ ಮಾಡಿದೆ. ನನ್ನ ಮೇಲೆ ಭರವಸೆ ಬಂದಿತು. ಮಹಿಳಾ ಮಂಡಳದ ಕಾರ್ಯದಲ್ಲಿ ವಕೀಲರಿಗೆ, ಅಧಿಕಾರಿಗಳಿಗೆ ಭೇಟಿಯಾಗುವುದು. ಪೊಲೀಸ್ ಠಾಣೆಗೆ ಹೋಗಿ ಅಲ್ಲಿಯ ಕಾರ್ಯವನ್ನು ಮಾಡಲು ತಿಳಿಸುತ್ತಿದ್ದರು. ಅದರ ಫಲವಾಗಿ ನಾನಿವತ್ತು ಎಲ್ಲಾ ಗಣ್ಯರ ಮುಂದೆ ನಿಂತು ಮಾತನಾಡಬಲ್ಲೆನು. ಅವರ ಸರಿ ತಪ್ಪುಗಳ ಬಗ್ಗೆ ಮಾತಾಡುವ ಸಾಮರ್ಥ್ಯ ಬಂದಿದೆ. ಇನ್ನೊಬ್ಬರಿಗೆ ಸ್ವಾಂತನ ಹೇಳುವ, ಸಾಂತ್ವನ ಕೇಂದ್ರ ನಡೆಸಿಕೊಂಡು ಹೋಗುವ ಬಲ ನನ್ನಲಿದೆ. ಈಗ ನನ್ನ ಮಕ್ಕಳು ತುಂಬಾ ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದಾರೆ. ದೊಡ್ಡ ಮಗ ಡಿಪ್ಲೋಮಾ ಡಿಸ್ಟಿಂಗಸ್‌ನಲ್ಲಿ ಪಾಸಾಗಿದ್ದಾನೆ. ಅವನ ಮುಂದಿನ ಅಭ್ಯಾಸ ಮಾಡಿಸುವ ಜವಾಬ್ದಾರಿ ಅಮ್ಮ ಹೊತ್ತಿದ್ದಾರೆ. ಚಿಕ್ಕ ಮಗನ ವಿದ್ಯಾಭ್ಯಾಸದ ಖರ್ಚು ವೆಚ್ಚ ನೋಡಿಕೊಳ್ಳುತ್ತಾರೆ. ಅಮ್ಮ ನನ್ನ ಪಾಲಿನ ಪ್ರತ್ಯಕ್ಷ ದೇವರಂತೆ ಕಾಣುತ್ತಾರೆ.

ಶಾಂತಾ ಪಾಟೀಲ ಗುಮ್ಮೆ :

ಶಾಂತಾರವರು ಬಹಳ ದುಃಖದಿಂದ ಹೇಳುವ ಮಾತುಗಳಿವು. "ಒಂದು ವೇಳೆ ಅಮ್ಮ ಗುರಮ್ಮಾ ತಾಯಿಯವರು ನನಗೆ ಸಿಗದಿದ್ದರೆ ಈ ಮಹಿಳಾ ಮಂಡಳದ ಪರಿಚಯ ನನಗಾಗದಿದ್ದರೆ ನನ್ನ ಜೀವನವೇ ಅಧೋಗತಿಗೆ ಹೋಗುತ್ತಿತ್ತು. ನನ್ನ ಗಂಡ ತೀರಿದ ಮೇಲೆ ನನ್ನ ಗಂಡನ ಮನೆಯವರು ನನಗೆ ಬಹಳ ತೊಂದರೆ ಕೊಟ್ಟರು. ಅವರು ಶ್ರೀಮಂತರಿದ್ದರೂ ನನಗೆ ಏನು ಕೊಡುದಿಲ್ಲವೆಂದು ಹೇಳುತ್ತಿದ್ದರು. ಆದರೆ ನನ್ನೆಲ್ಲಾ ಸಮಸ್ಯೆಗಳನ್ನು ಅಮ್ಮನ ಮುಂದೆ ಹೇಳಿಕೊಂಡೆ. ಅವರು ನನ್ನ ನೋವನ್ನು ಕೇಳಿ, ನನಗೆ ಸಮಾಧಾನ ಗೊಳಿಸಿದರು. ನನಗೆ ಸಿಗಬೇಕಾದ ಸೌವಲತ್ತುಗಳು ದೊರಕಿಸಿಕೊಟ್ಟರು. ನನಗೆ ಅನೇಕ ಜನ ಬಂಧು ಬಳಗದವರಿದ್ದರೂ ಯಾರೊಬ್ಬರು ನನ್ನ ಸಹಾಯಕ್ಕಾಗಲಿಲ್ಲ. ಸರ್ವಜ್ಞ ಹೇಳುವಂತೆ, "ಬಂಧುಗಳೆನ್ನುವವರು ಬಂದುಂಡು ಹೋಗುವರು, ಬಂಧನವ ಕಳೆಯಲರಿಯರು" ಎಂಬಂತೆ ಇದ್ದರು. ಅಮ್ಮನ ದಯೆಯಿಂದ

ನಾನೀಗ ನನ್ನೆರಡು ಮಕ್ಕಳೊಂದಿಗೆ ಚೆನ್ನಾಗಿದ್ದೇನೆ. ದೇವರು ಅವರಿಗೆ ಒಳ್ಳೆಯ ಆರೋಗ್ಯಕೊಟ್ಟು ನೂರು ವರ್ಷ ಸುಖವಾಗಿ ಬಾಳಲೆಂದು ದಿನಾಲು ಪ್ರಾರ್ಥಿಸುತ್ತೇನೆ.

ಹೀಗೆ ಅಮ್ಮನ ಸಹಾಯ ಪಡೆದ ಅನೇಕ ಅಸಹಾಯಕರು, ನಿರ್ಗತಿಕರು, ವಿಕಲಚೇತನರು, ಮಹಿಳೆಯರು ಹೇಳುವ ಮಾತುಗಳು ಸ್ಮರಣಾರ್ಹವಾಗಿವೆ. ಅವರೆಲ್ಲ ಹೇಳುವಂತೆ– "ಅಮ್ಮ ಮುಂದಿನ ಜನ್ಮದಲ್ಲಿ ನಮ್ಮ ತಾಯಿಯವಾಗಿ ಬರಲಿ". ಎಂದು ಆಶಿಸುತ್ತಾರೆ.

ಅಮ್ಮ ಸಮಾಜದ ಚಿಂತಕಿಯಾಗಿ, ಹೆಣ್ಣುಮಕ್ಕಳ ಬಗ್ಗೆ ಅತೀವ ಕಾಳಜಿ ಹೊಂದಿದವರಾಗಿದ್ದಾರೆ. "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬಂತೆ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸಿದ್ದಾರೆ. ಅನೇಕರ ಬಾಳಿನ ನಂದಾದೀಪವಾಗಿದ್ದಾರೆ. ಮಹಿಳೆಯರಲ್ಲಿ ಆತ್ಮವಿಶ್ವಾಸ ಬೆಳೆಸಲು ಕಾರಣಿಭೂತರಾಗಿದ್ದಾರೆ. ಅವರ ಕಾರ್ಯವೈಖರಿ ಅನುಸರಣಿಯ, ಅಭಿನಂದನೀಯ.

ಸಮಕಾಲೀನರ ಅಭಿಪ್ರಾಯಗಳು

ಅಂತಃಕರಣದ ತಾಯಿ

ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಕೇವಲ ವ್ಯಕ್ತಿಯಾಗಿರದೆ ಒಂದು ಶಕ್ತಿಯಾಗಿ ಕಾರ್ಯ ಮಾಡುತ್ತಿದ್ದಾರೆ. ಸಮಾಜದ ಒಳ್ಳೆಯ ಕಾರ್ಯದಲ್ಲಿ ತಮ್ಮನ್ನೇ ತಾವು ಅರ್ಪಿಸಿಕೊಂಡು ದುಡಿಯುತ್ತಿದ್ದಾರೆ. ಅಬಲೆಯರ, ಹೆಣ್ಣುಮಕ್ಕಳ ಏಳಿಗೆಗಾಗಿ ಹತ್ತು ಹಲವಾರು ಕಾರ್ಯ ಮಾಡಿದ್ದಾರೆ. ನಿಜವಾದ ಲಿಂಗಪೂಜೆ ಎಂದರೆ ಹೆಚ್ಚು ಅಭಿಷೇಕ ಮಾಡುವುದು ಅಲ್ಲ. ಹೆಚ್ಚು ಬಿಲ್ವಪತ್ರೆಯನ್ನು ಧರಿಸುವುದು ಅಲ್ಲ. ದುಃಖದಲ್ಲಿದ್ದವರ ಕಣ್ಣೀರು ಒರೆಸುವುದೇ ನಿಜವಾದ ಲಿಂಗಪೂಜೆ. ಕಷ್ಟದಲ್ಲಿದ್ದವರಿಗೆ ಸ್ಪಂದಿಸುವುದೇ ನಿಜವಾದ ಪೂಜೆ ಎಂದು ನಂಬಿದ ಗುರಮ್ಮ ತಾಯಿಯವರು ಅಂತಃಕರಣಪೂರ್ವಕ ಆ ಕಾರ್ಯ ಮಾಡುತ್ತಿದ್ದಾರೆ.

ಗುರು-ಲಿಂಗ-ಜಂಗಮ ಪ್ರೇಮಿಯಾಗಿದ್ದಾರೆ. ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರನ್ನು ಹೃದಯದ ತುಂಬಾ ತುಂಬಿಕೊಂಡಿದ್ದಾರೆ. ಅಪಾರ ಭಕ್ತಿನಿಷ್ಠೆಯನ್ನು ಹೊಂದಿದ್ದಾರೆ. 'ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ' ಎಂಬ ಗುರು ಬಸವಣ್ಣನವರ ವಾಣಿ ನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. ಏನೆಲ್ಲ ಮಾಡಿದರೂ ಹಮ್ಮು-ಬಿಮ್ಮಗಳಿಲ್ಲ. "ಸದುವಿನಯವೇ ಸದಾಶಿವನ ಒಲುಮೆ" ಬಸವವಾಣಿ ನಿತ್ಯ ಆಚರಣೆಯಲ್ಲಿ ಕಾಣುತ್ತೇವೆ. ಶಿವ ಕೊಟ್ಟಿದ್ದರಲ್ಲಿ ತೃಪ್ತಿಯಿಂದ, ಆನಂದದಿಂದ ಇರುತ್ತಾರೆ. ಸಾಮಾಜಿಕ, ರಾಜಕೀಯದಲ್ಲಿ ಕಾರ್ಯ ಮಾಡಿದ್ದರೂ

ಪದವಿ ಪುರಸ್ಕಾರಗಳಿಗೆ ಆಸೆ ಮಾಡಿದವರಲ್ಲ. ಸಿಗಲಿಲ್ಲವೆಂದು ಚಿಂತೆ ಮಾಡಿದವರಲ್ಲ. ಸದಾ ಉತ್ಸಾಹದ ಬುಗ್ಗೆಯಂತೆ ಕಾರ್ಯ ಮಾಡುತ್ತ ಹೋಗುತ್ತಾರೆ. ಡಾ. ಸಿದ್ದಾರೆಡ್ಡಿಯವರ ಬೆಂಬಲ ಪೂರ್ಣವಾಗಿತ್ತು. "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎನ್ನುವ ಶರಣವಾಣಿಯಂತೆ ಬಾಳಿ ಬದುಕಿದ್ದವರು. ಲಿಂಗೈಕ್ಯ ಡಾ. ಸಿದ್ದಾರೆಡ್ಡಿಯವರು ಶರೀರದ ವೈದ್ಯರ ಜೊತೆ ಸಮಾಜದ ವೈದ್ಯರೂ ಆಗಿದ್ದರು. ಸಾಮಾಜಿಕ ಸೇವೆಯಲ್ಲಿ ಸದ್ದು-ಗದ್ದಲವಿಲ್ಲದ ಮೌನಸೇವೆ ಮಾಡಿದವರು. ಲಿಂಗೈಕ್ಯ ಡಾ. ಸಿದ್ದಾರೆಡ್ಡಿಯವರು ಲಿಂಗೈಕ್ಯರಾದ ನಂತರ ಉತ್ಸಾಹ ಕಳೆದುಕೊಳ್ಳಲಾರದೆ ನೀವು ಸೇವೆ ಮುಂದುವರಿಸಿರಿ ಎಂದು ನಾವು ಹೇಳಿದ ಮಾತು ಚಾಚೂ ತಪ್ಪದೇ ಪಾಲಿಸಿ ರಚನಾತ್ಮಕ ಜನಮುಖಿಯಾದ ಕಾರ್ಯ ಮಾಡುತ್ತಿರುವುದು ಸಂತಸ. ಆನಂದ. ಅವರಿಗೆ ಗುರುಬಸವ ತಂದೆಯವರ ಶ್ರೀರಕ್ಷೆ, ಡಾ. ಚನ್ನಬಸವ ಪಟ್ಟದ್ದೇವರ ಅಖಂಡ ಆಶೀರ್ವಾದ ಇರಲೆಂದು ಹೃದಯಪೂರ್ವಕ ಹಾರೈಸುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅರ್ಥಪೂರ್ಣ ರಚನಾತ್ಮಕ ಕಾರ್ಯ ನಡೆದಿದೆ. ಕೇವಲ ಉತ್ಸವ ಮಾಡಲಾರದೆ ಪುಸ್ತಕೋತ್ಸವ ಮೂಲಕ ದಾಖಲೆಗಳನ್ನುಳಿಸುವ ಕಾರ್ಯ ನಡೆದಿದೆ. ಸುನೀತಾ ದಾಡಗೆಯವರು ಪ್ರತಿಭಾವಂತರು. ಅವರ ಲಿಂಗಹಸ್ತದಿಂದ ಉತ್ತಮ ಕೃತಿ ಮೂಡಿಬರುತ್ತಿರುವುದು ಸಂತಸ ತಂದಿದೆ.

ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ, ಬೀದರ ಜಿಲ್ಲೆ

ಸಮರ್ಪಣಾ ಜೀವಿ

ಕರ್ನಾಟಕದ ಇತಿಹಾಸದಲ್ಲಿ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಪ್ರಮುಖ ವ್ಯಕ್ತಿಯಾಗಿ ನಿಲ್ಲುತ್ತಾರೆ.

ಕರ್ನಾಟಕದ ಮಹಿಳಾ ಸಮೂಹಕ್ಕೆ ದೃಢ ಸಂಕಲ್ಪದ ದೊಡ್ಡ ಬುದ್ಧಿಜೀವಿಯಾಗಿ ಮೆರೆದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ತಮ್ಮ ವೈಯಕ್ತಿಕ ಜೀವನದ ವೈಭವೀಕರಣವನ್ನು ವಿರೋಧಿಸಿದ ಸಲುವಾಗಿಯೇ ಬಹುಶಃ ಇತರ ಮಹಿಳಾ ನಾಯಕಿಯರಿಗೆ ಸಿಕ್ಕಂಥ ಪ್ರಚಾರ ಇವರಿಗೆ ಸಿಗಲಿಲ್ಲ. ಇವರು ಗ್ರಾಮೀಣ ಭಾಗದಲ್ಲಿ ಮಧ್ಯಮ ವರ್ಗದ ಸರಳ ಮನೆತನದಲ್ಲಿ ಹುಟ್ಟಿದ್ದರಿಂದ ಇವರ ಬಾಲ್ಯದ ಕೆಲವು ವಿಷಯಗಳನ್ನು ದಾಖಲಿಸಲಾಗಿಲ್ಲ. ಸಮಾಜಕ್ಕೆ ಯಾವ ಆಪೇಕ್ಷೆಯಿಲ್ಲದೆ ನಿಸ್ವಾರ್ಥ ಸೇವೆ ಸಲ್ಲಿಸಿದ ಎಲ್ಲರಿಗೂ ಈ ರೀತಿಯ ಮುಖಸ್ತುತಿಯೂ ಲಭ್ಯವಾಗಿಲ್ಲ. ಇವರನ್ನು ಹೊಗಳಿದರೆ ಇವರು ಮಾಡಿದ ಕಾರ್ಯಗಳ ಮಹತ್ವವನ್ನು ಕ್ಷೀಣಿಸುತ್ತದೆಯೇ ಹೊರತು ವಾಸ್ತವವಲ್ಲ. ಗುರಮ್ಮನವರು ಇವೆಲ್ಲವನ್ನು ಮೀರಿದ ವ್ಯಕ್ತಿಯಾಗಿ ನಿಂತಿದ್ದಾರೆ.

ಸತ್ಯಾಂಶಗಳು ಹಾಗೂ ಪುರಾವೆಗಳು ಸರಿಯಾಗಿ ತೂಗಿಸುವುದು ಯಾವುದೇ ಚರಿತ್ರೆಯ ಅನಿವಾರ್ಯವಾಗಿರುತ್ತದೆ. ಗುರಮ್ಮನವರ ಈ ಒಂದು ಕೃತಿ ಒಂದು ಯಶಸ್ಸಿನ ಪ್ರಯತ್ನವಾಗಿದೆ. ಪ್ರಸ್ತುತ ಕೃತಿಯಲ್ಲಿ ಸಂಕ್ಷಿಪ್ತ ಜೀವನ ಚರಿತ್ರೆ ಅಂಗುಲದ ಚೌಕಟ್ಟಿನಲ್ಲಿ ಸುಂದರವಾಗಿ ಮೂಡಿ ಬಂದದ್ದು, ಈ ಕೃತಿಯ ಚಾರಿತ್ರಿಕ ದೃಷ್ಟಿಕೋನದಲ್ಲಿ ಕುತೂಹಲಕಾರಿಯಾಗಿ ಮಹತ್ವ ಪಡೆದುಕೊಳ್ಳುತ್ತದೆ.

ನನ್ನ ಕಿರಿಯ ಶಿಷ್ಯಳೂ ರಾಜ್ಯ ಮಟ್ಟದ ಆದರ್ಶ ಶಿಕ್ಷಕಿ ಪ್ರಶಸ್ತಿ ಪಡೆದ ಶ್ರೀಮತಿ ಸುನೀತಾ ದಾಡಗೆಯವರು ಈ ಕೃತಿಯ ರಚನೆಯಲ್ಲಿ ದಶಕದ ಶ್ರಮ ಹಾಗೂ ಸಮರ್ಪಣಾ ಯತ್ನವನ್ನು ಮಾಡಿರುವದಕ್ಕೆ ಇದರಲ್ಲಿಯ ವಿಷಯ ಸಂಗ್ರಹಣೆ, ಅಚ್ಚುಕಟ್ಟಾಗಿ ಅಳವಡಿಸಿರುವದು ಸಾಕ್ಷಿಯಾಗಿದೆ. ಈ ಕೃತಿಯಲ್ಲಿ ಸತ್ಯಾಂಶವನ್ನು ತೂಗಿಸಿರುವುದು ಸೃಜನಾತ್ಮಕವಾಗಿ ಮೂಡಿಬರಲು ಸಾಧ್ಯವಾಗಿದೆ.

ಶ್ರೀಮತಿ ಸುನೀತಾ ದಾಡಗೆಯವರ ಪ್ರತಿಭೆಯನ್ನು ಪ್ರಶಂಸಿಸಲು ನನಗೆ ಸಂತೋಷವಾಗಿದೆ. ಈ ಕೃತಿಯ ಮುಖಪುಟ ವೈವಿಧ್ಯಮಯ ಮುದ್ರಣ ಈ ಕೃತಿಯನ್ನು ಅತ್ಯಮೂಲ್ಯಗೊಳಿಸಿದೆ. ಮುಂದಿನ ದಿನಗಳಲ್ಲಿ ಮುಂದಿನ ಪ್ರಯತ್ನಗಳಲ್ಲಿ ಸುನೀತಾ ಅವರಿಗೆ ಯಶಸ್ಸು ಕೋರುತ್ತಾ ಮುಂದಿನ ಸೃಷ್ಟಿಗಳು ವಿಸ್ತಾರವಾದ ಕ್ಷೇತ್ರಗಳನ್ನು ತಲುಪಲಿ ಎಂದು ಹಾರೈಸುತ್ತೇವೆ.

– ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಕೌಠಾ

ನಿತ್ಯೋತ್ಸಾಹಿ ಗುರಮ್ಮ ಸಿದ್ದಾರೆಡ್ಡಿ

ಶರಣೆ ಗುರಮ್ಮಾತಾಯಿ ಅವರು ಉತ್ಸಾಹದ ಚಿಲುಮೆ, ಪತಿ ಡಾ. ಎಸ್.ಎಸ್. ಸಿದ್ದಾರೆಡ್ಡಿಯವರು ಅವರಿಗೆ ಬೆನ್ನೆಲುಬಾಗಿ ನಿಂತು ಎಂತದ್ದೇ ಕಠಿಣ ಪರಿಸ್ಥಿತಿ ಯಲ್ಲಿಯೂ ಹೆಗಲೆಣೆಯಾದವರು. ಗೃಹಿಣಿಯಾಗಿ, ತಾಯಿಯಾದ ಮೇಲೆ ತಮ್ಮ ಶೈಕ್ಷಣಿಕ ಅಧ್ಯಯನವನ್ನು ಮುಂದುವರೆಸಿ, ಸ್ನಾತಕೋತ್ತರ ಪದವೀಧರೆ ಯಾದದ್ದು, ಮಹಿಳೆಯರಿಗೆಲ್ಲ ಮಾದರಿ. ಎಫ್.ಪಿ.ಎ. ಸಂಸ್ಥೆಯಿಂದ ಇವರ ಕುಟುಂಬ ಮಾಡಿದ ಸೇವೆಯನ್ನು ಬೀದರ ಜಿಲ್ಲೆಯ ಜನ ಮರೆಯಲಾರರು.

ಸ್ವತಃ ತಾಯಿಯವರು ಮಾಡುತ್ತಿರುವ ಸೇವೆ ಕಂಡು ಹೃದಯ ತುಂಬಿ ಬರುತ್ತದೆ. ಹೆತ್ತ ಮಕ್ಕಳಿಗೆ ಬೇಡವಾದ ವೃದ್ಧರು, ಅತ್ಯಾಚಾರಕ್ಕೊಳಗಾದ ಅಮಾಯಕ ಹೆಣ್ಣುಮಕ್ಕಳು, ಕೌಟುಂಬಿಕ ಕಲಹಗಳಿಂದ ಜೀವನದಲ್ಲಿ ಜಿಗುಪ್ಸೆಗೊಂಡ ಮಹಿಳೆಯರಿಗೆ ಬಂಧು ಬಳಗದಂತೆ ಆಶ್ರಯ ನೀಡಿ, ಜೀವನಕ್ಕೊಂದು ದಾರಿ ತೋರಿಸುತ್ತಿರುವ ಕರುಣಾಶಾಲಿಗಳವರು.

೭೦ನೇ ವಯಸ್ಸಿನಲ್ಲಿ ೨೦ರ ಹರೆಯದಂತೆ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳೊಂದಿಗೆ ಸಮವಸ್ತ್ರ ಧರಿಸಿ, ಯುದ್ಧಭೂಮಿಯ ಯೋಧರಂತೆ ಕಂಗೊಳಿಸುತ್ತಾರೆ.

ಜಿಲ್ಲೆಯಲ್ಲಿಯ ಯಾವುದೇ ಸಾಂಸ್ಕೃತಿಕ ಸಮಾರಂಭಗಳಿರಲಿ, ದಾಸೋಹಕ್ಕೆ ಬೇಡದೇ ನೀಡುವ ಪುಣ್ಯದ ಕೈ, ಮಾಡಿದನೆಂಬ ಹಮ್ಮುಬಿಮ್ಮುಗಳಿಲ್ಲದ ಪರಿಪಕ್ವವಾದ ಬಾಗಿದ ಮನ, ಅಧ್ಯಾತ್ಮದತ್ತ ಒಲವಿರುವ ಧ್ಯಾನಸ್ಥ ಜೀವನ, ಆದರ್ಶ ಸತಿ, ಮಕ್ಕಳ ಹೆಮ್ಮೆಯ ಅಮ್ಮ, ಬಡವರ ಬಂಧು, ನೊಂದವರ ಆಸರೆಯಾಗಿರುವ ಬಸವನಿಷ್ಠೆ ಶರಣೆ ಗುರಮ್ಮ ಸಿದ್ದಾರೆಡ್ಡಿ ಮಹಿಳಾ ಕುಲಕ್ಕೊಂದು ಆದರ್ಶ. ಕಿರಿಯರಲ್ಲಿ ಕಿರಿಯರಾಗಿ, ಹಿರಿಯರಲ್ಲಿ ಹಿರಿಯರಾಗಿ ಬೆರೆತು ಒಂದಾಗುವುದು ಅವರ ವೈಶಿಷ್ಟ್ಯ. ಇವರ ಮಕ್ಕಳಾದ ಡಾ. ವಿಕ್ರಮ್, ಡಾ. ರಾಜಶ್ರೀಯವರು ಕೂಡ ಸಾಮಾಜಿಕ ಕಳಕಳಿಯುಳ್ಳವರಾಗಿ, ಮಾನವೀಯ ಸೇವೆಯಲ್ಲಿ ತೊಡಗಿಸಿಕೊಂಡಿರುವುದು ನಮ್ಮೆಲ್ಲರಿಗೂ ಅನುಕರಣೀಯ ಹೆಮ್ಮೆ.

ಅಕ್ಕ ಅನ್ನಪೂರ್ಣ ತಾಯಿ
ಲಿಂಗಾಯತ ಮಹಾಮಠ, ಬೀದರ.

ಮಹಿಳೆಯರಿಗೆ ದಾರಿದೀಪ

ಒಬ್ಬ ಮಹಿಳೆ ಮನಸ್ಸು ಮಾಡಿದರೆ ಏನೆಲ್ಲಾ ಮಾಡಬಹುದು ಎಂಬುದಕ್ಕೆ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರ ಕಾರ್ಯ ಸಾಧನೆಗಳೇ ಸಾಕ್ಷಿ. ಪ್ರಜ್ಞಾವಂತ ಸಮಾಜದಿಂದ ದೇಶದ ಪ್ರಗತಿ ಸಾಧ್ಯವೆಂದು ಅರಿತ ಅವರು ಮಹಿಳಾ ಶಿಕ್ಷಣದ ಜೊತೆ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗಾಗಿ ಹಗಲಿರುಳು ಎನ್ನದೇ ದುಡಿದು, ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಮಂಡಳದ ಮೂಲಕ ಅನೇಕ

ನೊಂದ, ಬಡ, ಅಂಗವಿಕಲ, ಅಸಹಾಯಕ ಮಹಿಳೆಯರ ಕುಟುಂಬಕ್ಕೆ, ಅವರ ಜೀವನಕ್ಕೆ ದೇವತೆಯಾಗಿದ್ದಾರೆ.

ಮಹಿಳಾ ಟಾಸ್ಕ್ ಫೋರ್ಸ್ ಅಧ್ಯಕ್ಷರಾಗಿ, ವಿಜಯಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಕಾರಣೀಕರ್ತರಾಗಿದ್ದಾರೆ. ಹಾಗೂ ಮೋಟಮ್ಮನವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾಗಿದ್ದಾಗ ತಮ್ಮ ಕಾರ್ಯಕ್ಷೇತ್ರವಾದ ಬೀದರ ಜಿಲ್ಲೆಯ ಬಗೆಗೆ ಹೆಚ್ಚಿನ ಆಸಕ್ತಿ ತೋರಿಸಿ, ಬೀದರಿನ ಡಿ.ಸಿ.ಸಿ. ಬ್ಯಾಂಕಿಗೆ ಸ್ತ್ರೀಶಕ್ತಿ ತರಬೇತಿ ತಂದಿದ್ದಾರೆ. ಅದು ಈಗ ವಿಶ್ವಮಾನ್ಯತೆ ಪಡೆದಿರುವುದು ಬೀದರಿನ ಜನತೆಗೆ ಹೆಮ್ಮೆಪಡುವ ವಿಷಯವಾಗಿದೆ. 'ಸಾಂತ್ವನ' ಕೇಂದ್ರದ ಮುಖಾಂತರ ಅತ್ಯಾಚಾರಕ್ಕೊಳಗಾದ ನೊಂದ ಬಾಲಕಿಯರಿಗೆ ಹಾಗೂ ಮಹಿಳೆಯರಿಗೆ ದಾರಿದೀಪವಾಗಿದ್ದಾರೆ.

ಅಂತರ್‌ರಾಷ್ಟ್ರೀಯ ಸಂಸ್ಥೆಯಾದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಜಿಲ್ಲಾ ಮುಖ್ಯ ಆಯುಕ್ತರಾಗಿ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಇವರನ್ನು ಪಿ.ಜಿ.ಆರ್. ಸಿಂಧಿಯಾರವರು ಉತ್ತಮ ಜಿಲ್ಲಾ ಆಯುಕ್ತರೆಂದು ಪ್ರಶಂಸಿದ್ದಾರೆ.

ಡಾ. ಎಸ್.ಎಸ್. ಸಿದ್ದಾರೆಡ್ಡಿ ಫೌಂಡೇಶನ್ ಹುಟ್ಟು ಹಾಕಿ ಶಿಕ್ಷಣ ಸೇವೆ, ಸಾಹಿತ್ಯ ಸೇವೆ, ಸಮಾಜ ಸೇವೆ ಸಲ್ಲಿಸುತ್ತಿದ್ದಾರೆ. ಇವರು ನನ್ನ ವಿದ್ಯಾರ್ಥಿ ಯಾಗಿದ್ದಾರೆಂದು ನಾನು ಹೆಮ್ಮೆ ಪಡುತ್ತೇನೆ. ಇವರಿಗೆ ದೇವರು ಆರೋಗ್ಯ, ಆಯುಷ್ಯ ದಯಪಾಲಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಪ್ರೊ. ಶ್ರೀಮತಿ ಲೀಲಾವತಿ ಚಾಕೋತೆ

ಗಡಿನಾಡಿನ ಆದರ್ಶ ಮಹಿಳಾಮಣಿ

ಪೂಜ್ಯ ಮಾತೋಶ್ರೀ ಗುರಮ್ಮ ಸಿದ್ಧಾರೆಡ್ಡಿಯವರ ಬಗ್ಗೆ, ಅವರು ಸಲ್ಲಿಸುತ್ತಿರುವ ಯಾವುದೇ ಕ್ಷೇತ್ರದ ಬಗ್ಗೆ ಒಂದಿಷ್ಟು ಹೇಳಬೇಕೆನ್ನುವುದೇ ಉತ್ಪ್ರೇಕ್ಷೆಯ ಮಾತಾದೀತು. ಅವರ ಕಾರ್ಯಕ್ಷೇತ್ರ ವಿಶಾಲವಾಗಿದೆ. ಅವರು ಅನವರತವಾಗಿ ಕೈಗೊಳ್ಳುತ್ತಿರುವ ಕಾರ್ಯ ಸಾಧನೆಗಳನ್ನು ನಿರ್ವಹಿಸುವ ಪರಿ ಸಮರ್ಥವಾಗಿದ್ದು, ಕಾರ್ಯದಕ್ಷತೆ, ಕುಶಲತೆಯಿಂದ ಕೂಡಿದ್ದಾಗಿರುತ್ತದೆ.

ಸಾಮಾಜಿಕವಾಗಿ ಇವರು ಮಾಡಿರುವ ಕಾರ್ಯಗಳು ಶ್ಲಾಘನೀಯವಾಗಿವೆ. ಬಡವರ ಬಂಧು, ಅನಾಥರ ರಕ್ಷಕರಾಗಿ ಅನ್ಯಾಯಕ್ಕೊಳಗಾಗಿ, ಅಂಧಕಾರದಲ್ಲಿ ಬಳಲುವ ಮನಸ್ಸುಗಳಿಗೆ ಜೀವನೋತ್ಸಾಹಕ್ಕೆ ಬುನಾದಿಯಾಗಿದ್ದಾರೆ. ಪ್ರೋತ್ಸಾಹದಾಯಕ ಮಮತೆಯ ಸೆಲೆಯಾಗಿ ಸಮಾಜಮುಖಿ ವ್ಯಕ್ತಿತ್ವ ಹೊಂದಿರುವ ಮಹಿಳೆಯಾಗಿದ್ದಾರೆ. ಅವರ ಜೀವನದಲ್ಲಿ ಬಂದ ಅನೇಕ ಕಷ್ಟ ಕಾರ್ಪಣ್ಯಗಳಿಗೆ ಎದೆಯೊಡ್ಡಿ ನಿಂತಿದ್ದಾರೆ. ಆಶ್ರಯ ಬಯಸಿ ಬಂದ ಅನೇಕರಿಗೆ ನೆಲೆ ನೀಡಿರುವ ಆಶ್ರಯದಾತೆಯಾಗಿದ್ದಾರೆ. ಬಹುಮುಖಿ ಪ್ರತಿಭೆಯ ವ್ಯಕ್ತಿತ್ವ ಹೊಂದಿರುವ, ಹಸಿದವರಿಗೆ ಅನ್ನ ನೀಡುವ ಇವರೊಬ್ಬ ಅನ್ನಪೂರ್ಣೇಶ್ವರಿ. ಗಡಿನಾಡಿನ ಆದರ್ಶ ಮಹಿಳಾಮಣಿ. ಎಪ್ಪತ್ತೈದರ ಗಡಿಯಲ್ಲೂ ಇಪ್ಪತ್ತೈದರ ಯುವತಿಯಂತೆ ನಡೆದಾಡುವ ಇವರಿಗೆ ದೇವರು ಆಯುಷ್ಯ ಆರೋಗ್ಯ ಕೊಡಲೆಂದು ಹಾರೈಸುತ್ತೇನೆ.

– ಶ್ರೀಮತಿ ಪುಣ್ಯವತಿ ವಿಸಾಜಿ

ನಿವೃತ್ತ ಮುಖ್ಯಗುರುಗಳು, ನೀಲಾಂಬಿಕಾ ಪ್ರೌಢ ಶಾಲೆ, ಬೀದರ.

ನನ್ನ ರಾಜಕೀಯ ಗುರು

ಒಂದು ಕಾಲದಲ್ಲಿ ಮಹಿಳೆಯ ಕಾರ್ಯಕ್ಷೇತ್ರ ಅಡುಗೆಮನೆಗೆ ಸೀಮಿತವಾಗಿತ್ತು. ಆದರೆ ಈಗ ಹಾಗಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಆಕೆ ತನ್ನ ಛಾಪು ಮೂಡಿಸುತ್ತಿದ್ದಾಳೆ. ಇದಕ್ಕೆಲ್ಲ ಸಂದರ್ಭ ಮತ್ತು ಅವಕಾಶ ಮುಖ್ಯ. ಗುರಮ್ಮಾ ಸಿದ್ದಾರಡ್ಡಿಯವರ ಅಧ್ಯಕ್ಷತೆಯಲ್ಲಿ ಆರಂಭಿಸಿದ ಕಿತ್ತೂರು ರಾಣಿ ಮಹಿಳಾ ಮಂಡಳದಿಂದ ಅನೇಕರಿಗೆ ಬಹಳಷ್ಟು ಉಪಯೋಗವಾಗಿವೆ. ಸಮಾಜದಲ್ಲಿ ನಾನೊಬ್ಬ ಪ್ರಭಾವಿ ವ್ಯಕ್ತಿಯಾಗಿ ಬೆಳೆಯಲು ನನಗೆ ಮೊದಲ ಹೆಜ್ಜೆ ಕಲಿಸಿಕೊಟ್ಟಿದ್ದೇ ಈ ಸಂಸ್ಥೆ. ಮೊದಲು ನಾನು ಮಾತನಾಡಲು ಕಲಿತಿದ್ದೆ ಇಲ್ಲಿಂದ. ಮೊದಲು ಸಂಘದ ಸದಸ್ಯರೆಲ್ಲ ತಾನೇ ಸೇರಿ ಸಮಾಜದಲ್ಲಿ ಮಹಿಳೆಯ ಏಳಿಗೆಗೆ ಏನೆಲ್ಲಾ ಮಾಡಬೇಕೆಂಬುದರ ಬಗ್ಗೆ ಚಿಂತಿಸುತ್ತಿದ್ದೇವು. ನಮ್ಮ ಆಲೋಚನಾ ಶಕ್ತಿ ಬೆಳೆಯಿತು. ಜನಸೇವೆಯಲ್ಲಿ ಜನಾರ್ಧನ ಸೇವೆಯೆಂದು ನಂಬಿದ ನನಗೆ "ಸಹಕಾರ ರತ್ನ" ಪ್ರಶಸ್ತಿ ತೆಗೆದುಕೊಳ್ಳುವಷ್ಟು ಎತ್ತರಕ್ಕೆ ಬೆಳೆಯಿಸಿತು.

ನಮಗೆಲ್ಲಾ ಆದರ್ಶರು, ನನ್ನ ರಾಜಕೀಯ ಗುರು ಆದ ಅಕ್ಕ ಗುರಮ್ಮಾ ಸಿದ್ಧಾರೆಡ್ಡಿಯೊಬ್ಬರು ನಿಃಷ್ಕಪಟ ಮನಸ್ಸಿನವರು. ಇನ್ನೊಬ್ಬರ ಜೊತೆ ಬೆರೆಯುವ ಅವರ ಗುಣ ನನಗೆ ಬಹಳ ಹಿಡಿಸುತ್ತದೆ. ಅವರು ದೀರ್ಘ ಆಯುಷಿಯಾಗಲೆಂದು ಬಯಸುವೆ.

– ಶ್ರೀಮತಿ ಶಕುಂತಲಾ ಬೆಲ್ದಾಳೆ

ಉಪಸಂಹಾರ

ಒಂದು ಸಂಪ್ರದಾಯಸ್ಥ ಕುಟುಂಬದಿಂದ ಬಂದಿದ್ದ ಗುರಮ್ಮ ಸಿದ್ದಾರಡ್ಡಿಯವರು ಸಹಜವಾಗಿಯೇ ತಾಯಿಯಿಂದ ರಕ್ತಗತವಾಗಿ ಹಲವಾರು ಗುಣಗಳು ಬಂದಿದವು. ಸೇವಾ ಮನೋಭಾವನೆ ಅವರ ಬದುಕಿನ ಭಾಗವಾಗಿತ್ತು. ಇವರು ಚಿಕ್ಕವರಿರುವಾಗ ಇವರ ಮನೆಗೆ ಥಾವರಸಿಂಗ ಎಂಬ ವಿದ್ಯಾರ್ಥಿ ಊಟಕ್ಕೆ ಬರುತ್ತಿದ್ದರು. ಆತ ಮನೆಯ ವಾರದ ಮನೆ ಮುಗಿಸುವವನ (ಅಂದರೆ ಒಂದು ವಾರ ಒಬ್ಬರ ಮನೆಯಲ್ಲಿಯೇ ಊಟ ಮಾಡಿ ಓದು ವಿದ್ಯಾಭ್ಯಾಸ ಮಾಡಬೇಕು. ಇವರು ಓದುವ ವಿದ್ಯಾರ್ಥಿಯಾಗಿದ್ದರಿಂದ ಅವರ ಓದು ಮಾಡಬೇಕು). ಅಂತೆಯೇ ಯಾವುದೇ ಊರಲ್ಲಿ ಸಾರ್ವಜನಿಕ ಕಾರ್ಯಮಾಡಲು ಪರಭಾಗದಿಂದ ಬಂದು, ಆ ಊರಿನಲ್ಲಿ ನೆಲಸಿ ಕೆಲಸಮಾಡುವಾಗ ಆ ಊರಿನ ಅನುಕೂಲಸ್ಥಲ ಮನೆಯಲ್ಲಿ ಒಂದೊಂದು ವಾರ ಊಟ ಮಾಡಿಸಿ ಓದಿಸುತ್ತಿದ್ದರು. ಆದರೆ ಅದು ಕಷ್ಟ. ಹೀಗೆ ಅಂದರೆ ವಾರದ ಮನೆ ಮುಗಿಸುವುರು ಎಂದಾಗ ವಿದ್ಯಾರ್ಥಿಯಾಗಿದ್ದರು). ಅವರಿಗೆ ಊಟ ಬಡಿಸಲು ಅವರ ತಾಯಿಯವರು ಹೇಳುತ್ತಿದ್ದರು. ಬಡಿಸಿದ ನಂತರ ಚೆನ್ನಾಗಿ ಬಡಿಸಿದ್ದಿಯಲ್ಲ. ಬೇರೆಯವರಿಗೆ ಊಟ ಬಡಿಸುವುದು ಪುಣ್ಯದ ಕೆಲಸ. ಹೊಟ್ಟೆ ತುಂಬಾ ಊಟ ಮಾಡಿದಾನಾ? ಎಂದು ಕೇಳುತ್ತಿದ್ದರು. ಏನನೋ ನೀತಿ ಮಾತುಗಳು ಹೇಳುತ್ತಿದ್ದಳು. ಈ ಜಗತ್ತಿನಲ್ಲಿ ಸಾಕೆನ್ನುವ ವಸ್ತು ಈ ಅನ್ನ ಮಾತ್ರ. ಉಂಡು ತೃಪ್ತರಾದರೆ ಅವರು ಹರಸುತ್ತಾರೆ. ಖಾಲಿ ಹೊಟ್ಟೆವುಳ್ಳವ

ಏನನ್ನು ಮಾಡಲು ಅಗುದಿಲ್ಲ. ಅಂತ ಅವರು ಹೇಳುವ ಮಾತುಗಳು ಇವತ್ತಿಗೂ ಗುರಮ್ಮರವರು ಸ್ಮರಿಸುತ್ತಾರೆ. ಥಾವರಸಿಂಗ ಮನೆಯಲ್ಲಿಯೇ ಉಂಡು ಓದಿಮುಗಿಸಿ ಅವರ ತಾಯಿಯ ಬಾಯಿ ಹರಕೆಯಂತೆ ಅವನು ಇಂದು ಅಧಿಕಾರಿಯಾಗಿದ್ದಾನೆ. ಅವನಂತೆ ಯುಮುನಪ್ಪಾ ಎನ್ನುವ ವ್ಯಕ್ತಿ ಕೂಡಾ ಅವರ ಮನಯೆಲ್ಲಿ ವಾರದ ಊಟ ಮಾಡಿ ಮಾಸ್ತರರಾಗಿದ್ದಾರೆಂದು ಹೇಳುತ್ತಾರೆ. ಬಾಲ್ಯದಲ್ಲಿ ಬೆಳೆದ ಈ ಪರಿಸರ ಗುಣಗಳು; ಇಂದಿಗೂ ಅವರ ಗುರಮ್ಮ ಸಿದ್ದಾರಡ್ಡಿಯವರಿಂದ ಬಿಟ್ಟುಹೋಗಿಲ್ಲ. ಪ್ರತಿದಿನ ಅವರ ಮನೆಯಲ್ಲಿ ಅನ್ನದಾಸೋಹ ನಡೆಯುತ್ತದೆ. ಬೀದರ ಊರಿಗೆ ಯಾರಾದರೂ ಹೊಸಬರು ಬಂದರೆ ಅವರ ಅತಿಥಿ ಊಟ ಸಿದ್ದಾರಡ್ಡಿಯವರ ಮನೆಯಲ್ಲಿಯೇ.

ಯಾವತ್ತೂ ದುಡಿಮೆಗೆ ಬೆಲೆಕೊಡುವ ಇವರು, "ದುಡ್ಡನ್ನು ದುಡಿದು ತರಬೇಕು, ಹೆಸರನ್ನು ಮಾಡೋ ಕಾರ್ಯದಿಂದ ಗಳಿಸಬೇಕೆನ್ನುವವರು" ಯಾವಾಗಲೂ ದುಡಿಮೆ ತನ್ನದಾಗಿಸಿಕೊಳ್ಳಬೇಕೆನ್ನುವವರು. ಅಂತಯೇ ಕಾರ್ಯಪ್ರವೃತ್ತತೆಯಿಂದ ಇರುವರು.

ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರು ಯಾವ ಹೊಗಳಿಕೆ, ತೆಗಳಿಕೆಗೆ ಬೆಲೆ ಕೊಡದೆ ಜೀವನದಲ್ಲಿ ಅನೇಕ ಸಿಹಿ-ಕಹಿ ಉಂಡವರು. ಬಂದುದೆಲ್ಲಾ ಬರಲಿ, ಮೇಲೆ ಭಗವಂತನ ದಯೆ ಇರಲಿ ಎನ್ನುವಂತೆ ಎಲ್ಲವನ್ನು ತಾಳ್ಮೆಯಿಂದ ಸಹಿಸಿಕೊಂಡು, ಸಮಾಜದ ಪ್ರತಿಷ್ಠಿತ ವ್ಯಕ್ತಿಯಾಗಿದ್ದಾರೆ.

ಒಮ್ಮೆ ಒಬ್ಬರನ್ನು ನಂಬಿದರೆ ಯಾವ ಕಾರಣಕ್ಕೂ ಕೈಬಿಡುವುದಿಲ್ಲ. "ನೀವು ಪ್ರೀತಿಸಿದವರ ಹೃದಯ ಕಲ್ಲು ಅಂತ ಗೊತ್ತಾದ ಮೇಲೆ ಯಾವತ್ತೂ ಅವರಿಂದ ದೂರವಾಗಬೇಡಿ. ಯಾಕೆಂದರೆ ಕಲ್ಲಿನಲ್ಲಿ ಬರೆದ ಹೆಸರು ಯಾವತ್ತೂ ಅಳಿಸಲ್ಲ" ಎನ್ನುವಂತೆ ಶಾಶ್ವತ ಹೆಸರು ಉಳಿಸಿಕೊಳ್ಳುವಂತೆ ನಡೆದುಕೊಳ್ಳುವ ದೊಡ್ಡ ಗುಣ ಇವರದು. ಅಲ್ಲದೆ ಕಲ್ಲು ಕಮಲವಾಗಿಸುವ ಶಕ್ತಿ ಇವರ ನಡೆ ನುಡಿಯಲ್ಲಿದೆ.

ಗುರಮ್ಮ ಸಿದ್ದಾರಡ್ಡಿಯವರು ಅದಮ್ಯ ಶಕ್ತಿಯುಳ್ಳ, ಸಜ್ಜನಿಕೆ, ವಿನೋದ ಪ್ರಜ್ಞೆಯೊಂದಿಗೆ ಬದುಕಿನ ಮೌಲ್ಯಗಳನ್ನು ಕಂಡ ಪ್ರಸನ್ನ ಮನಸ್ಸಿನವರು. ಇವರ ಜೀವನ ಉತ್ಸಾಹದಿಂದ ತುಂಬಿದ್ದು. ದೇವರಲ್ಲಿ ಅಚಲನಂಬಿಕೆವುಳ್ಳವರು ಕರ್ತವ್ಯ ಪ್ರಜ್ಞೆಯ ಶುದ್ಧ ಕಾಯಕದೊಂದಿಗೆ ಗುರುತಿಸಿಕೊಂಡರು. ಹಿಡಿದ ಕೆಲಸವನ್ನು ಬಿಡದ ಆತ್ಮ ವಿಶ್ವಾಸಿಗರು, ನಿಸ್ವಾರ್ಥಸೇವಾ ಮನೋಭಾವದವರು. ಸರ್ವಜ್ಞ ಹೇಳುವಂತೆ.

ಕೊಟ್ಟದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟದ್ದು ಕೆಟ್ಟಿತೆನಬೇಡ । ಅದು
ಮುಂದೆ ಕಟ್ಟಿಟ್ಟ ಬುತ್ತಿ ಸರ್ವಜ್ಞ.

ಇನ್ನೊಬ್ಬರ ಕಷ್ಟವನ್ನು ಅರಿತು ಕೈಲಾದ ಮಟ್ಟಿಗೆ ಸಹಾಯ ಮಾಡುವವರು. ಇವರ ಸಹಾಯದಿಂದ ಅನೇಕ ಬಡ, ನಿರ್ಗತಿಕ, ಅಂಗವಿಕಲ ಜೀವನಕ್ಕೆ ದಾರಿದೀಪವಾಗಿ ನಿಂತವರು. ಪ್ರತಿಯೊಬ್ಬರು ಅರ್ಥಿಕವಾಗಿ ಸಬಲರಾಗಬೇಕೆಂಬ ಉದ್ದೇಶದಿಂದ ಹತ್ತು ಹಲವು ಕೆಲಸಗಳನ್ನು ಹುಟ್ಟಿ ಹಾಕಿದರು. ಅಂದರೆ ಗುಡಿಕಸುಬುನ್ನು ಮಾಡಿಸಿ, ಅನೇಕರ ಬಾಳಿನಲ್ಲಿ ನೆಮ್ಮದಿಯನ್ನು ತಂದಿದ್ದಾರೆ. ಇವರಿಂದ ಸಹಾಯ ಪಡೆದ ಅದೆಷ್ಟು ಜನರು ಇವರನ್ನು ಮಾತೃಸ್ಥಾನದಲ್ಲಿ ಪೂಜಿಸುತ್ತಾರೆ. ತಮ್ಮ ಹಿಂದಿನ ಕಷ್ಟಗಳನ್ನು ನೆನೆದು ಕಣ್ಣೀರುಗರೆದು ಕಾಲಿಗೆ ಬೀಳುತ್ತಾರೆ. ಇವರು ನಮ್ಮ ಪಾಲಿನ ದೇವತೆಯೆಂದು ಬಾಯ್ತುಂಬ ಹೊಗಳುತ್ತಾರೆ. ತಮಿಳಿಗರು ಜಯಲಲಿತಾಳನ್ನು ಆರಾಧಿಸುವಂತೆ. ಬೀದರನಲ್ಲಿ ಕಿತ್ತೂರರಾಣಿ ಚೆನ್ನಮ್ಮಾ ಮಹಿಳಾ ಮಂಡಳದ ಸಾಂತ್ವನ ಕೇಂದ್ರದ ಹೆಣ್ಣುಮಕ್ಕಳು ಮತ್ತು ಮಹಿಳೆಯರು ಗುರಮ್ಮನವರಿಗೆ 'ಅಮ್ಮ ಅಮ್ಮಾ' ಎಂದು ಅವರ ಪ್ರತಿ ಉಸಿರಿಗೂ ಪ್ರತಿ ಹೆಜ್ಜೆಗೂ ಸ್ಮರಿಸುವುದು ನೋಡಿದರೆ ಹೆತ್ತತಾಯಿ ಮಹತ್ವ ಅರಿವಾಗುತ್ತದೆ. ಹೆರುವುದು ಮುಖ್ಯವಲ್ಲ. ಮುಂದೆ ಹೊರುವುದು ಮುಖ್ಯ ಅವರ ಬೆಳವಣಿಗೆಗೆ

ಉತ್ತಮ ಬಾಳಿಗೆ ಕಾರಣರಾದವರೆ ನಿಜವಾದ ಹೆತ್ತವರು. ಗುರಮ್ಮ ತಾಯಿಯವರು ಆ ಎಲ್ಲಾ ನೊಂದವರನ್ನು ಅತ್ಮೀಯವಾಗಿ ಮಾತನಾಡುತ್ತಾರೆ. ಮಗ್ಗಲಲ್ಲಿ ಕೂರಿಸಿಕೊಂಡು ಸಮಾಧಾನದ ಹಿತವಚನ ನೀಡುತ್ತಾರೆ. ತಪ್ಪಿದಲ್ಲಿ ಅಷ್ಟೇ ಅಧಿಕಾರದಿಂದ ಬೆದರಿಸುವುದು, ಬೈಯುವ ಮೂಲಕ ಸರಿದಾರಿಗೆ ತರುತ್ತಾರೆ. ಓೀಗಾಗಿ ಅವರು ತಮ್ಮ ಮನೆ, ಹೆತ್ತವರನ್ನೆ ಮರೆತು, ಸ್ವಂತ ದುಡಿಯುವ ಮೂಲಕ ಆರ್ಥಿಕ ಸ್ವಾವಲಂಬಿಗಳಾಗುತ್ತಿರುವುದು ನೋಡಿದರೆ ಗುರಮ್ಮ ಅವರ ಕಾರ್ಯದ ಬಗ್ಗೆ ಹೆಮ್ಮೆ ಎನಿಸುತ್ತದೆ. ಹೆಣ್ಣು ಮನಸ್ಸು ಮಾಡಿದರೆ ಏನಲ್ಲಾ ಸಾಧಿಸಬಹುದು ಎಂಬುದಕ್ಕೆ ಇವರೇ ಆದರ್ಶ. ಜಾತಿಭೇದವನ್ನು ಮಾಡದೇ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣ ತತ್ವದಡಿ ಜೀವನ ಮಾಡುತ್ತಿರುವ ಮಾನವಿಯ ಮೌಲ್ಯಗಳ ಖಣಿ.

ಹೆಣ್ಣುಮಕ್ಕಳ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಇವರು ಮಹಿಳೆಯ ಅಭಿವೃದ್ಧಿ ಆಗಬೇಕು. ಅವಳಲ್ಲಿರುವ ಪ್ರತಿಭೆ ಕೌಶಲ್ಯಗಳಿಗೆ ಬೆಲೆ ಸಿಗಬೇಕು ಎನ್ನುತ್ತಾರೆ. ಇತ್ತೀಚೆಗೆ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ತುಂಬಾ ಕಳವಳಪಡುತ್ತಾ, ಸುಸಂಸ್ಕೃತ ದೇಶದಲ್ಲಿ ಇಂಥ ನೀಚಕೃತ್ಯಗಳು ನಡೆಯಬಾರದು ಇಂತಹ ದುಷ್ಟಕಾರ್ಯಗಳು ನಡೆಯದಂತೆ ಸಮಾಜ ಸಂಘಟನೆಗಳು ಎಚ್ಚರವಹಿಸಬೇಕು ಮುಖ್ಯವಾಗಿ ಪೋಷಕರು ತಮ್ಮ ಗಂಡು ಮಗುವಿಗೆ ಬದುಕಿನ ರೀತಿಯನ್ನು ತಿಳಿಸಿಕೊಡಬೇಕು. ತಾಯಿ ತನ್ನ ಮಗುವನ್ನು ಸುಸಂಸ್ಕೃತ ಪ್ರಜೆಯಾಗಿಸುವಂತೆ ಕಾಳಜಿವಹಿಸಬೇಕು. ಏಕೆಂದರೆ ಮಗುವಿಗೆ ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆಯಾಗಬೇಕು. ದುಡಿಯುವ ಹಂಬಲದಲ್ಲಿ, ಹಣ ಗಳಿಸುವ ಭರಾಟೆಯಲ್ಲಿ ಮಗುವನ್ನು ಪಾಲನೆ ಪೋಷಣೆ ಬೆಳೆವಣಿಗೆಯಲ್ಲಿ ನಿರ್ಲಕ್ಷ್ಯ ತೋರುತ್ತಿರುವುದೇ ಇಂಥದೆಲ್ಲ ಹೀನಾಕಾರ್ಯಕ್ಕೆ ದಾರಿ ಮಾಡಿಕೊಡುತ್ತಿದೆ. ನಾನು ಪ್ರತಿಯೊಬ್ಬ ತಂದೆ ತಾಯಿಯರಿಗೆ ಕಳಕಳಿಯಿಂದ ಕೇಳಿಕೊಳ್ಳವುದೇನೆಂದರೆ ಮಕ್ಕಳಿಗಾಗಿ ಆಸ್ತಿ

ಸಂಪಾದಿಸಬೇಡಿ ಮಕ್ಕಳೇ ಆಸ್ತಿಯೆಂದು ತಿಳಿದು ಬಾಳಬೇಕೆಂದು ಕಿವಿ ಮಾತನ್ನು ಹೇಳುತ್ತಾರೆ. ಪರಸ್ತ್ರೀಯರನ್ನು ಪಾರ್ವತಿಯೆಂದು ಭಾವಿಸಿದ ಶರಣರು, ಪರಸ್ತ್ರೀಯರನ್ನು ಒಲ್ಲೆನೆಂಬ ಛಲಹೊತ್ತಿದಂತೆ ನಾವು ಅವರ ಆದರ್ಶ ಪಾಲಿಸಬೇಕಾಗಿದೆ. ಒಂದಡೆ ಸರ್ವಜ್ಞನು ಹೀಗೆ ಹೇಳುತ್ತಾನೆ.

ಅನ್ಯ ಸತಿಯನು ಕಂಡು
ತನ್ನ ಹೆತ್ತವಳೆಂದು ಮನ್ನಿಸಿ । ನಡೆವ
ಪುರುಷಂಗೆ ಇಹಪರದಿ । ಮುಂದೆ
ಭಯವಿಲ್ಲ ಸರ್ವಜ್ಞ

ಎನ್ನುವಂತೆ ಪುರುಷರು. ಬಾಳಬೇಕು ಎನ್ನುತ್ತಾರೆ.

ಹೆಣ್ಣೊಬ್ಬಳು ತನ್ನ ಶಕ್ತಿ ಸಾಮರ್ಥ್ಯಗಳ ಬಲದಿಂದ ಬದುಕಬೇಕು. ಹಾಗೂ ಎಲ್ಲ ಅಡ್ಡಿ ಆತಂಕಗಳನ್ನು ಸ್ವತಃ ನಿಭಾಯಿಸಕೊಳ್ಳಬೇಕಾದರೆ ಅವಳು ಶಿಕ್ಷಿತಳಾಗಬೇಕು. ತನಗಾದ ಅನ್ಯಾಯದ ವಿರುದ್ದ ಧ್ವನಿಯೆತ್ತಬೇಕು. ಅಂದಾಗ ಮಾತ್ರ ತನ್ನನ್ನು ತಾನು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ. ಎನ್ನುತ್ತಾರೆ. ಮಹಿಳೆ ಆರ್ಥಿಕವಾಗಿ ಸಬಲಳಾಗಬೇಕೆಂದು ಬಯಸುತ್ತಾರೆ. ಈ ನಿಟ್ಟಿನಲ್ಲಿ ಅಸಹಾಯಕ ನೊಂದ ದುರ್ಬಲ ಪ್ರತಿಭಾವಂತ ಮಹಿಳೆಯರಿಗೆ ಸಬಲರಾಗುವಂತೆ ಮಾಡಿದ ಮಹಾನ್ ಮಹಿಳೆ ಇವರು. ಬರೀ ಪುರುಷರಷ್ಟೇ ಎಚ್ಚೆತ್ತು ನಡೆಯಬೇಕೆಂದಲ್ಲ ಸ್ತ್ರೀಯರು ಕೂಡ ಆಚಾರ, ವಿಚಾರ, ಸಂಪ್ರದಾಯ ಶಿಸ್ತುಪಾಲನೆ ಮುಂತಾದ ವಿಚಾರಗಳಲ್ಲಿ ಯುವ ಮಹಿಳೆಯರು ಎಚ್ಚೆತ್ತು ನಡೆಯಬೇಕು. ಆತ್ಮವಿಶ್ವಾಸದಿಂದ ನಡೆದು, ಆತ್ಮಸಾಕ್ಷಿಯಾಗಿ ಬಾಳಬೇಕು ಎನ್ನುತ್ತಾರೆ.

ಸುಲಭದಲ್ಲಿ ಸಿಗುವ ಯಶಸ್ಸಿಗೆ, ಪ್ರಶಸ್ತಿಗೆ ಪದವಿ, ಪುರಸ್ಕಾರಗಳಿಗೆ ಮರುಳಾಗಬಾರದು. ಯಶಸ್ಸು ಪಡೆಯಲು ನಿಷ್ಠೆಯಿಂದ ಪ್ರಯತ್ನಿಸಬೇಕು

ಎನ್ನುತ್ತಾರೆ. ಅಡ್ಡ ದಾರಿಗೆ ಬೆಲೆಯಿಲ್ಲ ಎನ್ನುವರು. ಅಭಿವೃದ್ಧಿ ಕೆಲಸಗಳು ಕೇವಲ ಯಶಸ್ಸಿನಿಂದಲ್ಲ. ನಮ್ಮ ಸೋಲುಗಳು ಯಶಸ್ವಿನ ಸೋಪಾನಗಳಾಗಬೇಕು. ಸ್ಪರ್ಧೆಯಲ್ಲಿ ಗೆದ್ದವ ಆ ಸ್ಪರ್ಧೆಯನ್ನು ಮಾತ್ರ ಗೆಲ್ಲುತ್ತಾನೆ. ಸೋತವ ಜೀವಾನುಭವ ಪಡೆದು ಜೀವನವನ್ನೆ ಗೆಲ್ಲುತ್ತಾನೆ. ಜೀವನ ಗೆಲ್ಲುವರು ನಾವಾಗಬೇಕೆನ್ನುತ್ತಾರೆ.

ಗುರಮ್ಮ ಎಂಬ ಹೆಸರು ಎರಡು ನಾಮಪದಗಳಿಂದ ಕೂಡಿದ್ದು ವಿಶೇಷಾರ್ಥ ಹೊಂದಿದೆ. ಮತ್ತು ಅತ್ಯಂತ ಜವಾಬ್ದಾರಿಯುತ ಪದಗಳಾಗಿವೆ. ಈ ಗುರಮ್ಮ ಅನೇಕರ ಬಾಳಿನಲ್ಲಿ ಗುರುವಾಗಿ, ಹಲವರಿಗೆ ಅಮ್ಮಳಾಗಿ ಎಲ್ಲರ ಮನದಲ್ಲಿ ಅಚ್ಚಳಿಯದಂತೆ ಸ್ಥಾನ ಗಿಟ್ಟಿಸಿಕೊಂಡಿದ್ದಾರೆ.

ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿಯವರ ಬದುಕಿನ ಘಟನಾವಳಿಗಳು

ಹೆಸರು : ಶ್ರೀಮತಿ. ಗುರಮ್ಮ ಸಿದ್ದಾರೆಡ್ಡಿ

ಜನ್ಮ ದಿನಾಂಕ : ೦೪-೦೨-೧೯೪೬

ವಿದ್ಯಾರ್ಹತೆ : ಎಂ.ಎ. (ಇಂಗ್ಲೀಷ್) ರಾಷ್ಟ್ರಭಾಷಾ ಹಿಂದಿ.

ಖಾಯಂ ವಿಳಾಸ : ಶ್ರೀಮತಿ. ಗುರಮ್ಮ ಸಿದ್ದಾರೆಡ್ಡಿ
ಡಾ. ಸಿದ್ದಾರೆಡ್ಡಿ, ಎಂ.ಐ.ಜಿ-೨೧, ಕೆ.ಎಚ್.ಬಿ
ಕಾಲೋನಿ, ಬೀದರ-೫೮೫೪೦೧, (ಕರ್ನಾಟಕ)
ದೂರವಾಣಿ ಸಂಖ್ಯೆ: ೦೮೪೮೨-೨೨೯೪೪
ಮೊ: ೯೮೮೬೬೫೯೮೪೯

ಸಂಸ್ಥಾಪಕ ಅಧ್ಯಕ್ಷರು : ಕಿತ್ತೂರು ರಾಣಿ ಚನ್ನಮ್ಮ ಮಹಿಳಾ ಮಂಡಳ
ಬೀದರ-೧೯೮೫ರಿಂದ ಈಗಿನವರೆಗೆ

ಅಧ್ಯಕ್ಷರು : ನಗರ ಮಹಿಳಾ ಮಂಡಳಗಳ ಒಕ್ಕೂಟ
ಬೀದರ -೧೯೯೫ರಿಂದ ಇಲ್ಲಿಯವರೆಗೆ.

ಸಂಸ್ಥಾಪಕ ಸದಸ್ಯರು : ಕುಟುಂಬ ಯೋಜನಾ ಸಂಘ, ಬೀದರ.

ಸದಸ್ಯರು : ಜಿಲ್ಲಾ ಅಂಧತ್ವ ನಿವಾರಣಾ ಸಮಿತಿ, ಬೀದರ
೧೯೯೮ರಿಂದ ೨೦೦೪ ರವರೆಗೆ.

ಸದಸ್ಯರು : ದೂರವಾಣಿ ಸಲಹಾ ಸಮಿತಿ, ಗುಲ್ಬರ್ಗಾ

ವಿಭಾಗ. ೧೯೮೯ ರಿಂದ ೧೯೯೧.

ಸದಸ್ಯರು : ಸ್ಥಳೀಯ ಆಡಳಿತ ಸಮಿತಿ, ಅಕ್ಕಮಹಾದೇವಿ ಕಾಲೇಜು, ಬೀದರ ೧೯೮೬ ರಿಂದ ೧೯೮೮.

ಸದಸ್ಯರು : ಗ್ರಾಹಕರ ಪರಿಹಾರ ಘೋರಂ, ಬೀದರ (District Consumer Forum, Bidar) (ಅರೆ ನ್ಯಾಯಾಧಿಕರಣ ಇಲಾಖೆ).

ಸದಸ್ಯರು : ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ೧೯೭೬.

ಜಿಲ್ಲಾ ಮುಖ್ಯ ಆಯುಕ್ತರು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ೨೦೧೬ ರಿಂದ ಇಲ್ಲಿಯವರೆಗೆ.

ಸದಸ್ಯರು : ವನಿತ್ ವಿಕಾಸ ವಿವಿಧ ಉದ್ದೇಶಗಳ ಸಂಸ್ಥೆ, ಬೀದರ ೧೯೮೦-೧೯೯೮.

ನಿರ್ದೇಶಕರು : ಜಿಲ್ಲಾ ಸಹಕಾರ ಸಂಘ (District Co-operative Union) ೧೯೯೦ -೯೬.

ನಿರ್ದೇಶಕರು : ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ನೌಬಾದ್

ಸದಸ್ಯರು : ಗಾಂಧಿಗಂಜ್ ಸಹಕಾರ ಸಂಘ, ಬೀದರ.

ಸದಸ್ಯರು : ಹಾಲು ಸಹಕಾರ ಸಂಘ, ಅಣದೂರ.

ಸಂಸ್ಥಾಪಕ ಅಧ್ಯಕ್ಷರು : ಇನ್ನರ್ ವೀಲ್ ಕ್ಲಬ್, ಬೀದರ್ ೧೯೮೨-೮೩.

ಸಭಾಪತಿ : ಇನ್ನರ್ ವೀಲ್ ಜಿಲ್ಲಾ ೩೧೬, ೧೯೮೯. (Chair Person)

ಸದಸ್ಯರು : ರಾಷ್ಟ್ರೀಯ ಮಟ್ಟದ ಕರುಣಾ ಸಂಸ್ಥೆ.

ಸದಸ್ಯರು : ರಾಜ್ಯ ಮಟ್ಟದ ಸ್ನೇಹಾ ಸಂಸ್ಥೆ

ಉಪಾಧ್ಯಕ್ಷರು : ರಾಷ್ಟ್ರೀಯ ಅಖಿಲ ಭಾರತ ವೀರಶೈವ ಮಹಾಸಭಾ ಸಮಿತಿ, ಬೆಂಗಳೂರು.

ಸದಸ್ಯರು : ಬಸವ ಮಹಾಮನೆ, ಬೀದರ್.

ಸದಸ್ಯರು ಕಾರ್ಯನಿರ್ವಾಹಕ ಸಮಿತಿ : ಕರ್ನಾಟಕ ರಾಜ್ಯ ಸಾಕ್ಷರತಾ ಸಮಿತಿಯಲ್ಲಿ ಸೇವೆ.

ನಿರ್ದೇಶಕರು : ಪ್ರವಾಸ ಮತ್ತು ಯುವ ಮತ್ತು ಕ್ರೀಡಾ ಸೇವೆ. ಕನ್ನಡ ಮತ್ತು ಸಂಸ್ಕೃತಿ ಎಸ್.ಸಿ.ಸಿ. ವಾರ್ತಾ ಮತ್ತು ಪ್ರಸಾರ ಸಮಿತಿ.

ಸದಸ್ಯರು : ಜಿಲ್ಲಾ ವಿಜಿಲೆನ್ಸ್ ಸಮಿತಿ, ಬೀದರ. (ಲೋಕಸಭಾ ಸದಸ್ಯರ) ಅಧೀನದಲ್ಲಿ.

ಸದಸ್ಯರು : ಕೇಂದ್ರ ಸರ್ಕಾರದ ಕಾರ್ಮಿಕ ಸಚಿವಾಲಯದ ಜಂಡರ್ ಈಕ್ವಿಟಿ ಸಲಹಾ ಸಮಿತಿಯ ಸದಸ್ಯರು.

ಸದಸ್ಯರು : ಗ್ರಾಮೀಣ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಜನಗಳ ಕ್ರಿಯಾಶೀಲತೆಯ ಸಮಿತಿಯ ಸದಸ್ಯರು, ೧೯೮೦-೯೧ (CAPART).

ಸದಸ್ಯರು : ಸಮಾಜ ಕಲ್ಯಾಣ ಸಲಹಾ ಮಂಡಳಿ, ಕರ್ನಾಟಕ ರಾಜ್ಯ ೧೯೮೯-೧೯೯೨.

ಸದಸ್ಯರು : ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ ೨೦೦೫ ರಿಂದ ೨೦೧೭ ರವರೆಗೆ.

ಸದಸ್ಯರು : ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ, ಬೆಂಗಳೂರು.

ಗೌರವ ಅಧ್ಯಕ್ಷರು : ಡಾ. ಎಸ್.ಎಸ್.ಸಿದ್ದರೆಡ್ಡಿ ಫೌಂಡೇಶನ್, ಬೀದರ.

ಸಭಾಪತಿ : ಕರ್ನಾಟಕ ರಾಜ್ಯ ಸರ್ಕಾರದ ಟಾಸ್ಕ್‌ಫೋರ್ಸ್ (Chair Person) ಮಹಿಳಾ ಸಬಲೀಕರಣ ಸಮಿತಿಯ ಸಭಾಪತಿಗಳು. ಮಾರ್ಚ್ ೨೦೦೦ದಿಂದ ೨೦೦೩ ರವರೆಗೆ, ರಾಜ್ಯ ಸಚಿವರ ಸ್ಥಾನಮಾನ,

(ಕರ್ನಾ ಟಕ ಸರ್ಕಾರದಿಂದ ನೀಡಲಾಗಿತ್ತು)

ವಿವಿಧ ಶಾಖೆಗಳಲ್ಲಿ ಸಲ್ಲಿಸಿದ ಸೇವೆಗಳು : ಶಿಕ್ಷಣ, ವಯಸ್ಕರ ಶಿಕ್ಷಣ, ಗ್ರಾಮೀಣ ಪ್ರದೇಶಗಳಲ್ಲಿ ಸೇವೆ, ನ್ಯಾಯಾಂಗದ ಸೇವೆ, ಕುಟುಂಬ ಯೋಜನೆ, ಕೈಗಾರಿಕೆ, ರಾಷ್ಟ್ರೀಯ ಏಕತೆ, ಸಾಂಸ್ಕೃತಿಕ ಚಟುವಟಿಕೆಗಳು, ಅಂಗವಿಕಲರ ಪುನರ್‌ವಸತಿ ಇತ್ಯಾದಿ ಕ್ಷೇತ್ರಗಳಲ್ಲಿ ಸೇವೆ.

ಬರಹಗಳು : ರಾಜ್ಯಮಟ್ಟದ, ರಾಷ್ಟ್ರೀಯ ಮಟ್ಟದ ಹಲವಾರು ಪತ್ರಿಕೆಗಳಲ್ಲಿ ಲೇಖನಗಳು, ಅನೇಕ ಸ್ಮರಣ ಸಂಚಿಕೆಗಳಲ್ಲಿ ಚಿಂತನಾರ್ಹ ಲೇಖನಗಳು ಪ್ರಕಟವಾಗಿವೆ.

ಪ್ರಶಸ್ತಿಗಳು : ಭಾಲ್ಕಿ ಶ್ರೀಗಳಿಂದ ಶ್ರೀ ಚನ್ನಬಸವ ಪ್ರಶಸ್ತಿ-೨೦೦೧ ಜಿಲ್ಲಾ ಪ್ರಶಸ್ತಿ

ರಾಜ್ಯ ಪ್ರಶಸ್ತಿ : ಸುರ್ವೆ ಕಲ್ಚರಲ್ ಅಕಾಡೆಮಿ ಪ್ರಶಸ್ತಿ-೨೦೦೨

ರಾಜ್ಯ ಪ್ರಶಸ್ತಿ : ಡಾ॥ ರಾಜಕುಮಾರ ಪ್ರಶಸ್ತಿ, ಸಮಾಜ ಸೇವೆ, ಹಾಸನ ಜಿಲ್ಲೆ-೨೦೦೨

ರಾಜ್ಯ ಪ್ರಶಸ್ತಿ : ಕಿತ್ತೂರ ರಾಣಿ ಚನ್ನಮ್ಮಾ ರಾಜ್ಯ ಪ್ರಶಸ್ತಿ-೨೦೦೫ (ಕರ್ನಾಟಕ ಸರ್ಕಾರದಿಂದ)

ರಾಜ್ಯ ಪ್ರಶಸ್ತಿ : ಯಶೋಧರ ದಾಸಪ್ಪ ಪ್ರಶಸ್ತಿ, ಕರ್ನಾಟಕ ಎನ್.ಜಿ.ಓ. ಸಂಸ್ಥೆಯಿಂದ-೨೦೦೫

ರಾಜ್ಯ ಪ್ರಶಸ್ತಿ : ಜಗಜ್ಯೋತಿ ಶ್ರೀ ಬಸವೇಶ್ವರ ಸದ್ಭಾವನಾ ಪ್ರಶಸ್ತಿ, ವೀರಶೈವ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು-೨೦೦೬

ಜಿಲ್ಲಾ ಪ್ರಶಸ್ತಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಸಮಾಜ ಸೇವೆ)

ಅಂತರರಾಷ್ಟ್ರೀಯ ಪ್ರಶಸ್ತಿ : ಏಷಿಯಾ ಫೆಸಿಫಿಕ್ ಪ್ರಶಸ್ತಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ-೨೦೧೮

ಪುಸ್ತಕ ದಾಸೋಹಿಗಳು



ಶ್ರೀಮತಿ ಶೈಲಜಾ ಶ್ರೀ ಕಲ್ಯಾಣರಾವ ಚಳಕಾಪೂರೆ ಮಗಳು ಕು. ಸೌಮ್ಯಶ್ರೀ, ಮಗ ಚಿ॥ ಶಿವಶಂಕೇತ

ಶ್ರೀ ಕಲ್ಯಾಣರಾವ ಚಳಕಾಪೂರೆ

ಬಸವಾದಿಶರಣ ಕಾಯಕ ನಿಷ್ಠೆಯ, ದಾಸೋಹ ಬಾವ ಬದುಕಲ್ಲಿ ಅಳವಡಿಸಿ ಕೊಂಡಿರುವ ಶ್ರೀ ಕಲ್ಯಾಣರಾವ ಚಳಕಾಪೂರೆ ನಮ್ಮ ಮಧ್ಯದ ಅಪರೂಪದ ವ್ಯಕ್ತಿ. ಶಿಸ್ತು, ದಕ್ಷತೆ, ಪ್ರಾಮಾಣಿಕತೆಗೆ ಹೆಸರಾದ ಅವರು ಶುದ್ಧ ವಿಚಾರವಾದಿಗಳು, "ವಚನ ಸಾಹಿತ್ಯದಲ್ಲಿ ವಿಜ್ಞಾನ" ಇವರ ಆಸಕ್ತಿಯ ಕ್ಷೇತ್ರ ಮೂಲತಃ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಚಳಕಾಪೂರದವರಾದ ಇವರು ಎಮ್.ಎ. ಪದವೀಧರರು. ಪತಿಗೆ ತಕ್ಕ ಪತ್ನಿಯಾದ ಶ್ರೀಮತಿ ಶೈಲಜಾ ಎಮ್.ಎ. ಪದವೀಧರರಾಗಿದ್ದು ಇವರ ಎಲ್ಲ ಚಟುವಟಿಕೆಗಳಿಗೆ ಬೆನ್ನ ಹಿಂದಿನ ಬೆಳಕಾಗಿ ಸಮಗ್ರ ಜನಹಿತ ಕಾರ್ಯಗಳಿಗೆ ನೆರವಾಗಿ ನಿಂತವರು, ಸಹ ಶಿಕ್ಷಕರಾದ ಇವರು ಜಿಲ್ಲಾ ಪಂಚಾಯತ ಅಧ್ಯಕ್ಷರ ಆಪ್ತ ಸಲಹಾ ಕಾರ್ಯದರ್ಶಿಗಳಾಗಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಲ್ಲದೇ ಸಿ.ಆರ್.ಪಿ. ಇದ್ದಾಗ ಹಲಬರ್ಗಾ ಮಾದರಿ ಸಂಪನ್ಮೂಲ ಕೇಂದ್ರವಾಗಿ ಪರಿವರ್ತಿಸಿದ್ದು, ಜೈಲಿನಲ್ಲಿ 10ವರ್ಷಗಳ ಕಾಲ ಅರಿವು ಕಾರ್ಯಕ್ರಮ ನಡೆಸಿಕೊಟ್ಟಿದ್ದು, ಪ್ರಸ್ತುತ ಸಿ.ಆರ್.ಪಿ.ಯಾಗಿ, ತಾಲ್ಲೂಕು ಕ.ಸಾ.ಪದ ಕಾರ್ಯದರ್ಶಿಯಾಗಿ, ಅಖಿಲಭಾರತ ಶರಣ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿತಿದ್ದು, ಸದ್ಯ ಡಿ.ಡಿ.ಪಿ.ಐ. ಕಛೇರಿಯಲ್ಲಿ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನಾ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೌಲ್ಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಾಹಿಸಿದ್ದು ಆಯಾ ಹುದ್ದೆಗಳಿಗೆ ಗೌರವ ತಂದುಕೊಟ್ಟಿದ್ದಾರೆ.

ಶಿಕ್ಷಣ ಒಂದು ವ್ಯಾಪಾರೀಕರಣವಾಗಿರುವ ಈ ಹೊತ್ತಿನಲ್ಲಿ ಅದನ್ನು ಒಂದು ಮೌಲ್ಯವಾಗಿ ನೋಡುತ್ತಲೆ ಶಿಕ್ಷಣವನ್ನು ಮಾನವೀಕರಣಗೊಳಿಸಲು ಯತ್ನಿಸುತ್ತಿರುವರು. ಇವರ ಸೇವೆ ಸಾಧನೆಗಳನ್ನು ಪರಿಗಣಿಸಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ. ನಮ್ಮ ಮಧ್ಯದ ಅಪರೂಪದ ಸಂಶೋಧಕರು, ಸಾಹಿತಿಗಳಾದ **ಶ್ರೀಮತಿ ಸುನಿತಾ ದಾಡಗೆ** ಅವರು ಬರೆದ **ಜನಪರ ಕಾಳಜಿ ಗುರಮ್ಮಾ ಸಿದ್ದಾರೆಡ್ಡಿ ಜೀವನ ಸಾಧನೆ** ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಗುರಮ್ಮಾ ಸಿದ್ದಾರೆಡ್ಡಿ ಯವರು ಬೀದರನಲ್ಲಿ ಬಹುದೊಡ್ಡ ಸಮಾಜೋರಾಜಕೀಯ ಕ್ರಾಂತಿಗೈದವರು. ಸಮಸಮಾಜ ರೂಪಿಸಬೇಕೆಂಬ ದೇಶಿಚಿಂತನೆಯ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ. ಸಿದ್ಧಾರೆಡ್ಡಿ ಫೌಂಡೇಶನ ಸಂಸ್ಥೆಯ ಮೂಲಕ ಅನೇಕರ ಬದುಕಿಗೆ ಬೆಳಕಾಗಿದ್ದಾರೆ. ಜೊತೆಗೆ ಕಲೆ ಸಾಹಿತ್ಯಕ್ಕೆ ಉದಾರ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಅವರ ಜೀವನ ಸಾಧನೆ ಕುರಿತು ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ.

ಸಹೃದಯರು ಸಹಸ್ಪಂದಿಸಿ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ

ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ